ಕಲ್ಯಾಣ ಕಿರಣ ವಿಶೇಷ ಸಂಚಿಕೆ

ಶರಣ ಜ್ಯೋತಿ

ಸಂಪುಟ ೩೧ | ಬಸವ ಶಕೆ-೮೬೬ | ಆಜೀವ ಸದಸ್ಯತ್ವ : ೫೦೦ ರೂ

ಸಂಚಿಕೆ ೧ | ಜನವರಿ - ೨೦೦೦ | ವಾರ್ಷಿಕ ಚಂದಾ : ೫೦ ರೂ

ಶರಣ ಪಥಕ್ಕೆ ಕರೆ

ಬಸವ ಧರ್ಮದ
ಅರುಣೋದಯವು
ಬಾಳ ದಿಗಂತದಿ
ಸಾರಿ ಬರುತಲಿದೆ.
ಲಿಂಗದೇವನ
ಕರುಣೆಯ ಕಿರಣವು
ಭವ ಬಂಧನವಾ
ನೀಗಲು ಬರುತಿದೆ ॥
ಬನ್ನಿರಿ ಶರಣರೆ
ಬನ್ನಿರಿ ಬೇಗನೆ
ಬಿನ್ನಹ ಮಾಡಿ
ಕರೆವೆವು ನಿಮ್ಮನು
ಗುರುಬಸವಣ್ಣನ
ಪಥದಲಿ ನಡೆದು
ಲಿಂಗದೇವನಾ
ಒಲುಮೆಯ ಹೊಂದಿರಿ.

- ಬಸವಾತ್ಮಜೆ

ಮಡಿವಾಳ ಮಾಚಿದೇವರ ಕಾಲಜ್ಞಾನ

೧. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ

- ಪದ್ಯ ೭, ಪುಟ ೧೭೩

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ, ಹರನಾಜ್ಞೆ ಬಂತು
ಜರಿಯಲು ಬೇಡ । ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

- ಪದ್ಯ ೮, ಪುಟ ೧೭೩

೩. ಪರಿಧಾವಿ * ಎಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ, ನರಕ ತಪ್ಪದು

*ಪರಿಧಾವಿ ಸಂವತ್ಸರ - ಕ್ರಿ.ಶ. ೨೦೩೨

- ಪದ್ಯ ೧೦, ಪುಟ ೧೭೪

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ವಿಶೇಷ ಸಂಚಿಕೆ ★

ಶರಣ ಜ್ಯೋತಿ

ಸಂಪುಟ ೩೧ | ಬಸವ ಶಕೆ-೮೬೬ | ಆಜೀವ ಸದಸ್ಯತ್ವ : ೫೦೦ ರೂ

ಸಂಚಿಕೆ ೧ | ಜನವರಿ - ೨೦೦೦ | ವಾರ್ಷಿಕ ಚಂದಾ : ೫೦ ರೂ

ಕಿರಣಗನ್ನಡಿ

KALYANA KIRANA - Reg No. 19988/70. Monthly Magazine printed and published by K. Shambulingaiah at Prabhudeva Printing Press, Basava Gangotri, Kumbalagodu, Bangalore -560 074, Phone : 8437234

ಶರಣ ಮೇಳಕ್ಕೆ ಸ್ವಾಗತ

ಜನ್ಮ ಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬಂದಿರುವ ಶರಣರಿಗೆ ಸ್ವಾಗತ ॥ ಪ ॥

ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ॥ ಅ.ಪ ॥

ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು
ಓ ದಿವ್ಯ ಮೇಳವು ಈ ಶರಣ ಮೇಳವು ॥ ಅ.ಪ ॥

ಶ್ರೀ ಸಂಗಮೇಶನ ಭವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯ ಕ್ಷೇತ್ರ ಸಂಗಮ
ಮಲಪ್ರಭೆ - ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ.
ಓ ದಿವ್ಯ ಕ್ಷೇತ್ರವು ಈ ಧರ್ಮ ಕ್ಷೇತ್ರವು ॥ ೧ ॥

ಬಸವ ಧರ್ಮ ಪೀಠವು ಕೈಬೀಸಿ ಕರೆಯುತಿದೆ
ಬಸವ ಪಿತರ ಸಂತಾನಕೆ ತೌರ ಪ್ರೀತಿ ತೋರುತಿದೆ.
ಲಿಂಗಾನಂದ ಗುರುಗಳ ಕ್ರಾಂತಿವಾಣಿ ಮೊರೆಯುತಿದೆ
ಮಾತೆ ಮಹಾದೇವಿ ತಾಯ ಮಾತೃವಾಣಿ ಉಲಿಯುತಿದೆ
ಓ ಬಸವ ವಾಣಿಯು, ಈ ದಿವ್ಯ ವಾಣಿಯು ॥ ೨ ॥

ಬಸವ ಕ್ರಾಂತಿ ದಿವ್ಯದಿನದಿ ನಾವು-ನೀವು ಸೇರುವಾ
ಗುರುಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಬಸವ ಧರ್ಮ ಅರಿಯುವ ಬಸವ ಕಿರಣವಾಗುವ
ಬಸವ ಧರ್ಮ ಬೆಳೆಸಲು ಸಂಕಲ್ಪ ಹೊತ್ತು ಸಾಗುವ
ಓ ದಿವ್ಯ ಕ್ಷೇತ್ರವು ಈ ಧರ್ಮ ಕ್ಷೇತ್ರವು ॥ ೩ ॥

ತಾಯಿ ನೀಲಲೋಚನೆಯ ಕಾಲಜ್ಞಾನ

೧. ಕಪ್ಪಡಿ ಸಂಗಮ ತಪ್ಪದೆ ಹೇಳಿದ
ಅಪ್ಪ ಬಸವಣ್ಣ ಬರುವುದನು ಸುವ್ವಿ ॥
ಯೇಳನೂರು ಎಪ್ಪತ್ತು* ವರುಷಕ್ಕೆ ಬರುತಾನೆ ಸುವ್ವಿ ॥ ಪದ್ಯ ೧೯, ಪುಟ ೧೦

೨. ಬಸವಣ್ಣ ಬರುವಾಗ ಶಶಿಧರನ ಭಕ್ತರು
ಕುಶಲದ ನುಡಿಗಳ ನುಡಿದಾರು ಸುವ್ವಿ
ಮನೆ ಮನೆಗೆ ಬಸವನ ಉತ್ಸವ * ಮೆರೆದಾವು ಸುವ್ವಿ ॥ ಪದ್ಯ ೪೮, ಪುಟ ೧೨

* ಕ್ರಿ.ಶ. ೧೧೯೬ + ೭೭೦ = ೧೯೬೬ * ಬಸವೇಶ್ವರ ಪೂಜಾ ವ್ರತ / ಶರಣರ ಜಯಂತಿಗಳು

Digitalized by e-Sahithya Documentation Forum
Sponsored by Sarayu Foundation Trust

13ನೇ ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಧ್ವನಿಸುರುಳಿಗಳು

1. ವಚನ ಪರುಷ : 60 ನಿಮಿಷ

ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಶಿವಯೋಗಿ ಸಿದ್ಧರಾಮೇಶ್ವರ, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ವೀರವಿರಾಗಿಣಿ ಅಕ್ಕಮಹಾದೇವಿಯ ವಚನಗಳ ಧ್ವನಿಸುರುಳಿ ಬೆಲೆ 30ರೂ.

2. ಬಸವ-ಲಿಂಗ ಸ್ತವನ : 60 ನಿಮಿಷ

ಒಂದು ಬದಿಯಲ್ಲಿ ಸೃಷ್ಟಿಕರ್ತ ಪರಮಾತ್ಮನ ಸ್ತೋತ್ರ, ಇನ್ನೊಂದು ಬದಿಯಲ್ಲಿ ಧರ್ಮಪಿತ ಬಸವಣ್ಣನವರ ಸ್ತುತಿ ಮತ್ತು ಭಕ್ತಿಗೀತೆಗಳು. ಬೆಲೆ 30ರೂ.

3. ನೆನಹು : ಸಂಜೆಯ ವೇಳೆ ಮಾಡುವ ಸಂಕ್ಷಿಪ್ತ ಪ್ರಾರ್ಥನೆ ಒಂದು ಬದಿಯಲ್ಲಿ, ಇನ್ನೊಂದು ಬದಿಯಲ್ಲಿ ಸರ್ಪಭೂಷಣ ಶಿವಯೋಗಿಗಳ ಶ್ರೀಗಿರಿಯ ಸುಕ್ಷೇತ್ರ, ಮಾತಾಜಿಯವರು ಬರೆದ ಓ ಆತ್ಮನೇ ಆಗೂ ನೀ ಶರಣ, ಮುಂತಾದ ತತ್ತ್ವದ ಪದಗಳು. ಸಮಯ 60 ನಿಮಿಷ. ಬೆಲೆ 30ರೂ.

4. ಗಣಗೀತೆಗಳು : 60 ನಿಮಿಷ.

ಸಮೂಹ ಗೀತೆಗಳು; ಗುರು ಪೂಜೆ, ಮೆರವಣಿಗೆ, ಪಥಸಂಚಲನ, ಶವಯಾತ್ರೆ ಮುಂತಾದ ಸಮಯದಲ್ಲಿ ಹಾಡಬಹುದಾದ ಗಣಗೀತೆಗಳು. ಬೆಲೆ 30 ರೂ.

5. ಸಿದ್ಧರಾಮೇಶ್ವರ ವಿರಚಿತ ಸ್ತೋತ್ರ ತ್ರಿವಿಧಿ : 60 ನಿಮಿಷ.

ಯೋಗಿನಾಥ ವಚನ ಮುದ್ರಿಕೆಯೊಡನೆ ಶಿವಯೋಗಿ ಸಿದ್ಧರಾಮೇಶ್ವರರು ರಚಿಸಿದ ಬಸವ ಸ್ತೋತ್ರ ತ್ರಿವಿಧಿಯಿಂದ ಆಯ್ದ ಗೀತೆಗಳು ಒಂದು ಬದಿಗೆ, ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಶರಣರೆಲ್ಲರ ಸ್ತೋತ್ರ ಮಿಶ್ರ ಸ್ತೋತ್ರ; ತ್ರಿವಿಧಿಯಿಂದ ಆಯ್ದ ಗೀತೆಗಳು. ಇನ್ನೊಂದು ಬದಿಯಲ್ಲಿ. ಬೆಲೆ 30 ರೂ.

6. ವಚನ ಗಂಗಾ : ಮರಾಠಿಯಲ್ಲಿ ವಚನಗಳ ಕೆಸೆಟ್, ವಚನ ಪರುಷ ಧ್ವನಿಸುರಳಿಯ ಭಾಷಾಂತರಗೊಂಡ ಶರಣರ ವಚನಗಳು. 60 ನಿಮಿಷ, ಬೆಲೆ 30 ರೂ.

7. ಉಪಾಸನಾ - 60 ನಿಮಿಷ :

ವಿಶ್ವಗುರು ಬಸವಣ್ಣನವರ ಮತ್ತುಸೃಷ್ಟಿಕರ್ತನ ಸ್ತೋತ್ರ-ರಾಗಮಾಲಿಕೆಯಲ್ಲಿ ಬೆಲೆ 30 ರೂ.

8. ಜೀವ ಸಂಗಮ : ಬಸವ ತತ್ತ್ವದ ಪ್ರಕಾರ ವಿವಾಹದ ವಿಧಿ ವಿಧಾನ. ನಿರೂಪಣೆ : ಪೂಜ್ಯ ಮಾತಾಜಿಯವರಿಂದ ೬೦ ನಿಮಿಷ, ಬೆಲೆ 30 ರೂ.

(ಈ ಹೊಸ ನಿರ್ಮಾಣಗಳಲ್ಲದೆ ಹಿಂದೆ ತಯಾರಿಸಲ್ಪಟ್ಟ ಭಕ್ತಿಗೀತೆಗಳು, ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನದ ಧ್ವನಿಸುರುಳಿಗಳು ಮಾರಾಟಕ್ಕೆ ಲಭ್ಯವಿರುತ್ತವೆ.)

ತಯಾರಕರು : ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್, ಎರಡನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 10



ಸಂಪಾದಕೀಯ : ಕಳಕಳಿಯ ಕರೆ

2001ನೇ ಇಸವಿಯ ಜನಗಣತಿ ಮತ್ತು ಲಿಂಗಾಯತ ಸಮಾಜ

- ಮಾತಾಜಿ

ರಾಜ್ಯ ಜನಗಣತಿಯ ನಿರ್ದೇಶಕ ಶ್ರೀ ಎಚ್. ಶಶಿಧರ್ ಅವರು, ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳ ನೋಂದಣಿ ಅಧಿಕಾರಿಗಳ ರಾಜ್ಯ ಮಟ್ಟದ ಕಾರ್ಯಾಗಾರದ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿ ಹೇಳಿದ್ದಾರೆ. ''೨೦೦೧ರಲ್ಲಿ ನಡೆಯುವ ಜನಗಣತಿ ಮಹತ್ವಪೂರ್ಣವಾದುದು. ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿ ಕೇವಲ ತಲೆ ಎಣಿಕೆಯಲ್ಲ ; ಜನಗಣತಿಯಿಂದ ದೊರಕುವ ಅಂಕಿ ಅಂಶಗಳ ಆಧಾರದ ಮೇಲೆ ಸರ್ಕಾರವು ಯೋಜನೆಗಳನ್ನು ರೂಪಿಸುತ್ತದೆ.'' ಎಂದೂ ನುಡಿದಿದ್ದಾರೆ. (ವಿಜಯ ಕರ್ನಾಟಕ ದಿ. ೨೧-೧೨-೯೯)

ಬೇರೆಬೇರೆಯವರು ಬೇರೆ ಬೇರೆ ದೃಷ್ಟಿಯಿಂದ ವಿಶ್ಲೇಷಿಸಿದರೆ ನಾವು ಲಿಂಗಾಯತ ಸಮಾಜದ ದೃಷ್ಟಿಯಿಂದ ಆಲೋಚಿಸಬೇಕಾಗಿದೆ. ೧೦ ವರ್ಷಗಳಿಗೊಮ್ಮೆ ಧರ್ಮವಾರು ಜನಗಣತಿಯಾಗಿ ಬರುವ ಈ ಸಂದರ್ಭದ ಸದುಪಯೋಗ ಮಾಡಿಕೊಳ್ಳದೆ ಹೋದರೆ ನಿಜಕ್ಕೂ ಮೂರ್ಖತನವಾದೀತು. ಹಿಂದಿನ ಜನಗಣತಿಯಲ್ಲಿ ಲಿಂಗಾಯತರು ಬಹಳ ತಪ್ಪುಗಳನ್ನು ಎಸಗಿದ್ದಾರೆ.

೧. ಕೆಲವರು ಲಿಂಗಾಯತ ಎಂದು, ಮತ್ತೆ ಕೆಲವರು ವೀರಶೈವ ಎಂದು ಬರೆಸಿರುವುದೇ ಅಲ್ಲದೆ ಜಂಗಮ ಇತ್ಯಾದಿ ಉಪಪಂಗಡಗಳನ್ನು ಬರೆಸಿದ್ದಾರೆ. ಮಹಾರಾಷ್ಟ್ರದಲ್ಲಿ ಲಿಂಗಾಯತರ ಜನಸಂಖ್ಯೆ ೫೦೦೦ (ಐದು ಸಾವಿರ) ಎಂದು ೧೯೯೧ರ ಜನಗಣತಿಯಲ್ಲಿ ದಾಖಲಾಗಿದೆ. ದೆಹಲಿಯಲ್ಲಿ ಒಬ್ಬ ಲಿಂಗಾಯತ ಎಂದು ದಾಖಲಾಗಿದೆ.

೨. ಮೇಲ್ಕಂಡ ತಪ್ಪು ಹೇಗಾಗಿದೆ ಎಂದರೆ ಹಿಂದು-ಲಿಂಗಾಯತ ಎಂದು ಬರೆಸಿದರೆ ಆಗ ಹಿಂದು ಒಂದು ಧರ್ಮ, ಲಿಂಗಾಯತವು ಒಂದು ಜಾತಿ ಎಂದು ಭಾವಿಸಲಾಗುತ್ತದೆ. ಆಗ ದಾಖಲೆಗೆ ಹಿಂದು ಮಾತ್ರ ಹೋಗಿ, ಲಿಂಗಾಯತವು ತಿರಸ್ಕೃತವಾಗುತ್ತದೆ. ಏಕೆಂದರೆ ಜನಗಣತಿಯ ನಿಯಮಾವಳಿಯಲ್ಲಿ ಸ್ಪಷ್ಟ ಸೂಚನೆ ಇದೆ, ''ಜನಗಣತಿ ಕೇವಲ ಧರ್ಮಾಧಾರಿತವಾಗಿರುತ್ತದೆ. ಜಾತಿ ಆಧಾರಿತವಲ್ಲ. ಆದ್ದರಿಂದ ಧರ್ಮದ ಹೆಸರು ಮಾತ್ರ ಬರೆಯಬೇಕು'' ಎಂಬುದೇ ಆ ಸೂಚನೆ. ಹಿಂದೂ ಲಿಂಗಾಯತ ಎಂದು ಬರೆಸಿದಾಗ ಅದೂ ಸಹ ಹಿಂದು-ಒಕ್ಕಲಿಗ, ಹಿಂದು-ಮಡಿವಾಳ, ಹಿಂದು-ಕುರುಬದಂತೆ

Digitalized by e-Sahithya Documentation Forum
Sponsored by Sarayu Foundation Trust

ಹಿಂದು ಸಮಾಜದ ಒಳಗೆ ಬರುವ ಒಂದು ಪಂಗಡ, ಜಾತಿ ಗುಂಪು ಎಂದು ಅರ್ಥವಾಗುತ್ತದೆ. ಜನಗಣತಿಯಲ್ಲಿ ಈ ಜಾತಿಗಳಾವುವೂ ದಾಖಲಿಸಲ್ಪಡದೆ 'ಹಿಂದು' ಮಾತ್ರ ಧರ್ಮವಾಚಕವಾಗಿ ಬಳಕೆಯಾಗುವುದು.

೩. ವಾಸ್ತವಿಕವಾಗಿ ಹೇಳಬೇಕೆಂದರೆ 'ಹಿಂದು' ಒಂದು ವಿಶಿಷ್ಟ ಧರ್ಮವಲ್ಲ. ಅನೇಕ ವಿದ್ವಾಂಸರು ಹೇಳುವಂತೆ, ಪೂಜ್ಯ ಮಹರ್ಷಿ ದಯಾನಂದ ಸರಸ್ವತಿಯವರು ಹೇಳುವಂತೆ ಅದು ಆರ್ಯ ಧರ್ಮ ; ಮತ್ತೆ ಕೆಲವರ ಪ್ರಕಾರ ವೈದಿಕ ಧರ್ಮ. ಆರ್ಯ ಎಂದು ಗೌರವ ಸೂಚಕವಾಗಿ ದಯಾನಂದ ಸರಸ್ವತಿ ಬಳಸಿದ್ದರೂ ದ್ರಾವಿಡ ಎಂದು ಜನಾಂಗ ವಾಚಕವಾಗಿ ಬಳಸುವಂತೆ ಆರ್ಯ ಜನಾಂಗವಾಚಕ ಶಬ್ದವಾಗುವುದರಿಂದ, ವೈದಿಕ ಎಂಬುದು ಆಗಮಿಕ ಪರಂಪರೆಯನ್ನು ಹೊರಗಿಡುವುದರಿಂದ ಕೆಲವರು ಸನಾತನ ಧರ್ಮ ಎಂದು ಬಳಸಿಬಿಡುತ್ತಾರೆ. ಉತ್ತರ ಭಾರತದಲ್ಲಿ ಸನಾತನ ಧರ್ಮ ಎಂದೇ ವೇದಾಗಮ ಶೃತಿ ಸ್ಮೃತಿ ಆಧಾರಿತ ಧರ್ಮಕ್ಕೆ ಬಳಸುತ್ತಾರೆ.

ಕ್ರೈಸ್ತ, ಇಸ್ಲಾಂಗಳಲ್ಲಿರುವಂತೆ ಸೈದ್ಧಾಂತಿಕ ಖಚಿತತೆ ಇಲ್ಲಿ ಇರದೆ ಇರುವುದರಿಂದ ಶ್ರೀ ವೀರಸಾವರ್‌ಕರ್ ಹುಟ್ಟುಹಾಕಿದ ಹಿಂದು ಮಹಾಸಭಾ ಮತ್ತು ಎಲ್ಲರನ್ನೂ ಒಂದುಗೂಡಿಸಬೇಕೆಂಬ ಕಳಕಳಿಯ ವಿಶ್ವಹಿಂದು ಪರಿಷತ್, ಆರ್ಯ, ವೈದಿಕ, ಸನಾತನ ಮುಂತಾದ ಪದಗಳಿಗೆ ಒತ್ತುಕೊಡದೆ 'ಹಿಂದು' ಪದಕ್ಕೆ ಒತ್ತುಕೊಡುತ್ತಿರುವವು. ಈ ಮಹನೀಯರ ದೃಷ್ಟಿಯಲ್ಲಿ ಸಹ ಹಿಂದು ಒಂದು ಧರ್ಮವಲ್ಲ, ಸ್ವತಂತ್ರ ಧರ್ಮಗಳ ಒಂದು ಸಂಗಮ, ಒಕ್ಕೂಟ. ಆಚಾರ-ವಿಚಾರ ಉಡುಗೆ-ತೊಡುಗೆಗಳ ದೃಷ್ಟಿಯಲ್ಲಿ ಲಿಂಗಾಯತರು ಸಾಂಸ್ಕೃತಿಕವಾಗಿ ಹಿಂದುಗಳೇ ; ಆದರೆ ಸೈದ್ಧಾಂತಿಕವಾಗಿ, ಧಾರ್ಮಿಕವಾಗಿ ಹಿಂದುಗಳಲ್ಲ. ಭಾರತ ಸರ್ಕಾರದವರು ಜನಗಣತಿಯ ದೃಷ್ಟಿಯಿಂದ ಹಿಂದುವನ್ನು ಒಂದು ಧರ್ಮ ಎಂದು ಗಣನೆ ಮಾಡುತ್ತಿರುವುದರಿಂದ ಲಿಂಗಾಯತರು ಹಿಂದುಗಳಲ್ಲ. ಹೇಗೆಂದರೆ :

೧. ಲಿಂಗಾಯತರ ಧರ್ಮಶಾಸ್ತ್ರಗಳು ವೇದಾಗಮ ಉಪನಿಷತ್ ಪುರಾಣ ಶೃತಿ-ಸ್ಮೃತಿಗಳಲ್ಲ, ವಚನ ಸಾಹಿತ್ಯ.

೨. ಹಿಂದು ಧರ್ಮಕ್ಕೆ ಒಬ್ಬ ಸಂಸ್ಥಾಪಕನಿಲ್ಲ, ಲಿಂಗಾಯತ ಧರ್ಮವು ವಿಶ್ವಗುರು ಬಸವಣ್ಣ ಎಂಬ ಒಬ್ಬ ಸಂಸ್ಥಾಪಕರನ್ನು ಹೊಂದಿದೆ.

೩. ಹಿಂದು ಧರ್ಮವು ಇರುವ ಒಬ್ಬ ದೇವರನ್ನು ನಂಬದೆ ಪುರಾಣಗಳ ದೇವದೇವತೆಯರನ್ನೆಲ್ಲ ನಂಬಿ, ಕ್ಷುದ್ರದೈವಂಗಳ ನವಗ್ರಹಗಳ ಉಪಾಸನೆ ಸಹ ಪ್ರೋತ್ಸಾಹಿಸುವ ಬಹುದೇವತೋಪಾಸಕ ಧರ್ಮ. ಲಿಂಗಾಯತ ಧರ್ಮವು ಇರುವ ಒಬ್ಬನೇ ಸೃಷ್ಟಿಕರ್ತನನ್ನು ನಂಬಿ, ಅನ್ಯ ದೈವಂಗಳ ಆರಾಧನೆ ನಿಷೇಧಿಸಿರುವ ಪ್ರಗತಿಪರ ಧರ್ಮ.

೪. ವೈದಿಕ ಹಿಂದು ಧರ್ಮವು ಹೋಮ-ಹವನ, ಯಜ್ಞ-ಯಾಗಗಳನ್ನು ಪ್ರಮುಖ

ಆಚರಣೆಯನ್ನಾಗಿ ಇಟ್ಟುಕೊಂಡ ಧರ್ಮ. ಲಿಂಗಾಯತವು ಅಗ್ನಿ, ನೀರು, ನೆಲ ಮುಂತಾದ ಪಂಚಭೂತಗಳ ಪೂಜೆಯನ್ನು ನಿಷೇಧಿಸಿರುವುದೇ ಅಲ್ಲದೆ ಹೋಮ-ಹವನ, ಯಜ್ಞ-ಯಾಗಗಳ ಕಟ್ಟಾ ವಿರೋಧಿ ಧರ್ಮ.

೫. ವೈದಿಕ ಹಿಂದು ಧರ್ಮವು ಚತುರ್ವರ್ಣ ವ್ಯವಸ್ಥೆ, ಜಾತಿ ಪದ್ಧತಿ, ಅದರ ಪ್ರತಿಫಲವಾದ ಅಸ್ಪೃಶ್ಯತೆಗಳನ್ನು ಸೈದ್ಧಾಂತಿಕವಾಗಿ ಮಾನ್ಯ ಮಾಡುವ ಧರ್ಮ. ಲಿಂಗಾಯತವು ಇವನ್ನೆಲ್ಲ ನಿರಾಕರಿಸಿ ಮಾನವ-ಶರಣ ಎಂಬ ವರ್ಗೀಕರಣ ಮಾತ್ರ ಪ್ರತಿಪಾದಿಸಿ ಮಾನವ ಸಮಾನತೆ ಎತ್ತಿ ಹಿಡಿಯುವ ಧರ್ಮ.

ವಿಶ್ವಹಿಂದೂ ಪರಿಷತ್, ಪೂಜ್ಯ ಶ್ರೀ ಪೇಜಾವರ ಶ್ರೀಗಳು ಮುಂತಾದ ಕೆಲವರು ರಾಷ್ಟ್ರರಕ್ಷಣೆಯ ಕಳಕಳಿಯಿಂದ ಮತ್ತು ಹೃದಯ ವೈಶಾಲ್ಯತೆಯಿಂದ ಜಾತಿಪದ್ಧತಿ, ಅಸ್ಪೃಶ್ಯತೆ ಹೋಗಲಾಡಿಸಲು ಜಾಗೃತಿ ಮಾಡುತ್ತಿದ್ದರೂ ಈ ವಿಷಮ ವ್ಯವಸ್ಥೆಯನ್ನು ಪ್ರತಿಪಾದಿಸಿರುವ ವೇದ-ಶೃತಿ-ಸ್ಮೃತಿಗಳನ್ನು ನಿರಾಕರಿಸಲಾರದ ಧರ್ಮಸಂಕಟಕ್ಕೆ ಸಿಲುಕಿದ್ದಾರೆ. ಲಿಂಗಾಯತರಿಗೆ ಈ ಸಮಸ್ಯೆ ಇಲ್ಲ. ಏಕೆಂದರೆ ಲಿಂಗಾಯತ ಧರ್ಮದ ಧರ್ಮಶಾಸ್ತ್ರ ವಚನ ಸಾಹಿತ್ಯದಲ್ಲಿ ಸಮಾನತೆಯು ಸ್ವಾಭಾವಿಕ ಮತ್ತು ಸಹಜ ಸಿದ್ಧಾಂತವಾಗಿದೆ.

ಪೂಜ್ಯ ಪೇಜಾವರ ಶ್ರೀಗಳು ಸಮಾನತೆ ಪ್ರತಿಪಾದನೆ ಮಾಡುವುದು ವೈದಿಕ ಧರ್ಮಕ್ಕೆ ತಿದ್ದುಪಡಿ (amendment) ತಂದುಕೊಂಡಂತೆ ಇದ್ದರೆ, ಅಜ್ಞಾನಿ ಲಿಂಗಾಯತರು ತಮ್ಮ ಧರ್ಮ ತಿಳಿಯದೆ ಜಾತಿಭೇದ-ಅಸ್ಪೃಶ್ಯತೆ ಆಚರಿಸುತ್ತಿದ್ದರೆ ಧರ್ಮಗುರು ಬಸವಣ್ಣನವರ ಆಶಯಕ್ಕೆ, ವಚನ ಸಾಹಿತ್ಯ ಸಂವಿಧಾನಕ್ಕೆ ದ್ರೋಹ ಬಗೆದಂತೆ ಆಗುತ್ತದೆ.

ಆದ್ದರಿಂದ ಭಾರತ ಸರ್ಕಾರದವರು ಹಿಂದುವನ್ನು ಒಂದು ಧರ್ಮ ಎಂದೇ ಮಾನ್ಯ ಮಾಡಿರುವುದರಿಂದ, ಅನಿವಾರ್ಯವಾಗಿ ವರ್ಣಾಶ್ರಮ ವ್ಯವಸ್ಥೆ, ಜಾತಿಪದ್ಧತಿ, ಅಸ್ಪೃಶ್ಯತೆ, ಬಹುದೇವತೋಪಾಸನೆ, ಯಜ್ಞಯಾಗ ಆಚರಣೆ ಒಪ್ಪದ ಲಿಂಗಾಯತ ಧರ್ಮವನ್ನು ಅಹಿಂದು ವಲಯಕ್ಕೆ ಸೇರಿಸಿ, ಸ್ವತಂತ್ರ ಧರ್ಮ ಎನ್ನುವುದು ಅನಿವಾರ್ಯವಾಗುವುದು. ಈ ಪ್ರಯತ್ನ ಹಿಂದು ವಿರೋಧಿ ಪ್ರಯತ್ನವಲ್ಲ ; ಹಿಂದು ಪರಂಪರೆಯನ್ನು ಉಳಿಸುವ ಕಳಕಳಿ ಹೊಂದಿರುವ ಪ್ರಯತ್ನ. ಏಕೆಂದರೆ ಹಿಂದು ಪರಂಪರೆಯ ಮೂಲ ಪುರುಷ ನಮ್ಮ ಶರಣ ಪರಂಪರೆಯ ಪಿತಾಮಹ ಯೋಗಿರಾಜ ಶಿವ; ಜಗತ್ತಿನ ಪ್ರಥಮ ಪ್ರವಾದಿ, ಯೋಗಿ. ಆರ್ಯರು ಆಗಮಿಸಿ, ಇಲ್ಲಿ ನೆಲೆಯೂರಿ, ವೇದಗಳನ್ನು ರಚಿಸುವ ಮೊದಲೇ ಒಂದು ಮಹಾನ್ ಅಧ್ಯಾತ್ಮಿಕ (ಶೈವ) ಪರಂಪರೆಯನ್ನು ಪ್ರಾರಂಭಿಸಿದ ದ್ರಷ್ಟಾರ. ಅಂಥ ಸಾಂಸ್ಕೃತಿಕ ಪರಂಪರೆಯ (Cultural heritage) ಸಂಬಂಧವನ್ನು ಕಳಚಿಕೊಳ್ಳಲು ನಾವಾರೂ ಇಷ್ಟಪಡುವುದಿಲ್ಲ.

ಆದರೆ, ಕಾಲಾನಂತರದಲ್ಲಿ ಶಿವನು ಕೊಟ್ಟ ಅಮೂಲ್ಯ ತತ್ತ್ವಗಳಾದ ಸಮಾನತೆ, ನಿರಾಕಾರೋಪಾಸನೆ, ಸ್ತ್ರೀಸಮಾನತೆ ಮುಂತಾದ ಎಲ್ಲವೂ, ವಿಕೃತಗೊಂಡು ಶೈವದಲ್ಲಿ

Digitalized by e-Sahithya Documentation Forum
Sponsored by Sarayu Foundation Trust

ಚತುರ್ವರ್ಣ ವ್ಯವಸ್ಥೆ, ಅಸಮಾನತೆ, ಯಜ್ಞ-ಯಾಗ, ಪುರೋಹಿತ ಶಾಹಿ ನುಸುಳಿದ್ದರಿಂದ ವಿಶ್ವಗುರು ಬಸವಣ್ಣನವರು ಅನಿವಾರ್ಯವಾಗಿ ವೈದಿಕ - ಶೈವ ಪರಂಪರೆಗಳೆರಡನ್ನೂ ಖಂಡಿಸಿ ಹೊಸ ಧರ್ಮ - ಲಿಂಗಾಯತವನ್ನು ಸಂಸ್ಥಾಪನೆ ಮಾಡಬೇಕಾಯಿತು.

ಇಂದು ಅಖಂಡ ಭಾರತಕ್ಕೆ ಮಾತ್ರವಲ್ಲ ಜಗತ್ತಿಗೇ ನಾವು ಮನಗಾಣಿಸಬೇಕಾದ ಒಂದು ಸತ್ಯವೆಂದರೆ, ಹಿಂದು ಸಾಂಸ್ಕೃತಿಕ ಪರಂಪರೆಯ ಒಳಗೆ ಒಂದು ಮಹಾನ್ ಸ್ವತಂತ್ರ ಧರ್ಮವಿದೆ. ವಿಶ್ವಗುರು ಬಸವಣ್ಣನವರು ಕೊಟ್ಟ ಈ ಧರ್ಮ ಮೂಢನಂಬಿಕೆ ಒಪ್ಪದ ಏಕದೇವ ಉಪಾಸನೆ ಬೋಧಿಸುವುದು ; ಜಾತಿ ಪದ್ಧತಿ - ಅಸ್ಪೃಶ್ಯತಾ ಆಚರಣೆ ಒಪ್ಪದು ; ಎಲ್ಲರ ಸಮಾನತೆ, ಸ್ತ್ರೀ ಸಮಾನತೆ ಬೋಧಿಸುವುದು ಇಷ್ಟೇ ಅಲ್ಲ, ಯಾರನ್ನು ಬೇಕಾದರೂ ಸ್ವೀಕರಿಸಿ, ದೀಕ್ಷೆಯನ್ನು ನೀಡುವುದು. ಧರ್ಮ, ದೇವರು, ಸಂಸ್ಕಾರ ಇಲ್ಲದ ಮಾನವರೆಲ್ಲರಿಗೂ ಧರ್ಮಸಂಸ್ಕಾರ ನೀಡುವುದು. ಹಿಂದೂ ಸಾಂಸ್ಕೃತಿಕ ಪರಂಪರೆಗೆ ಹೊರಗಾಗದೆಯೇ ಧರ್ಮವನ್ನು ಪಡೆದುಕೊಳ್ಳಲು ಸದವಕಾಶ ನೀಡುವುದು ಎಂಬುದನ್ನು ನಾವಿಂದು ಸರಿಯಾಗಿ ಜನರಿಗೆ ಸ್ಪಷ್ಟಪಡಿಸಬೇಕಾಗಿದೆ. ಲಿಂಗಾಯತ ಧರ್ಮದ ಈ ಅದ್ಭುತ ವ್ಯಕ್ತಿತ್ವವನ್ನು, ವೈಶಿಷ್ಟ್ಯವನ್ನು ವೀರಶೈವ ಪದವು ಯಾವುದೇ ರೀತಿ ಬಿಂಬಿಸಲಾರದು. ಆದ್ದರಿಂದ ಕೆಳಕಂಡ ಕಾರಣಗಳಿಗಾಗಿ ವೀರಶೈವ ಪದವನ್ನು ಹಿಡಿದು ಒದ್ದಾಡುತ್ತಿರುವ ಮಠಾಧೀಶರು, ಧಾರ್ಮಿಕ - ಸಾಮಾಜಿಕ ನೇತಾರರಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

೧. ವಚನ ಸಾಹಿತ್ಯದ ಮೂಲಕ ಪ್ರತಿಪಾದಿಸಲ್ಪಟ್ಟ ಲಿಂಗಾಯತ ಧರ್ಮದ ಆದ್ಯರು, ಸಂಸ್ಥಾಪಕರು ಬಸವಣ್ಣನವರು ಎಂಬುದನ್ನು ಒಪ್ಪಿಕೊಳ್ಳದ ದುರುದ್ದೇಶ ವೀರಶೈವವಾದಿಗಳ ಮೊದಲ ಕಾರಣ. ಇವರಲ್ಲಿ ನಮ್ಮ ಮನವಿ ಹೀಗಿದೆ :

- ಈ ಅನ್ಯಾಯದ ಮನೋಭಾವ ತೊರೆಯಿರಿ. ಅಪ್ಪ ಬಸವಣ್ಣನವರು, ಅವರ ಸಮಕಾಲೀನ ಶರಣರು ಕೊಟ್ಟ ವಚನ ಸಾಹಿತ್ಯ ಎಂಬ ಆಸ್ತಿಯನ್ನು ಬಳಸಿಕೊಳ್ಳುತ್ತಿರುವ ನೀವು ಅಪ್ಪನನ್ನು ಅಪ್ಪ ಎನ್ನಲು ತಯಾರಿಲ್ಲದ ಜನರಾಗಿದ್ದೀರಿ. ಇಲ್ಲವೇ ನಿಮಗೆ ಆತ್ಮವಿಶ್ವಾಸವಿದ್ದರೆ ವಚನ ಸಾಹಿತ್ಯವನ್ನು ಬಳಸಿಕೊಳ್ಳದೆ, ನೀವು ಯಾವ ಆಗಮ ಸಾಹಿತ್ಯವನ್ನು ಹಿಡಿದು ನಿಮ್ಮ ಧರ್ಮವನ್ನು ಪ್ರತಿಪಾದಿಸುವಿರೋ ಪ್ರತಿಪಾದಿಸಿಕೊಳ್ಳಿರಿ. ಗುರುದ್ರೋಹ, ಆತ್ಮವಂಚನೆ ಮಾಡಬೇಡಿರಿ. ಇದರಿಂದ ಸಮಾಜಕ್ಕೂ ದ್ರೋಹವಾಗುತ್ತದೆ.

೨. ವಚನ ಸಾಹಿತ್ಯದಂತಹ ಪ್ರಗತಿಪರ ಸಾಹಿತ್ಯ ಮನ್ನಿಸದೆ, ಅಖಿಲ ಭಾರತ ವೀರಶೈವ ಮಹಾಸಭೆಯ ಸಂಸ್ಥಾಪಕರು ವೇದಾಗಮ ಶೃತಿ, ಸ್ಮೃತಿ, ಪುರಾಣಗಳಲ್ಲಿ ಉಕ್ತವಾದುದು ವೀರಶೈವ ಎಂದು ತಮ್ಮ ಬೈಲಾದಲ್ಲಿ ಹೇಳಿದ್ದಾರೆ. ಹೀಗಾಗಿ ವಚನ ಸಾಹಿತ್ಯಕ್ಕೆ ಬದ್ಧವಾಗಿ ನಡೆದುಕೊಳ್ಳಲು ಬಯಸದ ಜನರು ವೀರಶೈವ ಪದಕ್ಕೆ ಜೋತು ಬೀಳುತ್ತಿದ್ದಾರೆ.

- ಇಂಥ ಮಾನ್ಯರೇ, ನಿಮಗೆ ಸ್ವಲ್ಪವಾದರೂ ಸ್ವಾಭಿಮಾನ ಮತ್ತು ಪ್ರಾಮಾಣಿಕತೆ ಇರಬೇಕು. ವೇದಕ್ಕೆ ಒರೆಯನಿಕ್ಕಿ, ಶಾಸ್ತ್ರಕ್ಕೆ ನಿಗಳನ್ನಿಕ್ಕಿ, ಆಗಮದ ಮೂಗಕೊಯ್ದು, ತರ್ಕದ

ಬೆನ್ನಬಾರನ್ನು ಎತ್ತಿದ ಬಸವ ಪರಂಪರೆ ನಿಮಗೆ ಬೇಡ ತಾನೆ? ಅದನ್ನು ಕೈಬಿಡಿ. ಲಿಂಗಾಯತ-ವೀರಶೈವ ಎರಡನ್ನೂ ಮಿಶ್ರಣಮಾಡಿ ಲಿಂಗಾಯತ ಧರ್ಮ-ಸಮಾಜಗಳನ್ನು ಕಲುಷಿತಗೊಳಿಸಬೇಡಿರಿ.

೩. ಮೂಢನಂಬಿಕೆ, ಜಾತಕ, ಪಂಚಾಂಗ, ಹೋಮ-ಹವನ, ನವಗ್ರಹ ಆರಾಧನೆ - ಮುಂತಾದವುಗಳಿಂದ ಕೂಡಿದ ಸಮಾಜವು ತಮಗೆ ಹುಲುಸಾದ ಜೀವನವನ್ನು ಕೊಡಬಲ್ಲುದು ಎಂದು ನಂಬಿರುವ ಪುರೋಹಿತಶಾಹಿ ಜನ ವೀರಶೈವವಾದವನ್ನು ಬೆಳೆಸುತ್ತ, ಬಸವಾದಿ ಪ್ರಮಥರನ್ನು ದ್ವೇಷಿಸುತ್ತಾರೆ.

- ಇಂಥ ಮಾನ್ಯರೇ, ನಿಮ್ಮ ಹೊಟ್ಟೆಪಾಡಿಗಾಗಿ ಜನರನ್ನು ಮೂಢನಂಬಿಕೆಯ ಕೆಸರಲ್ಲಿ ಇಡಬೇಕು ಎಂಬ ಸ್ವಾರ್ಥತೆ ತೊರೆಯಿರಿ. ಜನತೆ-ಸಮಾಜ-ರಾಷ್ಟ್ರ ಪ್ರಬುದ್ಧವಾಗಲಿ ; ನಿಮ್ಮ ಮತ್ತು ನಿಮ್ಮ ಕುಟುಂಬದ ಹಿತಕ್ಕಾಗಿ ಶೋಷಣೆ ಮುಂದುವರಿಸದೆ ಬಸವ ಪಥಕ್ಕೆ ಬನ್ನಿರಿ. ಖಂಡಿತವಾಗಿಯೂ ನಿಮಗೆ ಒಳ್ಳೆಯದಾಗುವುದು.

೪. ಜಾತಿವ್ಯವಸ್ಥೆ, ಮೇಲು-ಕೀಳು ಎಂಬ ಶ್ರೇಣೀಕೃತ ವ್ಯವಸ್ಥೆ ಹಾಗೆಯೇ ಇರಲಿ, ಲಿಂಗಾಯತ ಸಮಾಜದಲ್ಲಿ ಸಹ ತಾವು ಶ್ರೇಷ್ಠ ಲಿಂಗಾಯತರೆಂದು ಹಮ್ಮಿನಿಂದ ವರ್ತಿಸುತ್ತ ಇನ್ನಿತರರನ್ನು ಎರಡನೇ-ಮೂರನೇ ದರ್ಜೆ ಲಿಂಗಾಯತರೆಂದು ವರ್ತಿಸುವವರು ವೀರಶೈವವಾದಕ್ಕೆ ಜೋತು ಬೀಳುತ್ತಿದ್ದಾರೆ. ವಿಶ್ವಗುರು ಬಸವಣ್ಣನವರ ಸಮಾನತಾ ತತ್ತ್ವ ಅವರಿಗೆ ನುಂಗಲಾರದ ತುತ್ತು.

- ಇಂಥ ಮಾನ್ಯರೇ, ನೀವು ದೇವರ ನಿಜ ಸ್ವರೂಪವನ್ನು ಅರಿಯಿರಿ. ಅವನು ಕರುಣಾಮೂರ್ತಿ, ಲೋಕೋದ್ಧಾರಕ್ಕಾಗಿ ಬಸವಣ್ಣನಂಥವರ ಮೂಲಕ ಸಮಾನತೆ ಬೋಧಿಸಿದ್ದಾನೆ. ಇದನ್ನು ಮನ್ನಿಸದೆ ಜಾತಿವಾದಿಗಳಾಗಿ ಸಮಾಜ-ರಾಷ್ಟ್ರಗಳನ್ನು ದುರ್ದೆಸೆಗೆ ತಳ್ಳಬೇಡಿರಿ. ಧರ್ಮವಂತರಾಗಿ ನೀವು ಧರ್ಮದ ಸವಿ ಉಂಡವರಾಗಿದ್ದರೆ, ಆ ಸವಿಯನ್ನು ಇನ್ನಿತರರೂ ಪಡೆಯುವಂತೆ ಮಾಡಿರಿ; ಯಾವುದೋ ಒಂದು ಕಾಲದಲ್ಲಿ ನೀವು ಪಡೆದುಕೊಂಡ ದೀಕ್ಷಾ ಸೌಭಾಗ್ಯ ಇನ್ನಿತರರಿಗೂ ಸಿಗುವಂತಾಗಲಿ.

೫. ಚಿನ್ನ-ವಜ್ರಗಳ ಕಿರೀಟ, ಪೀತಾಂಬರ, ಭಯಂಕರ ಭಾರದ ಅಡ್ಡಪಲ್ಲಕ್ಕಿಗಳಲ್ಲಿ ಕುಳಿತು ಜೀವಂತ ಜನರ ಹೆಗಲ ಮೇಲೆ ಅಡ್ಡಾಡಬೇಕೆನ್ನುವವರು ಮತ್ತು ಅವರನ್ನು ಹೊರಿಸಿ ನಾಲ್ಕು ಕಾಸು ಸಂಪಾದನೆ ಮಾಡಿಕೊಳ್ಳಬೇಕೆನ್ನುವವರು, ಹೊರುವುದರಲ್ಲೇ ಸಾರ್ಥಕವಿದೆ ಎಂಬ ಮೂಢಭಕ್ತರು, ಕೂಲಿಕೊಟ್ಟರೆ ಏನನ್ನು ಬೇಕಾದರೂ ಹೊರುತ್ತೇವೆ ಎನ್ನುವವರು - ಇವರು ಸರಳತೆಯನ್ನು ಬೋಧಿಸುವ ವಚನ ವಾಙ್ಮಯವನ್ನು, ಅದ್ಭುತ ಮಹಾಪುರುಷ ಬಸವಣ್ಣನವರನ್ನು ಗುರುವೆಂದು ಮನ್ನಿಸುವುದಿಲ್ಲ ಮತ್ತು ವೀರಶೈವ ಪುರಾತನತ್ವದ ವಾದ ಮಂಡಿಸುತ್ತಾರೆ.

- ಇಂಥಾ ಮಾನ್ಯರೇ, ನಿಮ್ಮ ಬೂಟಾಟಿಕೆ ಬಿಡಿರಿ. ಹೋಗಲೀ, ನೀವು ಮನ್ನಿಸುವ

Digitalized by e-Sahithya Documentation Forum
Sponsored by Sarayu Foundation Trust

ಯೋಗಿರಾಜ ಶಿವನನ್ನು ಗಮನಿಸಿದ್ದೀರಾ? ಕೇವಲ ಜಟಾಮುಕುಟಧಾರಿಯಾತ, ವಜ್ರಕಿರೀಟಧಾರಿಯಲ್ಲ; ಸರಳ ವೇಷಧಾರಿ ಪೀತಾಂಬರಧಾರಿಯಲ್ಲ. ಹತ್ತು ಬೆರಳಿಗೆ ಹತ್ತು ಉಂಗುರ ತೊಟ್ಟು ಪ್ರದರ್ಶಿಸುವವನಲ್ಲ, ಕೇವಲ ಭಸ್ಮ-ರುದ್ರಾಕ್ಷಿಧಾರಿ. ಕಾಲ ಬದಲಾಗುತ್ತಿದೆ; ನೀವೂ ಬದಲಾಗಿರಿ. ಅಂದೊಮ್ಮೆ ಬಸವಣ್ಣ ಕೊಟ್ಟ ಇಷ್ಟಲಿಂಗ ಧರಿಸಿ ಲಿಂಗಾಯತ ಧರ್ಮಕ್ಕೆ ಬಂದ ಶೈವ (ವೀರಶೈವ) ಮಾರ್ಗಿಗಳು ನೀವು. "ಕಬ್ಬಿಣದ ಕೋಡಗವ ಪರುಷ ಮುಟ್ಟಲು ಹೊನ್ನಾದರೇನು ಮತ್ತೇನಾದರೇನು, ಮುನ್ನಿನ ರೂಹಜಿಡದನ್ನಕ್ಕ" ಎಂಬಂತೆ ನೀವು ಇಷ್ಟಲಿಂಗಧಾರಿಗಳಾದರೂ ಇಷ್ಟಲಿಂಗ ನಿಷ್ಠೆ ಅಳವಡಿಸಿಕೊಳ್ಳಲಿಲ್ಲ. ವೈಭವಪೂರಿತ ಕಿರೀಟ, ಉಂಗುರ, ರತ್ನಹಾರ, ಅಡ್ಡಪಲ್ಲಕ್ಕಿ ಬಿಟ್ಟು ಶಿವನಂತೆ, ಬಸವಣ್ಣನವರಂತೆ ಸರಳರಾಗಿರಿ. ನಿಮ್ಮನ್ನು ಪ್ರಗತಿಪರ ವಿಚಾರದವರು ಎಲ್ಲರೂ ಗೌರವಿಸುವರು ; ನಮ್ಮ ಸಮಾಜ-ದೇಶಗಳನ್ನು ಪ್ರಗತಿಪರ ವಿಚಾರಧಾರೆಯತ್ತ ಕೊಂಡೊಯ್ಯಲು ನೆರವಾಗಿರಿ ಎಂದು ನಮ್ಮ ಕಳಕಳಿಯ ವಿನಂತಿ. ಮುಂದಿನ ಕಾಲ ಬಸವಯುಗ, ಪ್ರಗತಿಪರ ವಿಚಾರಯುಗ. ನೀವು ಪರಿವರ್ತನೆ ತಂದುಕೊಳ್ಳದಿದ್ದರೆ ರಾಜರ ಅರಸೊತ್ತಿಗೆ ಕೈಬಿಟ್ಟು ಹೋದಂತೆ ನೀವೂ ಮೂಲೆಗುಂಪಾಗಬೇಕಾದೀತು.

ಕೆ. ಆರ್. ನಗರದಲ್ಲಿ ಒಂದು ಕಾರ್ಯಕ್ರಮಕ್ಕೆ ಹೋದಾಗ, ಶ್ರೀ ತೋಂಟದಾರ್ಯ ಎಂಬ ಪ್ರಾಜ್ಞ ವಕೀಲರು ನುಡಿದರು, "ಲಿಂಗಾಯತದ ಬಗ್ಗೆ ಪೂಜ್ಯ ಮಾತಾಜಿ ಹೇಳಿದ್ದು ಮನವರಿಕೆಯಾಯಿತು. ಆದರೆ ವೀರಶೈವ ಮಹಾಸಭೆಯವರು 'ವೀರಶೈವ' ಬಳಸಲು ಕರೆಕೊಡುತ್ತಾರೆ. ಹೀಗಿರುವಾಗ ಎರಡು ಬಗೆಯ ಹೇಳಿಕೆಗಳಿಂದ ಜನರಿಗೆ ತೀವ್ರ ಗೊಂದಲ ಉಂಟಾಗುತ್ತದೆ.

ಇದು ಸತ್ಯವಾದ ಮಾತು. ವೀರಶೈವ ಮತದ ಯಾವುದೇ ಲಕ್ಷಣ ಹೊಂದಿರದ ಇಷ್ಟಲಿಂಗಧಾರಿಗಳ ಲಿಂಗಾಯತ ಸಮಾಜಕ್ಕೆ ವೀರಶೈವ ಎಂದು ತಪ್ಪುತಪ್ಪಾಗಿ ಕರೆದು, ಪ್ರಚಲಿತವಿಲ್ಲದ ಪದವನ್ನು ಕಷ್ಟಪಟ್ಟು ಪ್ರಚಾರ ಮಾಡುವ ಅಖಿಲ ಭಾರತ ವೀರಶೈವ ಮಹಾಸಭೆಯವರೇ, ಇದರಿಂದ ನೀವು ಏನು ಸಾಧಿಸುವಿರಿ? ಲಿಂಗಾಯತ ಸಮಾಜಕ್ಕೆ ಬಹು ಬಗೆಯ ಮಹತ್ವ, ಒಗ್ಗಟ್ಟು, ಲಾಭ ತರುವ ಲಿಂಗಾಯತ ಪದ ಬಿಟ್ಟು ಏಕೆ ವೀರಶೈವ ಪದ ಹೇರಿ ಮುಂದಿನ ಜನಾಂಗಕ್ಕೆ ಅನ್ಯಾಯ ಮಾಡುತ್ತೀರಿ? ಕನ್ನಡದ ಒಂದು ಗಾದೆಯಂತೆ, "ಸಾಬೀನೇ ಕೊಚ್ಚಿ ಹೋಗುವಾಗ ಅವನಿಗಾಗಿ ಪರಿತಾಪ ಪಡದೆ ಸಾಬಿಯ ಗಡ್ಡ ಕೊಚ್ಚಿ ಹೋಯಿತು" ಎಂಬ ಮಂದಮತಿಗಳಂತೆ ವೀರಶೈವ ಮಹಾಸಭೆ ಎಂಬ ಸಂಸ್ಥೆಯ ಪ್ರತಿಷ್ಠೆ ಉಳಿಸಲು ಇಡೀ ಸಮಾಜಕ್ಕೆ ಅನ್ಯಾಯ ಮಾಡುವಿರಾ? ಏಕೆ ನಿಮ್ಮ ಬುದ್ಧಿ ಕುರುಡಾಗಿದೆ?

ಒಂದು ಮಹಾನ್ ಧರ್ಮವನ್ನು, ವಿಶ್ವಧರ್ಮದ (Universal religion) ಲಕ್ಷಣಗಳನ್ನುಳ್ಳ ಲಿಂಗಾಯತ ಧರ್ಮವನ್ನು ಅಖಂಡ ಭಾರತಕ್ಕೆ ಮತ್ತು ವಿಶ್ವಕ್ಕೆ ಪರಿಚಯಿಸುವ ಸುವರ್ಣ ಗಳಿಗೆ ಬಂದಿದೆ - ೨೦೦೧ರ ಜನಗಣತಿ ಮೂಲಕ. ಭಿನ್ನಾಭಿಪ್ರಾಯ ಬಿಟ್ಟು

ಎಲ್ಲರೂ ಕಾರ್ಯಮಾಡಿರಿ. ಲಿಂಗಾಯತ ಧರ್ಮ ಬಂಧುಗಳೇ, ಮುಂದಾಲೋಚನೆ ಇಲ್ಲದ ವೀರಶೈವ ಮಹಾಸಭೆ, ಸ್ವಾರ್ಥ ಪರರಾದ ಒಡೆದು ಆಳುವ ನೀತಿಯ, ಜಾತಿಗುಂಪು ಕಟ್ಟುವ ಮಠಾಧೀಶರು ಏನನ್ನಾದರೂ ಮಾಡಲಿ ನೀವು ಮಾತ್ರ ೨೦೦೧ನೆಯ ಜನಗಣತಿಯ ಸಮಯದಲ್ಲಿ ೮ನೇ ಕಾಲಂದಲ್ಲಿ ಲಿಂಗಾಯತ ಎಂದೇ ಬರೆಸಿರಿ ಎಂದು ನಮ್ಮ ಕಳಕಳಿಯ ಕರೆ.

- ಮಾತಾಜಿ

ಅಖಿಲ ಭಾರತ ವೀರಶೈವ ಮಹಾಸಭೆಗೆ ಒಂದು ಪತ್ರ

ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು - ಸದಸ್ಯರು
ಅಖಿಲ ಭಾರತ ವೀರಶೈವ ಮಹಾಸಭೆ.
ಜಯದೇವ ಹಾಸ್ಟೆಲ್, ಬೆಂಗಳೂರು.

ಇವರಿಗೆ ಬಸವ ಸ್ಮರಣಪೂರ್ವಕ ಶುಭಹಾರೈಕೆಗಳು. ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವು ಕ್ಷೇಮ. ನಿಮ್ಮ ಕ್ಷೇಮವನ್ನು ಹಾರೈಸುತ್ತೇವೆ.

ಇಷ್ಟಲಿಂಗಧಾರಿಗಳಾದ ನಾವು ಅನುಸರಿಸುವ ಧರ್ಮ ಲಿಂಗಾಯತವೇ ವಿನಾ ವೀರಶೈವವಲ್ಲ. ಇವೆರಡು ಸಮಾನಾರ್ಥ ಸೂಚಕ ಪದಗಳಲ್ಲ. ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಲಿಂಗಾಯತ ಧರ್ಮವನ್ನು ವೀರಶೈವ ಎಂದು ಕರೆದು ಅನ್ಯಾಯ ಮಾಡುವುದು ಸರಿಯಲ್ಲ. ಕೇವಲ ನೀವು ಪ್ರತಿನಿಧಿಸುವ ಒಂದು ಸಂಸ್ಥೆ-ವೀರಶೈವ ಮಹಾಸಭೆಯ ಹಿತ ಕಾಯುವುದಕ್ಕಾಗಿ ಒಂದು ಮಹಾನ್ ಶರಣ ಪರಂಪರೆಯುಳ್ಳ ಲಿಂಗಾಯತ ಧರ್ಮಕ್ಕೆ ಅನ್ಯಾಯ ಮಾಡಬೇಡಿರಿ. ವೀರಶೈವ ಬಳಕೆಯಿಂದ ಜಾಗತಿಕ ಧರ್ಮದ ಲಕ್ಷಣಗಳುಳ್ಳ ಲಿಂಗಾಯತ ಧರ್ಮಕ್ಕೆ ಅನ್ಯಾಯ ಮಾಡುವುದಲ್ಲದೆ, ಇಷ್ಟಲಿಂಗಧಾರಿಗಳ ಸಮಾಜ - ಲಿಂಗಾಯತ ಸಮಾಜಕ್ಕೂ ಭವಿಷ್ಯ ದೃಷ್ಟಿಯಿಂದ ದ್ರೋಹ ಬಗೆದಂತಾಗುವುದು. ಈ ಬಗ್ಗೆ ಮುಕ್ತ ಚರ್ಚೆಯನ್ನು ದಿ. ೧೨-೧-೨೦೦೦ದಂದು ಕೂಡಲಸಂಗಮದಲ್ಲಿ ನಡೆಯುವ ಶರಣ ಮೇಳದಲ್ಲಿ ಇಟ್ಟಿದ್ದೇವೆ. ನೀವು ಬಂದು ಭಾಗವಹಿಸಿರಿ. ನಿಮ್ಮ ವಿಚಾರ ಮಂಡಿಸಿರಿ. ನಿಮ್ಮ ಸಂದೇಹಕ್ಕೆ ನಾವು ಉತ್ತರಿಸುತ್ತೇವೆ. ನಮ್ಮ ಸಂದೇಹಕ್ಕೆ ನೀವು ಉತ್ತರಿಸಿರಿ. ಒಂದು ನಿರ್ಧಾರಕ್ಕೆ ಬರೋಣ. ೨೦೦೧ ಇಸವಿಯ ಜನಗಣತಿಯಲ್ಲಿ ಪ್ರಜ್ಞಾವಂತರಾಗಿ ವರ್ತಿಸದಿದ್ದರೆ ದೊಡ್ಡ ಮೂರ್ಖತನ ನಮ್ಮ ಸಮಾಜದ್ದು ಆಗುತ್ತದೆ. ಗೌರವ ಪೂರ್ಣವಾಗಿ ನಡೆಯುವ ಚರ್ಚೆಯಲ್ಲಿ ತಾವು ಸಂಕೋಚವಿಲ್ಲದೆ ಭಾಗವಹಿಸಬಹುದು. ಕಡೆಯ ಪಕ್ಷ ವೀರಶೈವ ಮಹಾಸಭೆಯ ಪ್ರತಿನಿಧಿಗಳನ್ನಾಗಿ ಯಾರನ್ನಾದರೂ ಕಳಿಸಿರಿ. ಶುಭಹಾರೈಕೆಗಳೊಡನೆ,

೨೨ - ೧೨ - ೧೯೯೯
ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮಪೀಠ, ಕೂಡಲಸಂಗಮ.

Digitalized by e-Sahithya Documentation Forum
Sponsored by Sarayu Foundation Trust

ಅಭಿನಂದನಾರ್ಹ ಎರಡು ಕಾರ್ಯಕ್ರಮಗಳು

- ಮಾತಾಜಿ

ಕೆಲವು ಶರಣರನ್ನು ಅದೆಷ್ಟು ಕೊಂಡಾಡಿದರೂ ಸಾಲದು. ಮಡಿವಾಳ ಮಾಚಿದೇವರ ಕಾಲಜ್ಞಾನದಲ್ಲಿ (ಪದ್ಯ ೯, ಪುಟ ೧೭೪) ಹೀಗೆ ಹೇಳುತ್ತಾರೆ : ''ಕಲ್ಯಾಣ ನಲಿವಂತೆ ಬಲ ಬಂತೆಮಗೆ ಉಘೆ ಚಾಂಗು ಭಲ ಎಂದು ಘನ ಹಿರಿಯರೆಲ್ಲ ಮರೆವಿಯಲ್ಲಿ ಇದ್ದವರು ಉದಯದೋರುವರಿನ್ನು'' ಸತ್ಯವಾದ ಮಾತೇನೋ ! ಎಷ್ಟು ಜನ ಈಗ ಶರಣ ಸಂದೇಶವಾಹಕರಾಗಿ ಕಾರ್ಯ ಮಾಡುತ್ತಿದ್ದಾರೆ.

ಹಿಂದಿನ ಕಲ್ಯಾಣ ಕಿರಣವಲ್ಲಿ ಬರೆಯಲಾಗಿದೆ. ಮೆಹಬೂಬ ನಗರದ ಕೊಂಡಾ ಬಸವರಾಜ್ ತಮ್ಮ ಮಗನ ವಿವಾಹಕ್ಕೆ ಆಹ್ವಾನಿಸಿದರು. ಸಮಾಜದ ನೇತಾರರಾದ ಶರಣ. ರವಿಕುಮಾರ್ ಮತ್ತು ಸಂಗಡಿಗರು ಮೆಹಬೂಬ್ ನಗರದ ಟೌನ್ ಹಾಲ್‌ದಲ್ಲಿ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿ ಸಮ್ಮೇಳನವನ್ನೇ ನಡೆಸಿದರು.

ದಿ. ೧೯/೧೨/೯೯ ರಂದು ಕೆ. ಆರ್. ನಗರದ ಶರಣ. ರಾಜಪ್ಪ - ಶರಣೆ. ನೀಲ ಗಂಗಾ ಕೌಟುಂಬಿಕ ಕಾರ್ಯಕ್ರಮಕ್ಕೆ ಸೀಮಿತವಾಗುವುದು ಬೇಡ ಎಂದು ಶರಣ ಸಂಗಮವನ್ನೇ ಏರ್ಪಡಿಸಿದರು. ಜನರು ಅಸಂಖ್ಯಾತರಾಗಿ ನೆರೆದು ಪ್ರಾರ್ಥನೆ ಪ್ರವಚನದಲ್ಲಿ ಭಾಗಿಗಳಾಗಿ ಹರ್ಷಿಸಿದರು. ಮಕ್ಕಳಾದ ಬಸವಲಿಂಗಸ್ವಾಮಿ, ಸಚ್ಚಿದಾನಂದ ಸ್ವಾಮಿ, ಅಕ್ಕಮಹಾದೇವಿ - ಮೂವರ ದೀಕ್ಷೆಯ ನಿಮಿತ್ತ ಶರಣ ಬಂಧುಗಳಿಗೆ ಜ್ಞಾನದಾಸೋಹ ಲಭ್ಯವಾಯಿತು. ದಿ. ೨೬/೧೨/೯೯ ರಂದು ತುಮಕೂರಿನ ಶರಣ ಕಲ್ಲಪ್ಪ ಮತ್ತು ಶರಣೆ. ಲೀಲಾವತಿಯವರು ತಮ್ಮ ಮಗ ರಮೇಶ್ ಕುಮಾರ್ ಮತ್ತು ಶರಣ. ಕೆ.ಜೆ. ಮಲ್ಲೇಶಪ್ಪ ಮತ್ತು ಶರಣೆ. ಸರೋಜಮ್ಮನವರ ಸುಪುತ್ರಿ ಮಹಾದೇವಿಯ ವಿವಾಹವನ್ನು ಏರ್ಪಡಿಸಿದ್ದರು. ಗುರುಕುಲಾಶ್ರಮದ ಕಲ್ಯಾಣ ಮಂಟಪದಲ್ಲಿ ಬಸವ ತತ್ತ್ವದ ಪ್ರಕಾರ ನಡೆದ ಈ ವಿವಾಹ ಬಹಳ ಜನರಿಗೆ ಸಂತೋಷವನ್ನುಂಟು ಮಾಡಿತು. ಈ ಎರಡು ಕಾರ್ಯಕ್ರಮಗಳು ಹೊಂದಿದ್ದ ವೈಶಿಷ್ಟ್ಯವೆಂದರೆ ರಾಜಪ್ಪ ಶರಣರ ಮಕ್ಕಳ ಇಷ್ಟಲಿಂಗ ದೀಕ್ಷೆ, ಕಲ್ಲಪ್ಪ ಶರಣರ ಮನೆಯ ವಿವಾಹ ನಿಮಿತ್ತವಾಗಿ ನೀಡಿದ ಜ್ಞಾನ ಅಪೂರ್ವ. ಎಷ್ಟೋ ಜನ ಗಣ್ಯರು ಭಾಗಿಗಳಾದರು, ತಮ್ಮ ಸಂದೇಹಗಳನ್ನು ಪ್ರಶ್ನೆ ಕೇಳಿ ಪರಿಹರಿಸಿಕೊಂಡರು.

ಕೆಲವು ಜನರು ಲಿಂಗಾಯತರಾಗಿ ಜನಿಸಿದ್ದರೂ ಧರ್ಮದ ಗಂಧವೇ ಇರದೆ ಪ್ರವಚನಕ್ಕೆ ಬರುವುದಿಲ್ಲ, ಪ್ರಾರ್ಥನೆಗೂ ಬರುವುದಿಲ್ಲ, ವಚನ ಸಾಹಿತ್ಯವನ್ನು ಮೊದಲೇ ಓದುವುದಿಲ್ಲ. ಇಂಥವರಲ್ಲಿ ಧರ್ಮದ ಅಭಿರುಚಿ ಹುಟ್ಟಿಸಲು ಲೌಕಿಕ ಕಾರ್ಯಕ್ರಮಗಳಾದ ಮದುವೆ, ನಾಮಕರಣ, ಲಿಂಗೈಕ್ಯರ ಗಣಾರಾಧನೆ ಮುಂತಾದವು ಒಳ್ಳೆಯ ಸಾಧನೆಗಳಾಗುತ್ತವೆ. ಧಾರ್ಮಿಕ ವಿಧಿಯ ಜೊತೆಗೆ ಅತ್ಯುತ್ತಮ ಸಾಧನ. ಅದೇ ರೀತಿ ಮಾಡುವ ಪ್ರೇರಣೆ ಹೆಚ್ಚಿನ ಜನರಿಗೆ ಬರಲೆಂದು ನಮ್ಮ ಆಶಯ. ಈ ರೀತಿ ಮಾಡಿದ ಶರಣ ಬಂಧುಗಳಿಗೆ ಅಭಿನಂದನೆಗಳು.

Phone : (0836) Fax : (0836) 332103

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ :ಕೇಂದ್ರ ಕಛೇರಿ : ಗೋಕುಲ ರಸ್ತೆ, ಹುಬ್ಬಳ್ಳಿ - ೩೦.

NORTH-WEST KARNATAKA ROAD TRANSPORT CORPORATION

Central Offices : Gokul Road, Hubli-580 030.

ಇಲಾಖೆ /Dept-ಸಂಚಾರ

ಸಂಖ್ಯೆ :ವಾಕರಸಾ : ಕೇಕ : ಹು : ಸಂ : ಕಾ : 1252:99 ದಿನಾಂಕ : 27/11/99

ಗೆ,

ಶ್ರೀ. ಶರಣ ಕಲ್ಯಾಣಪ್ಪ ಪರಮಾದಿ
ಕಾರ್ಯದರ್ಶಿ, ಶರಣ ಮೇಳ ಉತ್ಸವ,
''ಬಸವ ಚೈತನ್ಯ'' ಬಸವನಗರ ಹೆಗ್ಗೇರಿ ಹತ್ತಿರ
ಹುಬ್ಬಳ್ಳಿ - 580 024

ಮಾನ್ಯರೆ,

ವಿಷಯ : ಬಾಗಲಕೋಟೆ ಜಿಲ್ಲೆ ಕೂಡಲ ಸಂಗಮದಲ್ಲಿ ದಿನಾಂಕ : **12-1-2000ನೇ** ಇಸ್ವಿಯಿಂದ **15-1-2000ನೇ** ಇಸ್ವಿಯವರೆಗೆ ನಡೆಯುವ ಶರಣ ಮೇಳಕ್ಕೆ ವಿಶೇಷ ಬಸ್ ವ್ಯವಸ್ಥೆ ಮಾಡುವ ಕುರಿತು.

ಉಲ್ಲೇಖ : ನಿಮ್ಮ ಪತ್ರ ದಿನಾಂಕ : **18-11-99**

ನಿಮ್ಮ ಮನವಿಯನ್ನು ಪರಿಶೀಲಿಸಲಾಯಿತು. ದಿನಾಂಕ 12-1-2000ನೇ ಇಸ್ವಿಯಲ್ಲಿ ಬಾಗಲಕೋಟೆ ಜಿಲ್ಲೆ ಕೂಡಲಸಂಗಮದಲ್ಲಿ ನಡೆಯುವ ಶರಣ ಮೇಳ ಉತ್ಸವಕ್ಕೆ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಯಾಣಿಕರ ಜನದಟ್ಟಣೆಗೆ ಅನುಸರಿಸಿ, ವಿಶೇಷ ಸಾರಿಗೆಗಳನ್ನು ಎಲ್ಲಾ ವಿಭಾಗ ಕೇಂದ್ರಗಳಿಂದ ಓಡಿಸಲು ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳಿಗೆ ಹಾಗೂ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಬಾಗಲಕೋಟೆ, ಇವರಿಗೆ ಕೂಡಲ ಸಂಗಮ ಕ್ರಾಸಿನಿಂದ - ಕೂಡಲ ಸಂಗಮದವರೆಗೆ ಹೆಚ್ಚಿನ ಸಾರಿಗೆ ಓಡಿಸಲು ತಿಳಿಸಲಾಗಿದೆ.

ಹಾಗೂ ಕೂಡಲ ಸಂಗಮ ಕ್ರಾಸ್ ಮೇಲಿಂದ ಕಾರ್ಯಾಚರಣೆಯಾಗುವ ಎಲ್ಲ ಸಾರಿಗೆಗಳಿಗೆ ಕೂಡಲ ಸಂಗಮ ಕ್ರಾಸಿನಲ್ಲಿ ತಾತ್ಕಾಲಿಕ ನಿಲುಗಡೆ ಒದಗಿಸಲು ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಆದೇಶಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಎಂ. ಆರ್. ಮೃತ್ಯುಂಜಯ ಸ್ವಾಮಿ
ಮುಖ್ಯ ಸಂಚಾರ ವ್ಯವಸ್ಥಾಪಕರು
ವಾ : ಕ : ರ : ಸಾ : ಸಂಸ್ಥೆ : ಕೇಂದ್ರ ಕಛೇರಿ, ಹುಬ್ಬಳ್ಳಿ,

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಓಂ ಲಿಂಗಾಯ ನಮಃ ಓಂ ಲಿಂಗಾಯ ನಮಃ

ಓಂ ಶ್ರೀ ಲಿಂಗದೇವಾಯ ನಮಃ

೧೦೮ ಲಿಂಗದೇವ ಸ್ತೋತ್ರ

ರಚನೆ : ಮಾತಾಜಿ

೧. ಪ್ರಣವಾರೂಢ ಲಿಂಗಾಯ ನಮಃ	ಪ್ರಣವ ಸ್ವರೂಪ ಲಿಂಗಾಯ ನಮಃ
೨. ಪ್ರಕೃತಿ ಸೌಂಜ್ಞ ಲಿಂಗಾಯ ನಮಃ	ಷಡಂಗ ಸಮರಸ ಲಿಂಗಾಯ ನಮಃ
೩. ಕರುಣಾಮೂರ್ತಿ ಲಿಂಗಾಯ ನಮಃ	ಮಹಾದಾತ ಲಿಂಗಾಯ ನಮಃ
೪. ಸೃಷ್ಟಿಕರ್ತ ಲಿಂಗಾಯ ನಮಃ	ಸೃಷ್ಟಿಪಾಲಕ ಲಿಂಗಾಯ ನಮಃ
೫. ಮಹಲಯ ಕರ್ತ ಲಿಂಗಾಯ ನಮಃ	ತಿರೋದಾನ ಕರ್ತ ಲಿಂಗಾಯ ನಮಃ
೬. ಮುಕ್ತಿದಾತ ಲಿಂಗಾಯ ನಮಃ	ನಿತ್ಯಮುಕ್ತ ಲಿಂಗಾಯ ನಮಃ
೭. ಕರ್ಮಾಧ್ಯಕ್ಷ ಲಿಂಗಾಯ ನಮಃ	ಕರ್ಮಾತೀತ ಲಿಂಗಾಯ ನಮಃ
೮. ಭವವಿರಹಿತ ಲಿಂಗಾಯ ನಮಃ	ಭಯ ವಿರಹಿತ ಲಿಂಗಾಯ ನಮಃ
೯. ಮಾತೃ ಸ್ವರೂಪ ಲಿಂಗಾಯ ನಮಃ	ಪಿತೃ ಸ್ವರೂಪ ಲಿಂಗಾಯ ನಮಃ
೧೦. ಬಂಧು ಸ್ವರೂಪ ಲಿಂಗಾಯ ನಮಃ	ಭಕ್ತೋದ್ಧಾರಕ ಲಿಂಗಾಯ ನಮಃ
೧೧. ಅಗಮ್ಯ ಅಗೋಚರ ಲಿಂಗಾಯ ನಮಃ	ಅಭವ ಅಜೇಯ ಲಿಂಗಾಯ ನಮಃ
೧೨. ಉಪಮಾತೀತ ಲಿಂಗಾಯ ನಮಃ	ಉನ್ನತ ಮಹಿಮ ಲಿಂಗಾಯ ನಮಃ
೧೩. ಸರ್ವಜ್ಞ ಲಿಂಗಾಯ ನಮಃ	ಸರ್ವವ್ಯಾಪಿ ಲಿಂಗಾಯ ನಮಃ
೧೪. ಸರ್ವತೋಮುಖ ಲಿಂಗಾಯ ನಮಃ	ಸರ್ವಶಕ್ತ ಲಿಂಗಾಯ ನಮಃ
೧೫. ಸರ್ವಕಾರಣ ಲಿಂಗಾಯ ನಮಃ	ಜಗದಾದಿ ಮೂಲ ಲಿಂಗಾಯ ನಮಃ
೧೬. ಸರ್ವಕರ್ತೃ ಲಿಂಗಾಯ ನಮಃ	ಸರ್ವಸ್ವತಂತ್ರ ಲಿಂಗಾಯ ನಮಃ
೧೭. ಸರ್ವಾಂತರ್ಯಾಮಿ ಲಿಂಗಾಯ ನಮಃ	ಸರ್ವಾತೀತ ಲಿಂಗಾಯ ನಮಃ
೧೮. ಸಕಲಾಧಾರ ಲಿಂಗಾಯ ನಮಃ	ಪರಿಪೂರ್ಣಮೂರ್ತಿ ಲಿಂಗಾಯ ನಮಃ
೧೯. ವಿಶ್ವಚೇತನ ಲಿಂಗಾಯ ನಮಃ	ವಿಶ್ವೋತ್ತೀರ್ಣ ಲಿಂಗಾಯ ನಮಃ
೨೦. ಸತ್ಯ ಸ್ವರೂಪ ಲಿಂಗಾಯ ನಮಃ	ನಿತ್ಯ ಸ್ವರೂಪ ಲಿಂಗಾಯ ನಮಃ
೨೧. ಶಾಂತಿ ಸ್ವರೂಪ ಲಿಂಗಾಯ ನಮಃ	ಕ್ರಾಂತಿ ಸ್ವರೂಪ ಲಿಂಗಾಯ ನಮಃ
೨೨. ಪ್ರೇಮ ಸ್ವರೂಪ ಲಿಂಗಾಯ ನಮಃ	ಮಂಗಳ ಮೂರ್ತಿ ಲಿಂಗಾಯ ನಮಃ
೨೩. ಆಕಾರರಹಿತ ಲಿಂಗಾಯ ನಮಃ	ನಿರ್ಮಲ ಆತ್ಮ ಲಿಂಗಾಯ ನಮಃ
೨೪. ಸಗುಣ ಸ್ವರೂಪ ಲಿಂಗಾಯ ನಮಃ	ನಿರ್ಗುಣ ಚೇತನ ಲಿಂಗಾಯ ನಮಃ
೨೫. ವ್ಯಕ್ತ ಸ್ವರೂಪ ಲಿಂಗಾಯ ನಮಃ	ಅವ್ಯಕ್ತ ರೂಪ ಲಿಂಗಾಯ ನಮಃ
೨೬. ವ್ಯಕ್ತಾವ್ಯಕ್ತ ಲಿಂಗಾಯ ನಮಃ	ಇಷ್ಟಪ್ರದಾಯಕ ಲಿಂಗಾಯ ನಮಃ
೨೭. ಪರಮ ಪ್ರಭು ಲಿಂಗಾಯ ನಮಃ	ಸಹಸ್ರಾರವಾಸ ಲಿಂಗಾಯ ನಮಃ

೨೮. ನಾಮ ರಹಿತ ಲಿಂಗಾಯ ನಮಃ	ಅನಂತ ನಾಮ ಲಿಂಗಾಯ ನಮಃ
೨೯. ಪರಂಜ್ಯೋತಿ ರೂಪ ಲಿಂಗಾಯ ನಮಃ	ಪರಮೋನ್ನತ ಶ್ರೀ ಲಿಂಗಾಯ ನಮಃ
೩೦. ಸರ್ವ ಸ್ವತಂತ್ರ ಲಿಂಗಾಯ ನಮಃ	ಶೂನ್ಯ ಸ್ವರೂಪ ಲಿಂಗಾಯ ನಮಃ
೩೧. ನಿಮಿತ್ತ ಕಾರಣ ಲಿಂಗಾಯ ನಮಃ	ಉಪದಾನಕಾರಣ ಲಿಂಗಾಯ ನಮಃ
೩೨. ಶಕ್ತಿ ವಿಶಿಷ್ಟ ಲಿಂಗಾಯ ನಮಃ	ನಿಷ್ಕಲಲಿಂಗ ಲಿಂಗಾಯ ನಮಃ
೩೩. ಮಹಾಲಿಂಗರೂಪ ಲಿಂಗಾಯ ನಮಃ	ಚಿಲ್ಲಿಂಗರೂಪ ಲಿಂಗಾಯ ನಮಃ
೩೪. ಇಷ್ಟಲಿಂಗರೂಪ ಲಿಂಗಾಯ ನಮಃ	ಪ್ರಾಣಲಿಂಗರೂಪ ಲಿಂಗಾಯ ನಮಃ
೩೫. ಭಾವಲಿಂಗರೂಪ ಲಿಂಗಾಯ ನಮಃ	ಸ್ವಯಂಭು ಸ್ವರೂಪ ಲಿಂಗಾಯನಮಃ
೩೬. ಜನನ ವಿರಹಿತ ಲಿಂಗಾಯ ನಮಃ	ಮರಣ ವಿರಹಿತ ಲಿಂಗಾಯ ನಮಃ
೩೭. ಮನಃ ಪ್ರೇರಕ ಲಿಂಗಾಯ ನಮಃ	ಗುರು ಬಸವ ಪ್ರಿಯ ಲಿಂಗಾಯ ನಮಃ
೩೮. ಸೂತ್ರಧಾರ ಲಿಂಗಾಯ ನಮಃ	ಲೋಕ ನಿರ್ವಾಹಕ ಲಿಂಗಾಯ ನಮಃ
೩೯. ಲೋಕ ನಿಯಂತ್ರಕ ಲಿಂಗಾಯ ನಮಃ	ಶರಣ ಜನ ಪ್ರೀತ ಲಿಂಗಾಯ ನಮಃ
೪೦. ವಿದ್ಯಾದಾತ ಲಿಂಗಾಯ ನಮಃ	ಸಂಪತ್‌ದಾತ ಲಿಂಗಾಯ ನಮಃ
೪೧. ಶಕ್ತಿದಾತ ಲಿಂಗಾಯ ನಮಃ	ಜ್ಞಾನದಾತ ಲಿಂಗಾಯ ನಮಃ
೪೨. ಭಕ್ತಿದಾತ ಲಿಂಗಾಯ ನಮಃ	ಯುಕ್ತಿದಾತ ಲಿಂಗಾಯ ನಮಃ
೪೩. ನ್ಯಾಯದಾತ ಲಿಂಗಾಯ ನಮಃ	ಮುಕ್ತಿದಾತ ಲಿಂಗಾಯ ನಮಃ
೪೪. ಪರಮ ಪ್ರಭು ಲಿಂಗಾಯ ನಮಃ	ಕಾರುಣ್ಯನಿಧಿ ಲಿಂಗಾಯ ನಮಃ
೪೫. ನಾದ ಸ್ವರೂಪ ಲಿಂಗಾಯ ನಮಃ	ನಾದಾತೀತ ಲಿಂಗಾಯ ನಮಃ
೪೬. ಬಿಂದು ಸ್ವರೂಪ ಲಿಂಗಾಯ ನಮಃ	ಬಿಂದ್ವಾತೀತ ಲಿಂಗಾಯ ನಮಃ
೪೭. ಕಳಾ ಸ್ವರೂಪ ಲಿಂಗಾಯ ನಮಃ	ಕಳಾತೀತ ಶ್ರೀ ಲಿಂಗಾಯ ನಮಃ
೪೮. ಚೈತನ್ಯರೂಪ ಲಿಂಗಾಯ ನಮಃ	ಜ್ಯೋತಿರೂಪ ಲಿಂಗಾಯ ನಮಃ
೪೯. ಭಕ್ತವತ್ಸಲ ಲಿಂಗಾಯ ನಮಃ	ಭವಭಯಹಾರಕ ಲಿಂಗಾಯ ನಮಃ
೫೦. ಸಹಸ್ರ ಶೀರ್ಷ ಲಿಂಗಾಯ ನಮಃ	ಸಹಸ್ರಾಕ್ಷ ಲಿಂಗಾಯ ನಮಃ
೫೧. ಸಹಸ್ರ ಬಾಹು ಲಿಂಗಾಯ ನಮಃ	ಸಹಸ್ರ ಪಾದ ಲಿಂಗಾಯ ನಮಃ
೫೨. ಕಾಲಾತೀತ ಲಿಂಗಾಯ ನಮಃ	ಅನಾದಿಸ್ವರೂಪ ಲಿಂಗಾಯ ನಮಃ
೫೩. ಘನಲಿಂಗರೂಪ ಲಿಂಗಾಯ ನಮಃ	ಗಣಲಿಂಗರೂಪ ಲಿಂಗಾಯ ನಮಃ
೫೪. ಗುರುಬಸವ ಪ್ರಿಯ ಲಿಂಗಾಯ ನಮಃ	ಸಚ್ಚಿದಾನಂದ ಲಿಂಗಾಯ ನಮಃ
೫೫. ಪಾಹಿಮಾಂ ಮಾಹಿಮಾಂ ಲಿಂಗಾಯ ನಮಃ	ರಕ್ಷಮಾಂ ರಕ್ಷಮಾಂ ಲಿಂಗಾಯ ನಮಃ

ಬಸವ - ಲಿಂಗಸ್ತವನ ಎಂಬ ೬೦ ನಿಮಿಷಗಳ ಧ್ವನಿಸುರುಳಿಯು ತಯಾರಾಗಿದ್ದು,
ಬೆಲೆ ೩೦ ರೂ. ಗಳು

Digitalized by e-Sahithya Documentation Forum
Sponsored by Sarayu Foundation Trust

ಗುರು ಬಸವ ಸ್ತುತಿ

ಗುರು ಬಸವಾ ಓಂ ಗುರು ಬಸವಾ
ರಕ್ಷಿಸು ಜಯ ಶ್ರೀ ಗುರು ಬಸವಾ ॥

೧೦೮ ಗುರುಬಸವ ಸ್ತೋತ್ರ

ರಚನೆ : ಮಾತಾಜಿ

1. ಪರಮ ಕಾರಣಿಕ ಗುರು ಬಸವಾ	ಪಾವನ ಚರಿತ ಗುರು ಬಸವಾ
2. ಕರ್ತ ಸುಪುತ್ರ ಗುರು ಬಸವಾ	ಧರ್ಮ ಸ್ಥಾಪಕ ಗುರು ಬಸವಾ
3. ಮಾದರಸ ಪುತ್ರ ಗುರು ಬಸವಾ	ಮಾದಲಾಂಬಿಕ ಸುತ ಗುರು ಬಸವಾ
4. ಬಾಗೇವಾಡಿಯ ಗುರು ಬಸವಾ	ಭಾಗ್ಯವಿಧಾತ ಗುರು ಬಸವಾ
5. ಸಂಗಮವಾಸಿಯೇ ಗುರು ಬಸವಾ	ಕಲ್ಯಾಣೇಶ್ವರ ಗುರು ಬಸವಾ
6. ಮುಕ್ತಿದಾಯಕ ಗುರು ಬಸವಾ	ದಾರ್ಶನಿಕ ದಿಗ್ಗಜ ಗುರು ಬಸವಾ
7. ಶ್ರೇಷ್ಠ ಪ್ರವಾದಿ ಗುರು ಬಸವಾ	ಅನುಭಾವ ವಾರಿಧಿ ಗುರು ಬಸವಾ
8. ಇಷ್ಟಲಿಂಗದಾತ ಗುರು ಬಸವಾ	ಇಷ್ಟಲಿಂಗ ಧಾರಕ ಗುರು ಬಸವಾ
9. ಲಿಂಗಾಂಗ ಯೋಗಿ ಗುರು ಬಸವಾ	ಇಷ್ಟಪ್ರದಾಯಕ ಗುರು ಬಸವಾ
10. ಸಂಸಾರಯೋಗಿ ಗುರು ಬಸವಾ	ಪರಮ ವಿರಕ್ತ ಗುರು ಬಸವಾ
11. ಮಂತ್ರಪುರುಷ ಗುರು ಬಸವಾ	ಮಂತ್ರಸ್ವರೂಪ ಗುರು ಬಸವಾ
12. ಗಾನವಿಶಾರದ ಗುರು ಬಸವಾ	ತತ್ತ್ವಜ್ಞಾನಿ ಗುರು ಬಸವಾ
13. ಸೇಶ್ವರವಾದಿ ಗುರು ಬಸವಾ	ಸರ್ವಾಂಗಲಿಂಗಿ ಗುರು ಬಸವಾ
14. ಭಕ್ತಿಯೋಗಿ ಗುರು ಬಸವಾ	ಜ್ಞಾನಯೋಗಿ ಗುರು ಬಸವಾ
15. ರಾಜಯೋಗಿ ಗುರು ಬಸವಾ	ಕುಂಡಲಿನಿ ಯೋಗಿ ಗುರು ಬಸವಾ
16. ಷಟ್‌ಚಕ್ರ ಭೇದಕ ಗುರು ಬಸವಾ	ಸಹಸ್ರಾರ ಸಾಧಕ ಗುರು ಬಸವಾ
17. ಕಾಯಕ ಯೋಗಿ ಗುರು ಬಸವಾ	ಶಿವಯೋಗದಾತ ಗುರು ಬಸವಾ
18. ಸಗುಣ ಸಾಕ್ಷಾತ್ಕಾರಿ ಗುರು ಬಸವಾ	ನಿರ್ಗುಣ ಸಾಕ್ಷಾತ್ಕಾರಿ ಗುರು ಬಸವಾ
19. ಪರಿಪೂರ್ಣ ಸಾಕ್ಷಾತ್ಕಾರಿ ಗುರು ಬಸವಾ	ಪವಾಡ ಪುರುಷ ಗುರು ಬಸವಾ
20. ಪರುಷ ಹಸ್ತ ಗುರು ಬಸವಾ	ಪರುಷ ನೇತ್ರ ಗುರು ಬಸವಾ
21. ಪರುಷ ಪಾದ ಗುರು ಬಸವಾ	ಪಾವನಮೂರ್ತಿ ಗುರು ಬಸವಾ
22. ವಾಕ್ಸಿದ್ಧಿ ಪುರುಷ ಗುರು ಬಸವಾ	ಭಾವ ಪರುಷ ಗುರು ಬಸವಾ
23. ಪರಮಪ್ರಸಾದಿ ಗುರು ಬಸವಾ	ನೀತಿವಾದಿ ಗುರು ಬಸವಾ
24. ಜೀವನ್ಮುಕ್ತ ಗುರು ಬಸವಾ	ಸ್ಥಿತಪ್ರಜ್ಞ ಗುರು ಬಸವಾ
25. ಇಚ್ಛಾಮರಣಿ ಗುರು ಬಸವಾ	ಸದ್ಗುಣನಿಧಿ ಗುರು ಬಸವಾ
26. ಸುಜ್ಞಾನ ಮೂರುತಿ ಗುರು ಬಸವಾ	ಅಜ್ಞಾನ ಭೇದಕ ಗುರು ಬಸವಾ
27. ಭವಭಯಹಾರಕ ಗುರು ಬಸವಾ	ಶಿವಸುಖದಾಯಕ ಗುರು ಬಸವಾ

28. ಗುರುಸಾರ್ವಭೌಮ ಗುರು ಬಸವಾ	ಗುರು ಬಸವಲಿಂಗ ಗುರು ಬಸವಾ
29. ಶರಣಜನ ಭಾಸ್ಕರ ಗುರು ಬಸವಾ	ಶರಣ ಗುಣನಿಧಿ ಗುರು ಬಸವಾ
30. ಸಮತಾವಾದಿ ಗುರು ಬಸವಾ	ಮಂಟಪ ನಿರ್ಮಾತೃ ಗುರು ಬಸವಾ
31. ಲಿಂಗಾಯತ ಸಂಸ್ಥಾಪಕ ಗುರು ಬಸವಾ	ಜಂಗಮ ರೂಹಾರಿ ಗುರು ಬಸವಾ
32. ಜಾತಿ ವಿರೋಧಿ ಗುರು ಬಸವಾ	ಸ್ತ್ರೀ ಕುಲೋದ್ಧಾರಕ ಗುರು ಬಸವಾ
33. ಪತಿತೋದ್ಧಾರಕ ಗುರು ಬಸವಾ	ದಲಿತೋದ್ಧಾರಕ ಗುರು ಬಸವಾ
34. ವಿಚಾರವಾದಿ ಗುರು ಬಸವಾ	ರಾಜ ನೀತಿಜ್ಞ ಗುರು ಬಸವಾ
35. ಗಣಿತ ಶಾಸ್ತ್ರಜ್ಞ ಗುರು ಬಸವಾ	ಲಿಪಿತಜ್ಞ ಗುರು ಬಸವಾ
36. ಅರ್ಥ ಶಾಸ್ತ್ರಜ್ಞ ಗುರು ಬಸವಾ	ಸಮಾಜ ಸುಧಾರಕ ಗುರು ಬಸವಾ
37. ಗಣಧರ್ಮದಾಯಕ ಗುರು ಬಸವಾ	ಲೋಕ ಸಂಗ್ರಹಿ ಗುರು ಬಸವಾ
38. ಲಿಂಗಾಚಾರಿ ಗುರು ಬಸವಾ	ಸದಾಚಾರಿ ಗುರು ಬಸವಾ
39. ಶಿವಾಚಾರಿ ಗುರು ಬಸವಾ	ಗಣಾಚಾರಿ ಗುರು ಬಸವಾ
40. ಭೃತ್ಯಾಚಾರಿ ಗುರು ಬಸವಾ	ಸಮಾಜ ವಿಜ್ಞಾನಿ ಗುರು ಬಸವಾ
41. ಲೋಕೋದ್ಧಾರಕ ವಿರೋಧಿ ಗುರು ಬಸವಾ	ಸದಾಚಾರ ಬೋಧಕ ಗುರು ಬಸವಾ
42. ಅಹಿಂಸಾವಾದಿ ಗುರು ಬಸವಾ	ಅಮೂಲ್ಯ ಚಿಂತಕ ಗುರು ಬಸವಾ
43. ವಚನ ಕರ್ತೃ ಗುರು ಬಸವಾ	ದಿವ್ಯಜ್ಞಾನಿ ಗುರು ಬಸವಾ
44. ಸಾಹಿತ್ಯ ಸಾರ್ವಭೌಮ ಗುರು ಬಸವಾ	ಮನಃಶಾಸ್ತ್ರಜ್ಞ ಗುರು ಬಸವಾ
45. ಶರಣಗಣಮಣಿ ಗುರು ಬಸವಾ	ಶರಣ ಜನ ರಕ್ಷಕ ಗುರು ಬಸವಾ
46. ಏಕದೇವ ನಿಷ್ಠ ಗುರು ಬಸವಾ	ಜಂಗಮ ಪ್ರೇಮಿ ಗುರು ಬಸವಾ
47. ಅಷ್ಟಾವರಣದಾತ ಗುರು ಬಸವಾ	ಪಂಚಾಚಾರ ಕರ್ತೃ ಗುರು ಬಸವಾ
48. ಷಟ್‌ಸ್ಥಲದಾತ ಗುರು ಬಸವಾ	ಷಡಂಗ ದಾಸೋಹಿ ಗುರು ಬಸವಾ
49. ಸದ್ಧರ್ಮದಾತ ಗುರು ಬಸವಾ	ವಿಶ್ವ ಧರ್ಮದಾತ ಗುರು ಬಸವಾ
50. ಸ್ವಯಂಕೃತ ಮೂರ್ತಿ ಗುರು ಬಸವಾ	ತ್ರಿವಿಧ ದಾಸೋಹಿ ಗುರು ಬಸವಾ
51. ಕ್ರಾಂತಿಪುರುಷ ಗುರು ಬಸವಾ	ಶಾಂತಿದೂತ ಗುರು ಬಸವಾ
52. ಮಾನವತಾವಾದಿ ಗುರು ಬಸವಾ	ಮನುಕುಲಜ್ಯೋತಿ ಗುರು ಬಸವಾ
53. ವಿಶ್ವಕುಟುಂಬಿ ಗುರು ಬಸವಾ	ಲಿಂಗದೇವಪ್ರಿಯ ಗುರು ಬಸವಾ
54. ಬಸವಾತ್ಮಜೆಪಿತ ಗುರು ಬಸವಾ	ಸಚ್ಚಿದಾನಂದಸುತ ಗುರು ಬಸವಾ
55. ಪಾಹಿಮಾಂ ಪಾಹಿಮಾಂ ಗುರು ಬಸವಾ	ರಕ್ಷಮಾಂ ರಕ್ಷಮಾಂ ಗುರು ಬಸವಾ

ಬಸವ - ಲಿಂಗಸ್ತವನ ಎಂಬ ೬೦ ನಿಮಿಷಗಳ ಧ್ವನಿಸುರುಳಿಯು ತಯಾರಾಗಿದ್ದು,
ಬೆಲೆ ೩೦ ರೂ. ಗಳು

Digitalized by e-Sahithya Documentation Forum
Sponsored by Sarayu Foundation Trust

ಸಮಸ್ಯೆ - ಸಮಾಧಾನ

ಸಿದ್ಧರಾಮಪ್ಪ ಬಾಲಪ್ಪಗೋಳ, ಗುಲ್ಬರ್ಗಾ

- ಜೇಬುಗಾತ್ರಕ್ಕೆ ತಲುಪಿರುವ ಕಲ್ಯಾಣ ಕಿರಣ ನಿಮ್ಮ ಹೊಗಳಿಕೆಗೆ ಮತ್ತು ಇತರರ ತೆಗಳಿಕೆಗೆ ಮಾತ್ರ ಮೀಸಲಾಗಿದೆಯಲ್ಲಾ ?

* ಹೌದು. ಕಲ್ಯಾಣ ಕಿರಣವು ವಿಶ್ವಕಲ್ಯಾಣ ಮಿಷನ್ ಮತ್ತು ಬಸವ ಧರ್ಮ ಪೀಠದ ಮುಖವಾಣಿ. ನಮ್ಮ ಧ್ಯೇಯೋದ್ದೇಶ ಮತ್ತು ಆಲೋಚನಾಧಾರೆಯನ್ನು ಜನರಲ್ಲಿ ಬಿಂಬಿಸಲೆಂದೇ ಉಚಿತ ದಾಸೋಹವನ್ನು ಅದು ಮಾಡುತ್ತಿದೆ. 1970ರಲ್ಲಿ 100ರೂಗಳ ಆಜೀವ ಸದಸ್ಯತ್ವ ತೆಗೆದುಕೊಂಡು ಶುರುವಾದ ಕಲ್ಯಾಣ ಕಿರಣ ಪತ್ರಿಕೆಯನ್ನು ಸುಮಾರು 30 ವರ್ಷ ಕಾಲ ಅವರಿಗೆ ಕಳುಹಿಸುತ್ತಲೇ ಇದ್ದೇವೆ ಎಂದರೆ ಇದು ಉಚಿತ (ಜ್ಞಾನ) ದಾಸೋಹವೆ. ನಮ್ಮ ಆಲೋಚನೆಗಳನ್ನು ಸಂವಹನ ಮಾಡುವ ಮಾಧ್ಯಮವೇ ಕಲ್ಯಾಣ ಕಿರಣ. ಅದು ಹೊರಬರುವ ಮೊದಲು ನಾವು ಪ್ರವಚನವನ್ನು ಒಂದು ಸ್ಥಳದಲ್ಲಿ ಮಾಡಿ ಮುಂದೆ ಇನ್ನೊಂದು ಕಡೆ ಹೋದರೆ ಸ್ಥಳೀಯ ಮಠಾಧೀಶರು ಬಗೆಬಗೆಯ ವದಂತಿಗಳನ್ನು ಹಬ್ಬಿಸುತ್ತಿದ್ದರು. ಕಲ್ಯಾಣ ಕಿರಣ ಹುಟ್ಟಿದ ಮೇಲೆ ಇಂಥ ಕುಚೇಷ್ಟೆಗಳಿಗೆ ಅವಕಾಶ ಇಲ್ಲದಾಯಿತು.

40 ಪುಟಗಳಿಗೆ ಕಡಿಮೆ ಇಲ್ಲದಂತೆ ಒಮ್ಮೊಮ್ಮೆ (ನಷ್ಟವಾಗುತ್ತಿದ್ದರೂ) ಹೇಳಬೇಕಾದ ವಿಷಯವಿದ್ದಾಗ ನಮಗೆ ಅಂಚೆ ಇಲಾಖೆಯವರು ರಿಯಾಯತಿ ದರಕ್ಕೆ ನಿಗದಿ ಪಡಿಸಿದ 48 ಪುಟಗಳಿಗೂ ಮೀರಿ ಕಳುಹಿಸುವುದುಂಟು. ಇತ್ತೀಚೆಗೆ ಒಂದು ತಿಂಗಳೂ ತಪ್ಪದಂತೆ ಪತ್ರಿಕೆ ಹೊರಬರುತ್ತಿರುವುದು ಗಮನಾರ್ಹ.

ಇನ್ನು ಸ್ವಂತ ಹೊಗಳಿಕೆ, ಪರರ ತೆಗಳಿಕೆಯ ವಿಷಯ. ಪ್ರತಿಯೊಬ್ಬ ವ್ಯಕ್ತಿಯು ತನ್ನ ವಿಚಾರಧಾರೆ ಬಿಂಬಿಸಲು ಹಕ್ಕುಳ್ಳವನಾಗಿದ್ದಾನೆ. ದಿನಾಂಕ 14-12-99 ಪತ್ರಿಕಾ ಗೋಷ್ಠಿ ಕರೆದಾಗ ಓರ್ವ ಅಧಿಕ ಪ್ರಸಂಗಿ ಪತ್ರಿಕೆಯ ಪ್ರತಿನಿಧಿ ಕೇಳಿದರು "ನೀವು (ಅಂದರೆ ಲಿಂಗಾಯತ ಸಮಾಜದವರು) ಧರ್ಮಕಾರಣವನ್ನು ನಿಷೇಧಿಸಲು ಹೋರಾಡಿದಿರಿ. ಡಾ|| ಪಿ. ವಿ. ನಾರಾಯಣ ಅವರಿಗೆ ತಮ್ಮ ವಿಚಾರಧಾರೆ ಮಂಡಿಸಲು ಅವಕಾಶ ಕೊಡಲಿಲ್ಲ." ಎಂದು. ಆಗ ನಾನು ಉತ್ತರಿಸಿದೆ, "ಬೇರೆಯವರು ವೇದಿಕೆ ಕಲ್ಪಿಸಬೇಕಿಲ್ಲ. ನಮ್ಮ ವಿಚಾರಧಾರೆ ಜನರ ಮುಂದೆ ಇಡಬೇಕಾದ ನಾವು ವೇದಿಕೆ ನಿರ್ಮಿಸಿಕೊಳ್ಳಬೇಕಾಗುತ್ತದೆ. ಡಾ|| ಪಿ. ವಿ. ನಾರಾಯಣ್‌ಗೆ ಆ ರೀತಿಯ ಆತ್ಮ ವಿಶ್ವಾಸವಿದ್ದರೆ ಅವರು ವೇದಿಕೆ ನಿರ್ಮಿಸಿಕೊಳ್ಳಬಹುದಿತ್ತು" ಎಂದೆ. ಅದೇ ರೀತಿ ಲಿಂಗದೇವನ ಪರಿಕಲ್ಪನೆ ಅರ್ಥಮಾಡಿಕೊಳ್ಳದ ಅರೆಬರೆ ವಚನಾಭ್ಯಾಸಿಗಳು ಆಕಾಶ ಭೂಮಿ ಒಂದು ಮಾಡುವಂತೆ ಹುಯಿಲೆಬ್ಬಿಸಿದಾಗ ನಾವು ಯಾರನ್ನೂ ವೇದಿಕೆ ಕಲ್ಪಿಸಿರಿ ಎಂದು

ಗೋಗರೆಯಲು ಹೋಗಲಿಲ್ಲ. ಶರಣ ಮೇಳ, ಪ್ರವಚನ ಕಲ್ಯಾಣ ಕಿರಣದ ಮೂಲಕ ಸೈದ್ಧಾಂತಿಕವಾಗಿ ಮಂಡಿಸುತ್ತಾ ಹೋದಾಗ ಈಗ ಹೆಚ್ಚಿನ ಜನರು (ಏನೇ ಆದರೂ ಒಪ್ಪಿಕೊಳ್ಳಬಾರದು ಎಂಬ ಪೂರ್ವಾಗ್ರಹಪೀಡಿತ ಜನರನ್ನು ಬಿಟ್ಟು) ಲಿಂಗದೇವನ ಪರಿಕಲ್ಪನೆಯನ್ನು ಮೆಚ್ಚಿ ಅರಿತು ಆನಂದಿಸುತ್ತಿದ್ದಾರೆ. ಹೀಗೆ ನಮ್ಮನ್ನು ನಾವು ಸೈದ್ಧಾಂತಿಕವಾಗಿ ಪರಿಚಯಿಸಿಕೊಳ್ಳಲು ಕಲ್ಯಾಣಕಿರಣ ಶಕ್ತಿಶಾಲಿ ಮಾಧ್ಯಮವಾಗಿದೆ.

ಅಹಿಂಸಾತ್ಮಕ - ವೈಚಾರಿಕ ಅಸ್ತ್ರ:- ಕಲ್ಯಾಣಕಿರಣ ನಿಜವಾದ ಗಣಾಚಾರಿ. ಗಣಾಚಾರವೆಂದರೆ ಇನ್ನೊಬ್ಬರನ್ನು ಹೊಡಿ, ಬಡಿ ಎಂಬ ಭಾಷೆಯಲ್ಲ. ನಿಜ ಬಸವ ತತ್ತ್ವಾನುಯಾಯಿಗಳು ಅಂತಃಕರಣ ಸಾಕ್ಷಿಯಾಗಿ ಬದುಕಬೇಕು. ಕೆಡುಕು ಬುದ್ಧಿಯ ಜನರು ಗೂಂಡಾಗಿರಿ ಮಾಡಬಹುದೇ ವಿನಾ ಅದು ಶರಣರಿಗೆ ಸಲ್ಲದ ನಡೆ. ಅಂದಾಗ ಹಣದ ಬಲ ಉಪಯೋಗಿಸಿ, ಗೂಂಡಾಗಿರಿ ದೌರ್ಜನ್ಯ ಮಾಡುವ ಮಾರ್ಗ ಹಿಡಿದು ಸತ್ಯದ ಬಾಯಿ ಮುಚ್ಚಿಸ ಹೋಗುವವರಿಗೆ ಕೇವಲ ಸಾಹಿತ್ಯದ ಶಸ್ತ್ರದ ಮೂಲಕ ಮಾತ್ರ ಉತ್ತರ ಕೊಡುತ್ತಾ, ನ್ಯಾಯದ ತೀರ್ಪನ್ನು ದೇವರೆಂಬ ನ್ಯಾಯಾಧೀಶನಿಗೆ ಬಿಟ್ಟುಕೊಟ್ಟ ಸಾತ್ವಿಕ ಮಾರ್ಗಿಗಳು ನಾವು. ಆದ್ದರಿಂದ ಕಲ್ಯಾಣ ಕಿರಣ ಸ್ವಪ್ರಶಂಸೆ ಮಾಡಿಕೊಳ್ಳದೆ ಸತ್ಯದ ಪ್ರತಿಪಾದನೆ ಮಾತ್ರ ಮಾಡುತ್ತದೆ ಎಂದು ದೃಢವಾಗಿ ಹೇಳಬಲ್ಲೆವು.

ರಾಷ್ಟ್ರೀಯ ಬಸವ ದಳ, ಒಂದೂರು

- ಓರ್ವರು ರಾಷ್ಟ್ರೀಯ ಬಸವ ದಳದವರೇ ಹೇಳುತ್ತಿದ್ದರು. ಬ್ರಹ್ಮ ಕುಮಾರಿ ಸಂಸ್ಥೆ ಸುಮಾರು 75 ವರ್ಷಗಳಲ್ಲಿ ಎಷ್ಟು ಬೆಳೆಯಿತು? ರಾಷ್ಟ್ರೀಯ ಬಸವ ದಳ ಅಷ್ಟು ಬೆಳೆಯುತ್ತಿಲ್ಲ ಏಕೆ? ಆ ತತ್ತ್ವ ಚೆನ್ನಾಗಿದೆ ಅದಕ್ಕೇ ಬೆಳೆಯುತ್ತಿದೆ ಎಂದು.

* ರಾಷ್ಟ್ರೀಯ ಬಸವ ದಳಕ್ಕೆ ಇರುವ ತೊಂದರೆ ಬ್ರಹ್ಮಕುಮಾರಿ ಸಂಸ್ಥೆಗಿಲ್ಲ. ಏಕೆಂದರೆ ಲಿಂಗಾಯತ ಧರ್ಮದ ಆಚಾರ-ವಿಚಾರ ಬಿಡಿಸಿ ಇಷ್ಟಲಿಂಗ, ಅಷ್ಟಾವರಣ ವಿರಹಿತರನ್ನಾಗಿ ಮಾಡುವ ಬ್ರಹ್ಮಕುಮಾರಿ ಸಂಸ್ಥೆಯ ಶಾಖೆಗಳನ್ನು ಲಿಂಗಾಯತ ಸ್ವಾಮಿಗಳೇ ಉದ್ಘಾಟಿಸುತ್ತಾರೆ, ಕೊಂಡಾಡುತ್ತಾರೆ. ರಾಷ್ಟ್ರೀಯ ಬಸವ ದಳ ಶುರುವಾಗಿ ಲಿಂಗಾಯತ ಧರ್ಮದ ಪ್ರಾರ್ಥನೆ, ವಚನ ಸಾಹಿತ್ಯ ಅಧ್ಯಯನ ಶುರುವಾಗುತ್ತಲೇ ಅದನ್ನ ಹೇಗೆ ನಿಲ್ಲಿಸಬೇಕು ಎಂದು ಬಾಲಗ್ರಹಗಳಾಗಿ ಕೆಲವು ಸ್ಥಳೀಯ ಮಠಾಧೀಶರು, ಮುಖಂಡರು ಕಾಡುತ್ತಾರೆ. ಇಂಥ ಅಡೆತಡೆಯ ಮಧ್ಯದಲ್ಲೂ ರಾಷ್ಟ್ರೀಯ ಬಸವ ದಳ ಮಾಡಿರುವ ಮತ್ತು ಮಾಡುತ್ತಿರುವ ಕಾರ್ಯ ಅಗಾಧ. ಅದರ ಹೆಸರು ರೂಪುಗೊಂಡಿದ್ದು 1981ರಲ್ಲಿ, ವ್ಯವಸ್ಥಿತವಾಗಿ ಕೆಲಸ ಮಾಡಲು ಆರಂಭಿಸಿದ್ದು 1988ರಲ್ಲಿ. ಕೇವಲ 13 ವರ್ಷಗಳಲ್ಲಿ ಇಷ್ಟು ಆಗಿದೆ ಎಂದರೆ, 75 ವರ್ಷಗಳಲ್ಲಿ ಹೇಗೆ ಬೆಳೆಯಬಹುದು ನೀವೇ ಆಲೋಚಿಸಿರಿ. ಶರಣ ಮೇಳದ ವಿಸ್ತಾರ, ಯಶಸ್ಸು, ಬಸವ ಧರ್ಮ ಸಮ್ಮೇಳನದ ಯಶಸ್ಸು ರಾಷ್ಟ್ರೀಯ ಬಸವ ದಳದ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ.

ಕೆಲವರಿಗೆ ತಮ್ಮ ಮನೆಯ ಅಡಿಗೆ ರುಚಿಸದು, ಪಕ್ಕದ ಮನೆಯವರ ಅಡಿಗೆಯೇ

Digitalized by e-Sahithya Documentation Forum
Sponsored by Sarayu Foundation Trust

ಬಹಳ ರುಚಿಯಾಗಿರುವುದು. ಅಲ್ಲದೆ ಹೀಗೆ ಹೇಳಿದವರು ರಾಷ್ಟ್ರೀಯ ಬಸವ ದಳಗಳನ್ನು ಬೆಳೆಸಲು ಎಷ್ಟು ಪರಿಶ್ರಮ ಪಟ್ಟಿದ್ದಾರೆ ಎಂದೂ ಕೇಳಿ ನೋಡಿರಿ.

ಎಸ್. ಡಿ. ಗೋಕಾವಿ, ಸಾಂತಾಕ್ರೂಜ್, ಮುಂಬಯಿ.

- "ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ" ಧರ್ಮಗುರು ಬಸವಣ್ಣನವರ ವಾಣಿಯನ್ನು ಅನುಸರಿಸಿ, ನಮ್ಮ ಮಗ ಗಿರೀಶನು ಗಣಪತಿ ಮೂರ್ತಿ ತಂದು ಮನೆಯಲ್ಲಿ ಇಡಲು ಪ್ರಯತ್ನಿಸಿದಾಗ ನಾನು ತರಗೊಡಲಿಲ್ಲ. ನಾನು ಯಾವ ಗುಡಿಗೂ ಹೋಗುವುದಿಲ್ಲ. ಕೇವಲ ಇಷ್ಟಲಿಂಗ ಪೂಜೆ ಮಾಡುತ್ತೇನೆ. ವಚನ ಸಾಹಿತ್ಯವನ್ನು, ಬಸವ ವಚನ ದೀಪ್ತಿಯನ್ನು ಓದುತ್ತೇನೆ. ಕಲ್ಯಾಣ ಕಿರಣಕ್ಕಾಗಿ ಕಾಯುತ್ತಿರುತ್ತೇನೆ. ಇದು ಸರಿಯೇ ತಪ್ಪೇ?

* ನೂರಕ್ಕೆ ನೂರು ಸರಿ. ಗುರು (ಬಸವಣ್ಣ) ಲಿಂಗ (ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗ) ಜಂಗಮ (ಜ್ಞಾನಿಗಳು)ದ ಹೊರತಾಗಿ ಅನ್ಯ ದೇವತೆಗಳನ್ನು ಪೂಜಿಸಬಾರದು. ಗಣಪತಿ-ಸಮುದಾಯದ ಒಡೆಯ, ನಾಯಕ ಎಂಬುದು ಒಂದು ವಿಶಿಷ್ಟ ಪರಿಕಲ್ಪನೆ. ಆನೆಯ ಮುಖದ ಮೊರದಗಲ ಕಿವಿಯ ವಿಕೃತ ರೂಪದ ಗಜಮುಖನೇ ಎಲ್ಲರಿಗೂ ಗಣಪತಿಯಲ್ಲ. ಬೌದ್ಧರಿಗೆ ಬುದ್ಧ ಗಣಪತಿ, ಜೈನರಿಗೆ ತೀರ್ಥಂಕರರು ಗಣಪತಿಗಳು, ನಮಗೆ ಅಂದರೆ ಲಿಂಗಾಯತ ಧರ್ಮೀಯರಿಗೆ ಧರ್ಮಗುರು ಬಸವಣ್ಣನವರೇ ಗಣಪತಿ. ಧರ್ಮವನ್ನು ತಿಳಿದು ನಡೆಯುವ ಲಿಂಗಾಯತರು ಗಣಪತಿ, ಲಕ್ಷ್ಮಿ, ಸರಸ್ವತಿ ಮುಂತಾದ ದೇವತೆಗಳನ್ನು ಪೂಜಿಸಬಾರದು.

- ನಮ್ಮ ಸುತ್ತಮುತ್ತಲೂ ಗಣಪತಿ, ಸರಸ್ವತಿ, ಸತ್ಯನಾರಾಯಣ ಮುಂತಾದ ಪೂಜೆಗಳೇ ನಡೆಯುವುದು. ಮದುವೆಗೆ ಮುಂಚೆ ಕುಂಡಲ ನೋಡುವುದು, ಸೂತಕ ಪಾಲಿಸುವುದು ನಡೆಯುತ್ತವೆ. ಅಂಥ ಪ್ರೋಗ್ರಾಂಗೆ ಹೋಗಬೇಕೆ ಬೇಡವೇ ?

* ಸೂತಕ ಮುಂತಾದ ಆಚರಣೆ ಕೂಡದು. ಜಾತಕ ಬರೆಸುವುದು ತಪ್ಪು. ವರ-ಕನ್ಯೆಯರ ಸ್ವಭಾವ, ಮನೆತನ ಮುಂತಾಗಿ ನೋಡಿ ನಿರ್ಧರಿಸಬೇಕೇ ವಿನಾ ಜಾತಕ ನೋಡಿ ವ್ಯವಹರಿಸುವುದು ಶುದ್ಧ ತಪ್ಪು. ಅನ್ಯ ದೇವತೆಗಳ ಪೂಜೆ ಮಾಡುವುದಾಗಲೀ ಅವುಗಳ ಪ್ರಸಾದ ತೆಗೆದುಕೊಳ್ಳುವುದಾಗಲೀ ಸೂಕ್ತವಲ್ಲ.

ಲಿಂಗಾಯತ ಸಮಾಜದ ದುರ್ದೈವ, ತಮ್ಮ ಧರ್ಮ - ಪರಂಪರೆ-ಸಂಸ್ಕೃತಿಗೆ ಅನುಗುಣವಾಗಿ ಬಸವ ಮಂಟಪಗಳನ್ನು ನಿರ್ಮಿಸಿಕೊಂಡಿಲ್ಲ ; ಸಾಮೂಹಿಕ ಶರಣ ಕೂಟಗಳನ್ನು ಏರ್ಪಡಿಸುವುದಿಲ್ಲ. ಹೀಗಾಗಿ ತಮ್ಮ ಧರ್ಮವು ಏನೆಂಬ ಬಗ್ಗೆ ಅವರಿಗೆ ತಿಳಿದೇ ಇಲ್ಲ. ಅವರನ್ನು ಕಂಡು ಅವರಂತೆ ಇವರನ್ನು ಕಂಡು ಇವರಂತೆ ಮಾಡುವರು. ಸಿಖ್ ಧರ್ಮವು ನಮ್ಮ ಧರ್ಮವು. ಹುಟ್ಟಿದ 400 ವರ್ಷಗಳ ನಂತರ ಹುಟ್ಟಿತು. ಒಂದು ಊರಲ್ಲಿ ಅವರವು ಮೂವತ್ತೇ ಮನೆ ಇರಲಿ ಗುರುದ್ವಾರಗಳನ್ನು ನಿರ್ಮಿಸಿಕೊಂಡು ತಮ್ಮ ಧರ್ಮಗುರು ಹೇಳಿದಂತೆ ನಡೆಯುತ್ತಾರೆ. ಕ್ರೈಸ್ತರು 10 ಮನೆ ಇದ್ದರೆ ಒಂದು ತೆಂಗಿನ ಗರಿಯ ಚಪ್ಪರ

ಹಾಕಿಯಾದರೂ ಚರ್ಚ್ ಮಾಡಿಕೊಂಡು ಪ್ರಾರ್ಥನೆ, ಧಾರ್ಮಿಕ ಕೂಟಗಳನ್ನು ನಡೆಸುತ್ತಾರೆ. ಲಿಂಗಾಯತರು ಲಕ್ಷಗಟ್ಟಳೆ ಸಂಖ್ಯೆ ಇರುವಲ್ಲಿ ಸಹ ತಮ್ಮದಾದ, ಧರ್ಮಪಿತ ಬಸವಣ್ಣನವರು ಮಾದರಿಯಾಗಿ ಕಟ್ಟಿ ತೋರಿಸಿದ ಅನುಭವ ಮಂಟಪದಂಥ ಒಂದು ಸಂಸ್ಥೆಯನ್ನು ಕಟ್ಟಿಕೊಳ್ಳುವುದಿಲ್ಲ. ಮಾನ್ಯ ಜತ್ತಿಯವರು ಕಟ್ಟಿಸಿದ ಬೆಂಗಳೂರಿನ ಆಧುನಿಕ ಅನುಭವ ಮಂಟಪದಲ್ಲಿ ಸೀರೆಗಳ ಪ್ರದರ್ಶನ - ಸೇಲ್ ನಡೆಯುತ್ತದೆ. ಚಿತ್ರದುರ್ಗದಲ್ಲಿ ಒಂದು ಸುಂದರವಾದ ಬಸವ ಮಂಟಪ ಕಟ್ಟಿ ನಮ್ಮ ರಾಷ್ಟ್ರೀಯ ಬಸವ ದಳದವರು ಲಿಂಗಾಯತ ಧರ್ಮದ ಸಂವಿಧಾನಕ್ಕೆ ಅನುಗುಣವಾಗಿ ಧಾರ್ಮಿಕ ಕ್ರಿಯೆ ನಡೆಸುತ್ತಿದ್ದರೆ ಅದನ್ನು ಸಹಿಸಿಕೊಳ್ಳದೆ ಸಾರಾಯಿ ದೊರೆಯೊಬ್ಬರನ್ನು ಬಿಟ್ಟು ಬೃಹನ್ಮಠದವರು ಬಸವ ಮಂಟಪವನ್ನು ಕಬ್ಜಾ ತೆಗೆದುಕೊಂಡು ಧಾರ್ಮಿಕ ಚಟುವಟಿಕೆ ನಿಲ್ಲಿಸಿದರು. ಇಂಥ ವಿಷಮ ವಾತಾವರಣದಲ್ಲಿ ಶರಣರು ತಮ್ಮ ತಮ್ಮ ಮನೆಗಳನ್ನೇ ಶರಣ ಧರ್ಮಾಚರಣೆಯ ಕೇಂದ್ರಗಳನ್ನಾಗಿ ಮಾಡಿ, ವೈಯಕ್ತಿಕವಾಗಿ ಬಸವ ತತ್ತ್ವವನ್ನು ರಕ್ಷಿಸಬೇಕಾಗಿದೆ. ಈ ವನವಾಸದಿಂದ ಲಿಂಗಾಯತ ಧರ್ಮಕ್ಕೆ ಬಿಡುಗಡೆ ಎಂದೋ ಎಂದು ಕಾಯಬೇಕಾಗಿದೆ.

ಸುಮಿತ್ರಾ ದನದಮನಿ, ಧಾರವಾಡ

-ಕಲಿಯುಗದಲ್ಲಿ ದೇವರ ಮಹಿಮೆ ಗೋಚರವಾಗದು, ಇದು ಕೆಟ್ಟ ಕಾಲ ಎನ್ನುವರಲ್ಲ. ಇದು ನಿಜವೆ?

* ಯಾವ ಯುಗವೂ ಕೆಟ್ಟದಲ್ಲ. ಒಳ್ಳೆಯದೂ ಅಲ್ಲ. ಅಲ್ಲಿ ವಾಸಿಸುವ ಜನರ ಆಚಾರ-ವಿಚಾರಗಳ ಮೇಲೆ ಹೀಗೆಂದು ಜನರು ಮಾತನಾಡುವರು. ದೇವರ ಮಹಿಮೆ ಮಾತ್ರ ಮಾನವರ ಗುಣನಡತೆಗಳಿಗನುಸಾರವಾಗಿ ಯಾವಾಗಲೂ ಕೆಲಸ ಮಾಡುವುದು; ತೀರ್ಪು ಕೊಡುವುದು. ಧರ್ಮಪಿತ ಬಸವಣ್ಣನವರ ದಿವ್ಯ ಆದೇಶದಂತೆ ಸೃಷ್ಟಿಕರ್ತನನ್ನು ಮೆರೆಸುವ ಪರಮಪವಿತ್ರ ಪದ 'ಲಿಂಗದೇವ'ವನ್ನು ಬಸವಣ್ಣನವರ ವಚನಗಳಲ್ಲಿ ಪ್ರತಿಷ್ಠಾಪಿಸಿದೆ. ಲಿಂಗದೇವದ ಮಹತ್ವವನ್ನಾಗಲೀ, ದೈವೀಪ್ರೇರಣೆಗಳ ಸತ್ವವನ್ನಾಗಲೀ ಅರಿಯದ ಶ್ರೀಮತಿ ಲೀಲಾದೇವಿ ಪ್ರಸಾದ, ಶ್ರೀ ಎಂ. ಪಿ. ಪ್ರಕಾಶ್ ಅವರು ನಮ್ಮ ಮೇಲಿನ ಭಯಂಕರ ದ್ವೇಷದಿಂದ ಶ್ರೀ ಜೆ. ಎಚ್. ಪಟೇಲರ ಮೇಲೆ ಒತ್ತಡ ತಂದು ಬಸವ ವಚನ ದೀಪ್ತಿಯನ್ನು ಮುಟ್ಟುಗೋಲು ಹಾಕಿಸಿದರು. ಈ ಮೂವರು ಕತ್ತಿ ಹಿರಿದುದು ನಮ್ಮ ಮೇಲಲ್ಲ. ಆದೇಶ ನೀಡಿದ ಬಸವಣ್ಣನ ಮೇಲೆ, ಸೃಷ್ಟಿಕರ್ತ ಲಿಂಗದೇವನ ಮೇಲೆ. ನಾವು ನೊಂದುಕೊಂಡೆವು. ಆದರೆ ದೇವರು ಮತ್ತು ಬಸವಣ್ಣನವರು ಈ ಮೂವರ ಅಧಿಕಾರವನ್ನೇ ಮುಟ್ಟುಗೋಲು ಹಾಕಿ ಮುಖಭಂಗಿತರನ್ನಾಗಿ ಮಾಡಿದರು. ಅಂದಾಗ ಕಲಿಯುಗದಲ್ಲಿ ಸಹ ದೈವೀಶಕ್ತಿ ಕೆಲಸ ಮಾಡುತ್ತಿದೆ ಎಂದು ಸಾಬೀತಾಗದೆ?

ಆರ್. ಎಸ್. ಪಾಟೀಲ್, ರಾಯಚೂರು.

- ಸೋನಿಯಾ ಅವರ ಬಗ್ಗೆ ನಿಮಗೆ ಪೂರ್ವಾಗ್ರಹ ಪೀಡಿತ ದೃಷ್ಟಿಕೋನವಿದೆ.

Digitalized by e-Sahithya Documentation Forum
Sponsored by Sarayu Foundation Trust

ಬಳ್ಳಾರಿಯ ಮತದಾರರು ಅವರನ್ನು ಆಯ್ಕೆ ಮಾಡಿ, ತಮ್ಮ ಬುದ್ಧಿಮತ್ತೆಯನ್ನೇ ಪ್ರದರ್ಶಿಸಿದ್ದಾರೆ ಎಂದು ನನ್ನ ಅಭಿಪ್ರಾಯ.

* ಯಾವಾಗಲೂ ವಿವೇಕಿಗಳಾದವರು ಸರಿಯಾಗಿ ಆಲೋಚಿಸಬೇಕು. ಒಂದು ದೇಶ, ಅದರ ಸಂಸ್ಕೃತಿ, ಪರಂಪರೆ - ಈ ಎಲ್ಲ ದೃಷ್ಟಿಯಿಂದ ಪರಿಶೀಲಿಸಬೇಕು. ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿ ಇಲ್ಲದಾಗ ಸ್ವತಂತ್ರ ವಿಚಾರಶಕ್ತಿ ಇದ್ದವರು ಹೇಳುವ ವಿಚಾರದಲ್ಲಾದರೂ ನಂಬಿಕೆ ಇಡಬೇಕು. ಸೋನಿಯಾ ಹುಟ್ಟಿದ್ದು, ಬೆಳೆದದ್ದು ಇಟಲಿಯಲ್ಲಿ. ಅವರ ಕುಟುಂಬದ ಹಿನ್ನೆಲೆ ಸರಿಯಿಲ್ಲ ಬಸವ ಸಿದ್ಧಾಂತದ ಪ್ರಕಾರ ವ್ಯಕ್ತಿಯ ಹುಟ್ಟು ಮುಖ್ಯವಲ್ಲ. ಸಾಧನೆ ಮುಖ್ಯ. ಅವರು ಹುಟ್ಟಿದ ಕುಟುಂಬ, ಬೆಳೆದ ಪರಿಸರ ಹೇಗೆ ಇರಲಿ, ಸಾಧನೆಯ ದೃಷ್ಟಿಯಿಂದಲಾದರೂ ಏನನ್ನಾದರೂ ಮಾಡಿರಬೇಕು. ಈ ಯಾವ ದೃಷ್ಟಿಯಿಂದಲೂ ಸೋನಿಯಾರ ಸಾಧನೆ ಏನೂ ಇಲ್ಲ. ಒಂದು ವೇಳೆ ಕ್ರಿಯಾಶೀಲ ವ್ಯಕ್ತಿತ್ವ ಇದ್ದುದೇ ಆದರೆ ಅವರು ಸುಮ್ಮನೇ ಕೂರುತ್ತಿರಲಿಲ್ಲ. ಇದ್ದಕ್ಕಿದ್ದಂತೆಯೇ ಅವರನ್ನು ಅತ್ಯಂತ ಹೆಚ್ಚಿನ ಹುದ್ದೆ - ಪ್ರಧಾನಿ ಗದ್ದುಗೆಗೆ ಏರಿಸುವ ಪ್ರಯತ್ನ ಮಾಡಿದ ಕಾಂಗ್ರೆಸ್ಸಿನವರ ಪ್ರಯತ್ನವೇ ಆಶ್ಚರ್ಯಕರ ಪ್ರಸಂಗ. ಯಾರು ಗದ್ದುಗೆ ಏರಿದರೆ ನಮಗೇನು? ನಮಗಿರುವ ಕಾಳಜಿ ರಾಷ್ಟ್ರವನ್ನು ಕುರಿತಾದುದು. ಐರೋಪ್ಯ ದೇಶ ಮತ್ತು ಅಮೆರಿಕಗಳೊಡನೆ ಜನಾಂಗೀಯ ಸಂಬಂಧ ಹೊಂದಿರುವ ಸೋನಿಯಾ ಭಾರತವನ್ನು ಪ್ರೀತಿಸಿ ಬಂದವರಲ್ಲ. ಎಲ್ಲರ ತಲೆಯ ಮೇಲೆ ಮೆಣಸನ್ನು ಅರಿಯಬೇಕು ಎಂಬ ಅಮೇರಿಕಾ ಮತ್ತು ಐರೋಪ್ಯ ರಾಷ್ಟ್ರಗಳು ಸೋನಿಯಾರ ಮುಖಾಂತರ ಏನೇನು ಮಾಡಬಹುದಾಗಿತ್ತು?! ಆ ವಿಪತ್ತು ತಪ್ಪಿದ್ದಕ್ಕೆ ಸಮಾಧಾನವೆನಿಸಿದೆ. ಆ ವಿಪತ್ತು ತಪ್ಪಿಸಿದ್ದಕ್ಕೆ ದೇವರಿಗೆ ಅನಂತ ಧನ್ಯವಾದ ಅರ್ಪಿಸಬೇಕಾಗಿದೆ. ಬಳ್ಳಾರಿ ಅಥವಾ ಕರ್ನಾಟಕದ ಮತದಾರರು ಜಾಗೃತರಾಗಿರದಿದ್ದರೂ ಉಳಿದ ರಾಜ್ಯಗಳವರು ಜಾಗೃತಿ ಪ್ರದರ್ಶಿಸಿರುವುದು ಅಭಿನಂದನೀಯ.

ಚಂದ್ರಕಾಂತ, ಒಂದೂರು.

- ನಮ್ಮೂರಲ್ಲಿ ಒಂದು ರಾಷ್ಟ್ರೀಯ ಬಸವದಳ ಮಾಡಿ ಸಾಮೂಹಿಕ ಪ್ರಾರ್ಥನೆ ನಡೆಸಬೇಕು ಎಂದು ಕೆಲವರು ಆಲೋಚಿಸುತ್ತಿದ್ದೇವೆ. ಆದರೆ ಸಮಾಜದ ಎಲ್ಲರೂ ಒಂದುಗೂಡುತ್ತಿಲ್ಲ. ಹೀಗಾಗಿ ನಮ್ಮ ಆಸೆ ನೆರವೇರುತ್ತಿಲ್ಲ. ಏನು ಮಾಡಬೇಕು?

* ಲಿಂಗಾಯತ ಸಮಾಜದವರು ಒಂದು ಕಡೆ ಸೇರುತ್ತಾರೆ. ಆಗ ಶುರುಮಾಡೋಣ; ಎಂದು ನೀವು ನಿರೀಕ್ಷಿಸುವುದು ಸಮುದ್ರದ ಅಲೆಗಳು ನಿಂತಾಗ ನಾನು ಸ್ನಾನ ಮಾಡುತ್ತೇನೆ ಎಂದು ಅಲೆನಿಲ್ಲುವುದನ್ನು ಕಾಯುತ್ತ ಕುಳಿತ ಮೂಢಮತಿಯಂತಾದೀತು. ಸಮಾಜವು ಛಿದ್ರವಿಚ್ಛಿದ್ರವಾಗಿದ್ದರೇ ಒಳ್ಳೆಯದು ಎನ್ನುವ ಕೆಲವು ಮಠಾಧೀಶರು, ರಾಜಕೀಯ ಧುರೀಣರು ಮತ್ತು ಸಮಾಜ ನೇತಾರರಿರುವ ತನಕ ಈ ಸಮಾಜದ ಜನರು ಒಂದುಗೂಡುವುದೇ ಇಲ್ಲ. ದೇವರು-ಧರ್ಮ ಬೇಕು, ಧಾರ್ಮಿಕ ಒಕ್ಕೂಟ ಇರಬೇಕು ಎನ್ನುವ ಅಪೇಕ್ಷೆ ನಿಮಗಿದ್ದರೆ ಮೊದಲು ನೀವು ಸಮಾನ ಮನಸ್ಕರಾದ ಅಧ್ಯಾತ್ಮ ಜೀವಿಗಳನ್ನು

ಸೇರಿಸಿಕೊಂಡು ಹತ್ತೇ ಜನರಾಗಲಿ ಪ್ರಾರ್ಥನೆ ಶುರುಮಾಡಿರಿ. ಆಸಕ್ತಿ ಇರುವ ಜನರು ತಾನಾಗಿಯೇ ಬರಲು ತೊಡಗುತ್ತಾರೆ.

ಅತಿ ಬುದ್ಧಿವಂತ ವಚನಾಭ್ಯಾಸಿ, ಗುಲಬರ್ಗಾ.

- ಲಿಂಗಾಯತ ಧರ್ಮದ ದೇವರು ಇಷ್ಟಲಿಂಗ, ಲಿಂಗಾಯತ ಧರ್ಮದ ದೇವರು "ಲಿಂಗದೇವ" ಎಂದು ನೀವು ಹೇಳುತ್ತಿರುವುದು ತಪ್ಪು. ಹೀಗೆ ಹೇಳಿ ನೀವು ಸಮಾಜವನ್ನು ದಾರಿ ತಪ್ಪಿಸುತ್ತಿದ್ದೀರಿ.

* ಬಹಳ ಮೂರ್ಖ ಪ್ರಶ್ನೆಗಳಿಗೆ ಉತ್ತರಿಸಲೇ ಬಾರದೆಂದು ನನಗೂ ತುಂಬಾ ಸಿಟ್ಟು ಬರುತ್ತದೆ. ಆದರೆ ಮೂರ್ಖರನ್ನು ಹಾಗೆಯೇ ಬಿಟ್ಟರೆ ಅವರ ಮೂರ್ಖತನ ಹಾಗೆಯೇ ಉಳಿದು, ಅವರು ಇನ್ನಷ್ಟು ಜನರನ್ನು ಮೂರ್ಖರನ್ನಾಗಿ ಮಾಡುತ್ತಾರೆ ಎಂದು ತಾಳ್ಮೆ ತೆಗೆದುಕೊಂಡು ಉತ್ತರಿಸುವ ಶ್ರಮ ವಹಿಸಬೇಕಾಗಿದೆ.

ದೇವರು ಎನ್ನುವುದು ಒಂದು ವಿಶ್ವಾತ್ಮ ಚೈತನ್ಯ. (Cosmic Soul) ಆ ದೇವನನ್ನು ಪರಬ್ರಹ್ಮ ಎಂದು ವೇದಾಂತಿಗಳು, ಪರಶಿವ ಎಂದು ಆಗಮಿಕರು, ಅಲ್ಲಹ ಎಂದು ಇಸ್ಲಾಂ ಧರ್ಮೀಯರು, ಯಹೋವಾ ಎಂದು ಕ್ರೈಸ್ತ ಧರ್ಮೀಯರು ಹೆಸರಿಟ್ಟು ಕರೆದಿದ್ದಾರೆ. ಇದೇ ಚೈತನ್ಯವನ್ನು 'ಲಿಂಗದೇವ' ಎಂದು ಧರ್ಮಪಿತರು ಕರೆದಿದ್ದಾರೆ. ಇದು ಸ್ವಯಂಸಿದ್ಧವಾದ ವಸ್ತುನಿಷ್ಠ ಸತ್ಯ. ಇಂಥ ದೇವರನ್ನೇ ಆಂಗ್ಲಭಾಷೆಯಲ್ಲಿ God ಎಂದು ಕರೆಯಲಾಗಿದೆ. ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳಲ್ಲಿ ಇಂಥ ನಿರಾಕಾರ ದೇವರನ್ನು ಕೇವಲ ಪ್ರಾರ್ಥಿಸಲಾಗುತ್ತಿದೆ.

ಧರ್ಮಪಿತ ಬಸವಣ್ಣನವರು ಅಂಥ ಒಬ್ಬನೇ ದೇವರನ್ನು ನಂಬಲು ಹೇಳಿದ್ದಲ್ಲದೆ ಅಂದರೆ ಏಕೇಶ್ವರವಾದವನ್ನು ಪ್ರತಿಪಾದಿಸಿದ್ದಲ್ಲದೆ, ಆ ದೇವನನ್ನು ಪೂಜಿಸಬೇಕು ಎಂಬ ಏಕದೇವೋಪಾಸನೆ ಬಗ್ಗೆ ಹೇಳಿ, ಆ ದೇವನನ್ನು ಮನುಷ್ಯರ, ಪಶುಪಕ್ಷಿಗಳ ಆಕಾರದಲ್ಲಿ ಪೂಜಿಸದೆ ವಿಶ್ವದಾಕಾರದಲ್ಲಿ ಪೂಜಿಸಬೇಕು ಎಂದು ಇಷ್ಟಲಿಂಗವನ್ನು ವಿಶ್ವದಾಕಾರದಲ್ಲಿ ರೂಪಿಸಿಕೊಟ್ಟರು. ಇಷ್ಟಲಿಂಗ - ಕುರುಹು (Emblem), ಈ ಕುರುಹು ಸಾಕ್ಷಾತ್ಕರಿಸಿ ಕೊಡುವುದು ಆ ಚೈತನ್ಯ - ಲಿಂಗದೇವನನ್ನು.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ
ಅಪ್ರಮಾಣ, ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಲಿಂಗದೇವಯ್ಯಾ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ.

ಇಲ್ಲಿ ಎರಡು ವಸ್ತುಗಳಿವೆ ; 1) ಜಗದಗಲ ಮುಗಿಲಗಲವಾಗಿರುವ ಚೇತನ 2) ಅದರ ಚುಳುಕಾದ ರೂಪವಾದ ಇಷ್ಟಲಿಂಗ

Digitalized by e-Sahithya Documentation Forum
Sponsored by Sarayu Foundation Trust

ಓರ್ವ ವ್ಯಕ್ತಿ ಇದ್ದಾನೆ; ಆವನದು ಒಂದು ಫೋಟೋ ತೆಗೆದಾಗ ಒಂದು ಇಂಚು ಫೋಟೋದಲ್ಲಿ ಆ ವ್ಯಕ್ತಿಯ ರೂಪ ಮೂಡಿರುತ್ತದೆ ಹೇಗೆ? ಆ ವ್ಯಕ್ತಿ ಚುಳುಕಾಗಿ ಫೋಟೋದಲ್ಲಿ ಮೂಡಿದ್ದಾನೆ. ಫೋಟೋವೇ ವ್ಯಕ್ತಿಯಲ್ಲ. ಇಷ್ಟಲಿಂಗವು ದೇವರ ಕುರುಹು. ದೇವರು ವಸ್ತು ನಿಷ್ಠವಾಗಿರುವ ಒಂದು ವಿಶ್ವವ್ಯಾಪಿ ಚೈತನ್ಯ. ನಿಮ್ಮ ಪ್ರಶ್ನೆಯಲ್ಲಿರುವ ಅಜ್ಞಾನ ನೋಡಿ, ವಚನ ಸಾಹಿತ್ಯದ ಅ ಆ ಇ ಈ ಈಗ ತಿಳಿಯಲು ಪ್ರಶ್ನೆ ಕೇಳಿರುವ ನಿಮ್ಮಂತಹವರ ಒತ್ತಡಕ್ಕೆ ಈಡಾಗಿ ಎಲ್ಲಾದರೂ ಮಹಾನ್ ಸತ್ಯವಾದ 'ಲಿಂಗದೇವ' ವಚನಾಂಕಿತ ವಾಪಸ್ಸು ಪಡೆದಿದ್ದರೆ ನಾನೂ ಮೂರ್ಖರ ಸಾಲಿಗೆ ಸೇರುತ್ತಿದ್ದೆನಲ್ಲಾ ಎಂದು ನಿಮ್ಮ ಪತ್ರ ನೋಡಿ ಸಮಾಧಾನವಾಗಿದೆ.

ತೋಂಟದಾರ್ಯ, ವಕೀಲರು, ಕೆ. ಆರ್. ನಗರ

- ಜನಗಣತಿ 2001ರಲ್ಲಿ ಧರ್ಮಕಾಲಂನಲ್ಲಿ ಲಿಂಗಾಯತ ಎಂದು ಬರೆಸಿರಿ ಎಂದು ವಿಸ್ತೃತವಾದ ಕರಪತ್ರಗಳನ್ನು ನೀವು ಅನೇಕ ಭಾಷೆಗಳಲ್ಲಿ ಮುದ್ರಿಸಿ ಹಂಚುತ್ತಿರುವುದು ಅಭಿನಂದನೀಯ. ವೀರಶೈವ ಮಹಾಸಭೆಯವರು ವೀರಶೈವ ಎಂದು ಬರೆಸಿ ಎಂದು ಅವರು ಪ್ರತಿಪಾದಿಸುತ್ತಾರೆ. ಇದರಿಂದ ಜನರಲ್ಲಿ ಗೊಂದಲ ಉಂಟಾಗುವುದಿಲ್ಲವೆ?

* ಏನು ಮಾಡುವುದು? ತೇರು ಎಳೆಯುವಂತೆ ಸಮಾಜವನ್ನು ಒಂದು ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂದು ನಾವು ಎಷ್ಟೇ ಪ್ರಯತ್ನ ಮಾಡಿದರೂ ವೀರಶೈವ ಮಹಾಸಭೆ ಮತ್ತು ಕೆಲವು ಮಠಾಧೀಶರು ಹಗ್ಗ ಜಗ್ಗಾಟ (Tug of War) ದಂತೆ ಎಳೆದಾಡುವರು. ಒಂದು ಸತ್ಯವನ್ನು ಮನವರಿಕೆ ಮಾಡಲು ನಾವು ಸಿದ್ಧರಿದ್ದೇವೆ ಎಂದರೂ ಅವರು ಉದ್ದೇಶಪೂರ್ವಕವಾಗಿ ತಪ್ಪನ್ನೇ ಗಟ್ಟಿಗೊಳಿಸಲು ನೋಡುತ್ತಿರುವರು. ಹೀಗಾಗಿ ನೇರವಾಗಿ ಜನರಿಗೆ ಸಂದೇಶ ಮುಟ್ಟಿಸುವುದೊಂದೇ ನಮಗೆ ಉಳಿದಿರುವ ಮಾರ್ಗ. ವೀರಶೈವ ಮಹಾಸಭೆ ಎಂಬ ಧ್ಯೇಯವಿಲ್ಲದ ಒಂದು ದುರ್ಬಲ ಸಂಸ್ಥೆಯನ್ನು ಉಳಿಸಲಿಕ್ಕಾಗಿ ಇಡೀ ಸಮಾಜಕ್ಕೆ ಎಂಥಾ ಅನ್ಯಾಯ ಮಾಡುತ್ತಿರುವರು ಎಂಬ ಅರಿವು ಸಹಿತ ಕೆಲವು ನೇತಾರರಿಗೆ ಇಲ್ಲವಾಗಿದೆ.

ಕೆ. ಎಂ. ಶಿವಶಂಕರ್, ಮೈಸೂರು.

- ಬೆಳಗಾಂವಿಯಲ್ಲಿ ನಡೆದ ಶರಣ ಸಾಹಿತ್ಯ ಪರಿಷತ್ ಸಮ್ಮೇಳನದಲ್ಲಿ ಸಿರಿಗೆರೆಯ ಮಠಾಧೀಶರು ಲಿಂಗಾಯತ; ವೀರಶೈವ ಪದಗಳು ಒಂದೇ ಬೇರೆ ಬೇರೆಯಲ್ಲ ಎಂದು ಹೇಳಿದರು. ಇದು ಸತ್ಯವೇ?

* ಇಬ್ಬರು ವ್ಯಕ್ತಿಗಳಿದ್ದಾರೆ ಎಂದುಕೊಳ್ಳಿ, ಒಬ್ಬನ ಹೆಸರು ಲಿಂಗಪ್ಪ, ಇನ್ನೊಬ್ಬನ ಹೆಸರು ಮಲ್ಲಪ್ಪ. ಲಿಂಗಪ್ಪನ ತಂದೆ ಹೆಸರು ಬಸವರಾಜಪ್ಪ ತಾಯಿಯ ಹೆಸರು ವಚನಾಂಬಿಕೆ. ಮಲ್ಲಪ್ಪನ ತಂದೆಯ ಹೆಸರು ಶಿವಪ್ಪ, ತಾಯಿಯ ಹೆಸರು ಆಗಮಕ್ಕ. ಲಿಂಗಪ್ಪ ಎತ್ತರವಾಗಿ ಬೆಳ್ಳಗೆ ಇದ್ದಾನೆ. ಒಳ್ಳೆಯ ಕ್ರೀಡಾಪಟು; ಮಲ್ಲಪ್ಪ ಕುಳ್ಳಗೆ ಕಪ್ಪಗೆ ಇದ್ದಾನೆ. ಇವರಿಬ್ಬರೂ

ಒಂದೇ ಎಂದರೆ ಹೇಗೆ? ಬಸವಣ್ಣನೇ ಧರ್ಮಗುರುವಾಗಿ ವಚನ ವಾಙ್ಮಯವೇ ಶಾಸ್ತ್ರವಾಗಿ ಇರುವ ಲಿಂಗಾಯತವು ಜಾತಿವರ್ಣಾಶ್ರಮ ಒಪ್ಪದ ಪ್ರಗತಿಪರ ಸ್ವತಂತ್ರ ಧರ್ಮ. ವೀರಶೈವವು ಶೈವದ ಸಪ್ತಶಾಖೆಗಳಲ್ಲಿ ಒಂದಾದ ಆಗಮಾಧಾರಿತವಾದ ವರ್ಣಾಶ್ರಮದ ಸಮಾಜ ವ್ಯವಸ್ಥೆ ಒಪ್ಪಿಕೊಂಡ ಒಂದು ಪಂಥ. ಲಿಂಗಾಯತವು ಇಷ್ಟಲಿಂಗದ ಮೂಲಕ ಸೃಷ್ಟಿಕರ್ತ ಲಿಂಗದೇವನನ್ನು ಪೂಜಿಸಲು ಹೇಳಿದರೆ ವೀರಶೈವವು ಸ್ಥಾವರಲಿಂಗ, ಅದರ ಸಣ್ಣ ರೂಪದ ಚರಲಿಂಗಗಳ ಮೂಲಕ ಶಿವನನ್ನು ಪೂಜಿಸ ಹೇಳುತ್ತದೆ. ಲಿಂಗಾಯತವು ಏಕದೇವೋಪಾಸಕ (Monotheistic) ಧರ್ಮ, ವೀರಶೈವವು ? ಏಕದೇವತೋಪಾಸಕ (ಶಿವೋಪಾಸಕ - Monodeistic) ಪಂಥ. ಹೀಗೆ ಎರಡೂ ಸೈದ್ಧಾಂತಿಕವಾಗಿ ಬೇರೆ ಬೇರೆ.

ಬಸವ ಸಂಗಮ

ಒಂದು ಬಾರಿ ಬಂದು ನೋಡಿ ಶರಣಮೇಳವ
ಸಂಗಮದ ದರ್ಶನವೆ ದಿವ್ಯ ಅನುಭವ ॥ ಪ ॥

ಧರೆಯಲ್ಲಿನ ಕೈಲಾಸ
ಸಂಗಮದ ಕ್ಷೇತ್ರವು
ಭವಗೆಲ್ಲಲು ಸೇತುವೆ ;
ಬಸವ ತಂದೆ ನಾಮವು ॥ ೧ ॥

ದೂರ ದೂರದಿಂದ ಬಂದ ಶರಣರು ಇಲ್ಲಿ
ಸೇರಿ ಪಾವನವಾದರು ಸಂಗಮದಲ್ಲಿ
ವರುಷಕ್ಕೊಮ್ಮೆ ಸೇರುತಿಹುದು ಬಸವಸಾಗರ
ಹಾಡಿಕೊಂಡಾಡಲು ಮಹಾಗುರು ಬಸವೇಶರ ॥ ೨ ॥

ಮಾತಾಜಿಯ ಮುಂಚೂಣಿ ಶರಣಮೇಳಕೆ
ಪ್ರವಚನದಿ ಹರಿಸಿಹುದು ಬಸವತತ್ತ್ವ ಕಾಣಿಕೆ.
ಲಕ್ಷಲಕ್ಷ ಶರಣರು ಮೂಕವಾಗಿ ನಿಂತರು
ಮಾತಾಜಿ ಕಾಳುಕಕ್ಕೆ ನಿಬ್ಬೆರಗಾಗಿ ಹೋದರು ॥ ೩ ॥

ಮಾಚಿತಂದೆ ಮಾತಿನಂತೆ ದಕ್ಷಿಣದಲ್ಲಿ
ನೆರೆದು ಬಂದು ಸೇರುವರು ಬಸವ ಭಕ್ತರಿಲ್ಲಿ
ಹಾಡಿಪಾಡಿ ನಲಿಯುತಿಹರು ಶರಣರು ಇಲ್ಲಿ
ಒಂದುಗೂಡಿ ಸೇರುತ ಬಾಳ ಧನ್ಯಗೈವರು ॥ ೪ ॥

ಸಮತೆಯೆಂಬ ಹಣತೆಯಿಲ್ಲಿ ಸದಾ ಬೆಳಗುತಿಹುದು
ದೀನದಲಿತ ಭೇದವಿಲ್ಲಿ ಮರೆಯಾಗಿ ಹೋಗಿಹುದು
ಸಕಲ ಜೀವರಿಗೂ ಲೇಸು ಬಯಸಿದ ;
ಗುರು ಬಸವ ತಂದೆ ನಾಮವೊಂದೇ ಇಲ್ಲಿ ಮೆರೆಯುತಿಹುದು ॥ ೫ ॥

ರಚನೆ : ಹೊರೆಯಾಲ ಮಹದೇವಸ್ವಾಮಿ, ರಾಷ್ಟ್ರೀಯ ಬಸವ ದಳ, ಮೈಸೂರು

Digitalized by e-Sahithya Documentation Forum
Sponsored by Sarayu Foundation Trust

ಬಸವ ಧರ್ಮ ಪೀಠಕ್ಕೆ ಅಧಿಕಾರಿಗಳನ್ನು ಆಯ್ಕೆ ಮಾಡುವ ವಿಧಾನ ಹೇಗಿರಬೇಕು ?

- ಮಾತಾಜಿ

ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠವು ಒಂದು ಆದರ್ಶ ಧರ್ಮಪೀಠ ; ಇದು ಜಾತಿಯ ತಳಹದಿಯ ಮೇಲೆ ಕಟ್ಟಲ್ಪಟ್ಟ ಪೀಠವಲ್ಲ ಜ್ಯೋತಿಯ ತಳಹದಿಯ ಮೇಲೆ ಅರ್ಥಾತ್ ತತ್ತ್ವದ ತಳಹದಿಯ ಮೇಲೆ ರೂಪಿಸಲ್ಪಟ್ಟ ಪೀಠ. ಇದು ಒಂದು ಮಾದರಿ ಸಂಸ್ಥೆಯಾಗಿರಬೇಕು ಎಂಬುದೇ ಪೂಜ್ಯ ಲಿಂಗೈಕ್ಯ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳ ಆಶಯವೂ ಆಗಿತ್ತು. ಇಂಥ ಧರ್ಮಪೀಠಕ್ಕೆ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಯಾವ ಯಾವ ನಿಯಮಗಳನ್ನು ಇಡಬೇಕು ಎಂಬ ಬಗ್ಗೆ ಶರಣ ಮೇಳದಲ್ಲಿ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲಿ ದಿ.೧೨-೧-೨೦೦೦ ದಂದು ಚರ್ಚಿಸಬೇಕು ಎಂಬ ಆಲೋಚನೆ ಹೊಂದಿದ್ದೇನೆ. ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು, ಚಿಂತನೆಯಲ್ಲಿ ಭಾಗವಹಿಸಲು ಅನುಕೂಲವಾಗಲೆಂದು ಸೂಚನೆಗಳನ್ನು ನೀಡುತ್ತಿದ್ದೇನೆ.

ಧರ್ಮಕ್ರಾಂತಿಯ ಧೀರಯೋಗಿ ಪರಮ ಪೂಜ್ಯ ಅಪ್ಪಾಜಿಯವರು ಅನಿರೀಕ್ಷಿತವಾಗಿ ಲಿಂಗೈಕ್ಯರಾದರು. ಮೊದಲೇ ತಮ್ಮ ಇಚ್ಛೆಯನ್ನು ಅವರು ವ್ಯಕ್ತಪಡಿಸಿದ್ದಂತೆ ನಾನು ದ್ವಿತೀಯ ಪೀಠಾಧಿಕಾರಿಣಿಯಾಗಿ ಪೀಠಾರೋಹಣ ಮಾಡಿದೆ. ಮುಂದೆ ಯಾವ ಆದರ್ಶವನ್ನು ಧರ್ಮಪೀಠವು ಅನುಸರಿಸಬೇಕು ?

೧. ಗಣನಾಯಕಿಯರಾದ ಶರಣೆ. ದೇವಿಕಾ ಶರಣಪ್ಪನವರು ಶಿವಮೊಗ್ಗ-ಭದ್ರಾವತಿಗೆ ಜೊತೆಯಲ್ಲಿಪ್ರವಾಸ ಕೈಗೊಂಡಾಗ ಒಂದು ಸೂಚನೆ ನೀಡಿದರು. ಅದೆಂದರೆ, ಪೂಜ್ಯ ಅಪ್ಪಾಜಿಯವರು (ಮತ್ತು ತಾವು) ಅಸಾಧಾರಣ ವ್ಯಕ್ತಿಗಳು ಎಂದು ನಾವೆಲ್ಲ ಭಾವಿಸಿದ್ದೀವಿ. ನಿಮ್ಮ ಮಟ್ಟಕ್ಕೆ ಏರುವ ವ್ಯಕ್ತಿಗಳು ಸಿಕ್ಕುವುದು ಕಷ್ಟ. ಆದ್ದರಿಂದ ನಿಮ್ಮ ನಂತರ ಪೀಠಕ್ಕೆ ಅಧಿಕಾರಿಗಳಾಗಿ ಯಾರೂ ಪೀಠದ ಮೇಲೆ ಕೂಡುವುದು ಬೇಡ. ಆಡಳಿತಾಧಿಕಾರಿಗಳು, ಧರ್ಮಾಧಿಕಾರಿಗಳು ಆಗಿ ಸಮರ್ಥರು ಪೀಠದ ಕಾರ್ಯಕಲಾಪ ಮುಂದುವರಿಸಲಿ.

೨. ಶ್ರೀ. ದಯಾನಂದ ಸ್ವಾಮಿಗಳು ಒಮ್ಮೆ ಇದೇ ರೀತಿ ಸೂಚಿಸಿ, ಹಾಗೆ ಧರ್ಮಾಧಿಕಾರಿಗಳಾಗಬೇಕೆನ್ನುವವರು (ಧರ್ಮಸ್ಥಳ, ಶರಣ ಬಸವೇಶ್ವರ ಸಂಸ್ಥಾನದಂತೆ) ಗೃಹಸ್ಥರಾಗಿದ್ದರೂ ಪರವಾಗಿಲ್ಲ ಎಂದು ಹೇಳಿದರು.

೩. ಮತ್ತೆ ಕೆಲವರು, ಚಿಕ್ಕ ಮಕ್ಕಳನ್ನೇ ಆಯ್ದು ತರಬೇತಿ ನೀಡಿ ಮುಂದೆ ಧರ್ಮಪೀಠಕ್ಕೆ ಅಧಿಕಾರಿಯನ್ನಾಗಿ ಮಾಡಬೇಕು ಎಂದು ಸೂಚಿಸಿರುವರು. ಕೆಲವರು ತಮ್ಮ ಮಕ್ಕಳನ್ನು ಅರ್ಪಿಸಲು ಸಹ ಸಿದ್ಧರಾಗಿದ್ದಾರೆ.

೪. ಉಡುಪಿಯ ಅಷ್ಟ ಮಠಗಳಿವೆ. ಶ್ರೀ ಮಧ್ವಾಚಾರ್ಯರ ಎಂಟು ಜನ ಶಿಷ್ಯರ ಪರಂಪರೆಯ ಮಠಗಳಾಗಿದ್ದು ಶ್ರೀ ಕೃಷ್ಣನ ಪೂಜೆಯನ್ನು ಎರಡು ವರ್ಷಕ್ಕೆ ಒಬ್ಬೊಬ್ಬರಂತೆ ಮಾಡುತ್ತ ಬರುತ್ತಾರೆ. ಹಾಗೆ, ಬಸವ ಧರ್ಮ ಪೀಠದಲ್ಲಿ ಸದ್ಯದಲ್ಲಿ ಇರುವ ಧರ್ಮ ಪ್ರಚಾರಕ ಜಂಗಮರು ಹಾಗೆ ೨-೩ ವರ್ಷಗಳ ಅವಧಿಯವರೆಗೆ ಒಬ್ಬೊಬ್ಬರಂತೆ ಆಡಳಿತ ಮಾಡುವಂತಿದ್ದರೆ ಸೂಕ್ತವೆ ?

೫. ಶ್ರೀಯುತ ಪೋಪ್ ಜಾನ್‌ಪಾಲ್ ಅವರು ಭಾರತಕ್ಕೆ ಬಂದಾಗ ಅವರ ಪರಿಚಯ ಲೇಖನ ಓದುವಾಗ ಅನೇಕ ಬಿಷಪ್ಪರು ಸೇರಿ ಪೋಪರನ್ನು ಆಯ್ಕೆ ಮಾಡುವುದನ್ನು ಓದಿದೆ. ಕ್ರಿಸ್ತರದು ಒಂದು ವ್ಯವಸ್ಥಿತ ಸಮಾಜ; ವ್ಯವಸ್ಥಿತ ಸಾಂಸ್ಥಿಕ ಸಂಘಟನೆ. ಈ ಹಿನ್ನೆಲೆಯಲ್ಲಿ ಶರಣರು ಸೇರಿ ಪೀಠಾಧಿಕಾರಿಗಳನ್ನು ಆಯ್ಕೆ ಮಾಡುವ ವಿಧಾನ ಜಾರಿಗೆ ತಂದರೆ ಹೇಗೆ ಎನ್ನಿಸಿತು. ಈ ಮಾದರಿ ಅನುಸರಿಸುವುದಾದರೆ ಆಗ ಹೀಗೆ ಮಾಡಬಹುದು.

ಬಸವ ಧರ್ಮ ಪೀಠದಲ್ಲಿ ನಿಷ್ಠಾವಂತರಾಗಿ ಕಾರ್ಯಮಾಡುತ್ತಿರುವ ಅಭ್ಯರ್ಥಿಗಳನ್ನು ಶರಣರ ಸಭೆಗೆ ಪರಿಚಯಿಸುವುದು. ಜನ ಮತ ಪಡೆದು ಮೊದಲ, ಎರಡನೆ, ಮೂರನೆ ಹೀಗೆ ಯಾರು ಸ್ಥಾನ ಪಡೆಯುತ್ತಾರೋ ಅವರನ್ನು ಆಯ್ಕೆ ಮಾಡುವುದು. ಒಂದೇ ಸಲಕ್ಕೆ ಆಯ್ಕೆ ಮಾಡುವುದಲ್ಲ ; ವರ್ಷಕ್ಕೊಮ್ಮೆ ೩ ಸುತ್ತು ಅಥವಾ ೫ ಸುತ್ತಿನಲ್ಲಿ ಇದೇ ರೀತಿ ಆಯ್ಕೆ ಮಾಡಿ ಹೆಚ್ಚು ಸಲ ಯಾರು ಆಯ್ಕೆಯಾಗುತ್ತಾರೋ ಅವರನ್ನು ಭಾವೀ ಪೀಠಾಧಿಕಾರಿಯನ್ನಾಗಿ ಆಯ್ದು, ಅವರಿಗೆ ಜನ ಸಂಪರ್ಕವನ್ನು ಬೆಳೆಸುವುದೇ ಅಲ್ಲದೆ ತರಬೇತಿಯನ್ನು ಸಹ ಕೊಡುವುದು.

೬. ಈ ರೀತಿ ಕೆಲವರೊಡನೆ ನಾನು ಚರ್ಚಿಸುವಾಗ ಓರ್ವರು ಹೇಳಿದರು, "ನೀವು ಅಕ್ಕಮಹಾದೇವಿ ಪೀಠಕ್ಕೆ ಅಧಿಕಾರಿಣಿಯಾದಿರಿ, ನಂತರ ಬಸವ ಧರ್ಮಪೀಠಕ್ಕೆ ಆದಿರಿ. ಅಕ್ಕಮಹಾದೇವಿ ಧರ್ಮಪೀಠಕ್ಕೆ ಪೂಜ್ಯ ಗಂಗಾಮಾತಾಜಿ ದ್ವಿತೀಯ ಪೀಠಾಧೀಶರಾದರು. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಪೂಜ್ಯ ಗಂಗಾ ಮಾತಾಜಿ ಈಗ ಬಸವ ಧರ್ಮ ಪೀಠದ ಸದ್ಭಕ್ತರಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿಕೊಂಡಿದ್ದಾರೆ. ಹೀಗಾಗಿ ಬಸವ ಭಕ್ತರು ಅವರನ್ನು ಆಯ್ಕೆ ಮಾಡುತ್ತಾರೆ. ಆಗ ಎರಡೂ ಪೀಠಗಳು ಮಹಿಳೆಯರಿಗೇ ಮೀಸಲಾಗುತ್ತವೆ. ಪುರುಷ ಸನ್ಯಾಸಿಗಳಿಗೆ ಅಧಿಕಾರದ ಅವಕಾಶವೇ ತಪ್ಪಿಹೋಗುತ್ತದೆ." ಎಂದು ಸಂದೇಹ ವ್ಯಕ್ತಪಡಿಸಿದರು. ಇರಲಿ; ಇದೂ ಚರ್ಚೆಗೆ ಸ್ವಾರಸ್ಯಕರವಾದ ವಿಚಾರವೇ.

ಈ ಸಲದ ಶರಣ ಮೇಳದಲ್ಲಿ ದಿ. ೧೨-೧-೨೦೦೦ ರಂದು ಬೆಳಿಗ್ಗೆ ೧೦-೩೦ ಮತ್ತು ಸಂಜೆ ೪-೩೦ ರಿಂದ ನಡೆಯುವ ಎರಡೂ ಚಿಂತನಗೋಷ್ಠಿಯಲ್ಲಿ ಇಂಥ ಅನೇಕ ಮಹತ್ವದ ವಿಷಯ ಚರ್ಚಿಸೋಣ. ನೋಡೋಣ ಒಟ್ಟಾರೆ ಹೇಗೆ ಅಭಿಪ್ರಾಯವು ಶರಣರಿಂದ

Digitalized by e-Sahithya Documentation Forum
Sponsored by Sarayu Foundation Trust

ಹೊಮ್ಮುವುದೋ ? ಸದ್ಯದಲ್ಲಿ ಹೆಸರಿಸಬಹುದಾದ ಅಭ್ಯರ್ಥಿಗಳೆಂದರೆ,

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

೨. ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳು

೩. ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು

೪. ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು

ವಿಶೇಷ ಸೂಚನೆ : ಈ ವಿಷಯವನ್ನೂ ನಾನು ಇವರು ಯಾರ ಮುಂದೂ ಚರ್ಚಿಸಿಲ್ಲ, ಇವರಾರೂ ಅಧಿಕಾರಕ್ಕೆ ಆಸೆ ಪಡುವವರೂ ಅಲ್ಲ; ನಿಷ್ಠಾವಂತ ಸದ್ಭಾವಿಗಳು. ನನ್ನ ಮನಸ್ಸಿನಲ್ಲಿ ಸುಳಿಯುವ ಆಲೋಚನೆಗಳನ್ನು ಶರಣರ ಮುಂದೆ ಇಟ್ಟಿದ್ದೇನೆ ಮಾತ್ರ. ಚಿಂತನೆ ಮಾಡಲು ಆಹಾರ ಒದಗಿಸಿದ್ದೇನೆ. ಮುಖ್ಯ ಸಂಗತಿ ಎಂದರೆ ಬಸವ ಧರ್ಮ ಪೀಠಕ್ಕೆ ಅಧಿಕಾರಿಗಳಾಗುವವರು ಇದೇ ಸಂಸ್ಥೆಯಲ್ಲಿ ತಯಾರಾದವರು ಇರಬೇಕೇ ವಿನಾ ಬೇರೆ ಕಡೆಯಿಂದ ಮಾಡುವಂತಿಲ್ಲ ಎಂಬುದು ಮಾತ್ರ ಕಡ್ಡಾಯ ನಿಯಮವಾಗಿರುವುದು.

ಕಲ್ಯಾಣ ಕಿರಣ ಓದಿಕೊಂಡು ಬನ್ನಿರಿ

ಜನವರಿ ೧ನೆಯ ದಿನಾಂಕ ಕಲ್ಯಾಣ ಕಿರಣ ಪೋಸ್ಟ್ ಆಗುವುದು. ಶರಣ ಮೇಳಕ್ಕೆ ಹೊರಡುವಷ್ಟರಲ್ಲಿ ಯಾರ್ಯಾರಿಗೆ ಕೈಗೆ ಸೇರಿತ್ತೋ ಅವರು ಓದಿಕೊಂಡು ಬನ್ನಿರಿ, ಜೊತೆಗೆ ಪ್ರತಿಯನ್ನು ತನ್ನಿರಿ. ಚರ್ಚೆಗೆ ಅನುಕೂಲವಾಗುತ್ತದೆ.

ಸ್ಮೃತಿ ವಚನಗಳು

ನಿನ್ನದೊಂದು ವಚನ ವಿಭೂತಿ ಗಟ್ಟಿ ಕಾಣಯ್ಯಾ
ನಿನ್ನದೊಂದು ವಚನ ಶ್ರೀಗಂಧದ ಕೊರಡು ಕಾಣಯ್ಯಾ
ನಿನ್ನದೊಂದು ವಚನ ಗಂಗೋದಕ ಕಾಣಯ್ಯಾ
ನಿನ್ನದೊಂದು ವಚನ ನಂದಾದೀಪ ಕಾಣಯ್ಯಾ
ಶಿವನ ಸಿರಿ ಮುಡಿಗೇರಿದ ಮಲ್ಲಿಗೆಯ ಹೂವು ಕಾಣಯ್ಯಾ
ಇಂತಪ್ಪ ನಿನ್ನ ಒಂದು ವಚನದಂತಾದರೂ ನಡೆದರೆ
ಅದೇ ಲಿಂಗ ಪೂಜೆ ಎಂದು ಬಗೆವೆನಯ್ಯಾ ಆನು
ಲಿಂಗದೇವನ ಶರಣ ಓ ! ಬಸವಣ್ಣ.

-ಸ್ಕಂದ (ಕುಮಾರಸ್ವಾಮಿ)ಆಂಧ್ರ

-ಃ ಬಸವ ಭಕ್ತರಿಗೆ ಕರೆ ಃ-

ಭಕ್ತಿಯಲ್ಲಿ ಎಚ್ಚರಿಕೆ

- ಮಾತಾಜಿ

ಷಟ್‌ಸ್ಥಲದಲ್ಲಿ ಅವಧಾನ ಭಕ್ತಿ ಎಂಬುದಿದೆ. ಅವಧಾನ ಎಂದರೆ ಎಚ್ಚರ. ಕಾಯಾ-ವಾಚಾ - ಮನಸಾ ತಪ್ಪು ಸಂಭವಿಸದಂತೆ ಎಚ್ಚರಿಕೆಯಿಂದ ಇರಬೇಕು ಎಂಬುದೇ ಈ ಭಕ್ತಿಯ ಸೂತ್ರ. ಉದಾಹರಣೆಗೆ ಯಾರೋ ಒಬ್ಬ ಗುರುಗಳಿಗೆ ನಮಸ್ಕಾರ ಮಾಡುತ್ತಿರುತ್ತಾರೆ ಎಂದುಕೊಳ್ಳೋಣ. ಆಗ ಅವರಿಗೆ ಸಾಷ್ಟಾಂಗ ಎರಗುತ್ತ ಇನ್ನೊಬ್ಬರಿಗೆ ಕಾಲು ಬಡಿಸಿದರೆ 'ಅವಧಾನ' ಕೆಟ್ಟು ಹೋಗುತ್ತದೆ.

'ವಚನ ತಾಂಬೂಲ'ವಾಗಿ ಒಬ್ಬರು ಮದುವೆಯಲ್ಲಿ ಕೊಡಲು ಒಂದು ಚಿಕ್ಕ ವಚನ ಪುಸ್ತಿಕೆಯನ್ನು ಮಾಡಿದ್ದರೆಂದು ಕಾಣುತ್ತದೆ. ಮಾಡಿದವರು ಮಾಡಿಸಿದವರು ನಮ್ಮ ವಲಯದವರೇ ಆಗಿದ್ದರೂ ಆ ಪುಸ್ತಕವನ್ನು ನನ್ನ ಗಮನಕ್ಕೆ ತಂದಿರಲಿಲ್ಲ. ಅಥವಾ ಅವರು ಕಳಿಸಿದರೂ ಆ ಕೃತಿ ನನ್ನ ಕೈಗೆ ತಲುಪಿರಲಿಕ್ಕಿಲ್ಲ - ನನ್ನ ಎಡಬಿಡದ ಸಂಚಾರದಿಂದಾಗಿ. ಕಳಿಸದೆ ಇರಲು ಪ್ರಮುಖ ಕಾರಣವೆಂದರೆ ಆ ಪುಸ್ತಿಕೆಯಲ್ಲಿ ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಕೂಡಲ ಸಂಗಮದೇವ ವಚನ ಮುದ್ರಿಕೆಯನ್ನೇ ಬಳಸಿರುವುದರಿಂದ, ಕಳವಳ ಪಟ್ಟು ಕಳಿಸಿರಲಿಕ್ಕಿಲ್ಲ ಎಂದು ನಾನು ಊಹಿಸಿದ್ದೇನೆ. ಇದು ಅನಗತ್ಯ ಭಯ. ಏಕೆಂದರೆ ಹಿಂದು ಸಮಾಜದ ಗರ್ಭದಲ್ಲಿ ಹುಟ್ಟಿದ ಲಿಂಗಾಯತ ಸಮಾಜವು ವಂಶಪಾರಂಪರಿಕ ಕಾಯಿಲೆಗಳಾದ ಬಹುದೇವತೋಪಾಸನೆ, ಜಾತೀಯತೆ, ಮೂಢನಂಬಿಕೆ ತೊರೆದು ಏಕ ಲಿಂಗ (ದೇವ) ನಿಷ್ಠೆಯನ್ನು ಅಳವಡಿಸಿಕೊಳ್ಳುವುದು ಕಠಿಣತಮ ಎಂಬುದು ನನಗೂ ತಿಳಿದಿದೆ. ೮೦೦ ವರ್ಷ ಸಂದಿದ್ದರೂ ಬಸವ ತತ್ತ್ವವನ್ನು ಅಳವಡಿಸಿಕೊಳ್ಳದೆ ಇರುವ ಲಿಂಗಾಯತ ಸಮಾಜವು ಪರಮ ಸತ್ಯವಾದ ಲಿಂಗದೇವನ ಮಹಿಮೆಯನ್ನು ಕೇವಲ ೩-೪ ವರ್ಷಗಳಲ್ಲಿ ಅಳವಡಿಸಿಕೊಳ್ಳಬಹುದೆಂಬ ವಿಶ್ವಾಸ ನನಗಿಲ್ಲ.

(ಓರ್ವ ಮುಸ್ಲೀಮ್ ವಿದ್ವಾಂಸರು, ''ಇನ್ನು ೧೦೦ ವರ್ಷದ ಬಳಿಕ ಬಸವಣ್ಣನವರ ವಚನಗಳಲ್ಲಿ ಮುದ್ರಿಕೆಯಾಗಿ 'ಲಿಂಗದೇವ' ಪದವೇ ಉಳಿಯುವುದು'' ಎಂದು ಹೇಳಿದರು. ಆ ಜನಾಂಗದ ಜನರಲ್ಲಿ ಬೆಳೆದಿರುವ ಏಕದೇವನಿಷ್ಠೆ ಹಿಂದೂ ಪ್ರಭಾವದಲ್ಲಿರುವ ಲಿಂಗಾಯತರಲ್ಲಿ ಬೆಳೆಯುವುದು ಕಷ್ಟಸಾಧ್ಯ. ಇದಕ್ಕೆ ಕಾರಣವೇನೆಂದರೆ, ಒಂದು ವಿಶಿಷ್ಟ ಪರಿಸರದಲ್ಲಿ ಕೆಲವು ರೋಗಾಣುಗಳು ಇರುತ್ತವೆ ಎಂದುಕೊಳ್ಳೋಣ. ಔಷಧಿ ತೆಗೆದುಕೊಂಡು ರೋಗವನ್ನು ವಾಸಿಮಾಡಿಕೊಂಡರೂ ಪುನಃ ಅದೇ ಪರಿಸರದಲ್ಲಿದ್ದರೆ ಅವರು ರೋಗ ವಾಹಕರಾಗಿರುತ್ತಾರೆ. ಆದೇ ರೀತಿ ವಚನ ಸಾಹಿತ್ಯ

Digitalized by e-Sahithya Documentation Forum
Sponsored by Sarayu Foundation Trust

ಓದಿ ಅಲ್ಪಸ್ವಲ್ಪ ಬಸವ ತತ್ತ್ವವನ್ನು ತಿಳಿದರೂ ಆ ಜನರ ಸುತ್ತ ಬಹುದೇವತೋಪಾಸನೆಯ ರೋಗಾಣು ತುಂಬಿರುವ ಪರಿಸರವೇ ಇರುವುದರಿಂದ ಅವರು ಅದರಿಂದ ಮುಕ್ತರಾಗದೆ ಒದ್ದಾಡುತ್ತಿರುತ್ತಾರೆ.)

ಇಂದು, ಆ ಪುಸ್ತಕ ''ವಚನ ತಾಂಬೂಲ'' ಕೈಗೆ ಸಿಕ್ಕಿತು. ವೈದ್ಯರ ಕಣ್ಣಿಗೆ ರೋಗ ತಟ್ಟನೆ ಬೀಳುವಂತೆ ಕೆಲವೊಂದು ದೋಷಗಳು ಗಮನಕ್ಕೆ ಬಂದವು. ತಿಳಿ ಹೇಳುವುದು ನನ್ನ ಧರ್ಮ ಎಂದು ಲೇಖನ ಬರೆಯುತ್ತಿದ್ದೇನೆ.

೧. ಪುಸ್ತಕಗಳಿಗೆ ಶೀರ್ಷಿಕೆ ''ವಚನ ತಾಂಬೂಲ'' ಎಂದು ಕೊಡಬಾರದು. ಪುಸ್ತಕವನ್ನು ತಾಂಬೂಲದ ಬದಲಿಗೆ ಕೊಡಲಾಗುವುದು ಆದ್ದರಿಂದ ಪುಸ್ತಕದ ಹೆಸರು ಬೇರೆ ಕೊಡಬೇಕು. ಉದಾ :- ವಚನ ಸೌರಭ, ವಚನ ಕಿರಣ, ವಚನ ಸಂಪದ, ವಚನ ಜ್ಯೋತಿ ಇತ್ಯಾದಿ. ಅದನ್ನು ತಾಂಬೂಲದ ಬದಲಿಗೆ ಕೊಡುಗೆಯಾಗಿ ಕೊಡುತ್ತಿರುವುದಾಗಿ ಒಳಗೆ ಬರೆಯಬೇಕು.

೨. ಈ ಪುಸ್ತಿಕೆಯಲ್ಲಿ ಗಮನಿಸಬೇಕಾದ ಮಹಾಪ್ರಮಾದ ಎಂದರೆ ವಧು-ವರರ ಚಿತ್ರವನ್ನು ಕವಚದ ಮೇಲೆ ಹಾಕಿ, ಧರ್ಮಪಿತರ ಭಾವಚಿತ್ರವನ್ನು ಒಳಗೆ ಹಾಕಲಾಗಿದೆ.

ಧರ್ಮಪಿತರಿಗೆ ಎಂದೂ ಅಗ್ರಪೀಠವನ್ನು, ಅಗ್ರಸ್ಥಾನವನ್ನು ಕೊಡಬೇಕು. ಅವರಿಗಿಂತ ಹೆಚ್ಚಿನ ಸ್ಥಾನದಲ್ಲಿ ಕುಳಿತುಕೊಳ್ಳುವ ಅರ್ಹತೆ ಸೃಷ್ಟಿಕರ್ತ ಲಿಂಗದೇವನ ಚಿನ್ಹೆಯಾದ ಇಷ್ಟಲಿಂಗ, ಷಟ್‌ಕೋನ ಚಿತ್ರ. ಮಧ್ಯ ಲಿಂಗವಿರುವ ಗಣಲಾಂಛನಕ್ಕೆ ಮಾತ್ರ ಕೊಡಬೇಕು. ಕ್ರೈಸ್ತರು ಎಂದೂ ಏಸುವನ್ನು ಕಡೆಗಣಿಸರು, ಮುಸ್ಲೀಮರು ಮೊಹಮ್ಮದರನ್ನು ಅಗೌರವಿಸರು. ಸಿಖ್ಖರಂತೂ ಖಂಡ ತುಂಡವಾಗಿ ಅವರ ಧರ್ಮ ಗ್ರಂಥವನ್ನು, ದಶಗುರುಗಳನ್ನು ಅಗೌರವಿಸಿದರೆ ಕ್ರಮ ತೆಗೆದುಕೊಳ್ಳುವರು.

ಅನೇಕ ಮಠಾಧೀಶರು ತಮ್ಮ ಪ್ರಕಟಣೆಗಳಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಹಾಕರು ಮತ್ತೆ ಕೆಲವರು ತಮ್ಮದನ್ನು ಮೇಲೆ ಪ್ರಮುಖ ಮುಖಪುಟದಲ್ಲಿ ಹಾಕಿ ಧರ್ಮಪಿತರನ್ನು ಹಿಂದಿನ ಪುಟದಲ್ಲಿ ಮುದ್ರಿಸುವರು. ಅವರುಗಳನ್ನು ತಿದ್ದುವ ಗೊಡವೆ ಬೇಡ ಏಕೆಂದರೆ ಅವರು ನಿದ್ದೆ ಮಾಡುವವರಲ್ಲ ; ನಿದ್ದೆ ಮಾಡುವ ಸೋಗು ಹಾಕಿರುವವರು. ಆದರೆ ನಿಜ ಬಸವ ಭಕ್ತರು ಈ ಪ್ರಮಾದವನ್ನು ಮಾಡಬಾರದು. ಮದುವೆಯಲ್ಲಿ ಸ್ಟೀಲಿನ ತಟ್ಟೆ-ಬಟ್ಟಲು ಹಂಚಿ ಹೆಮ್ಮೆಯಿಂದ ಬೀಗುವ ಅಜ್ಞಾನಿ ಶ್ರೀಮಂತರ ಮಧ್ಯೆ ವಚನ ಸಾಹಿತ್ಯ ಮುದ್ರಿಸಿ ಹಂಚುವವರು ಬಸವ ಭಕ್ತರಿರಲೇಬೇಕು ತಾನೆ ? ಅವರುಗಳು ತಪ್ಪು ಎಸಗಿ ಧರ್ಮಗುರು ದ್ರೋಹ ಮಾಡಬಾರದು. ಆದ್ದರಿಂದ ಮುಖಪುಟದ ಮೇಲೆ ಧರ್ಮಪಿತ ಬಸವಣ್ಣನವರ ಭಾವಚಿತ್ರ, ಗಣಲಾಂಛನದ ಭಾವಚಿತ್ರ ಇದ್ದು, ಒಳಗಡೆ ವಧುವರರ ಚಿತ್ರ, ಹಾಕಲು ಅಡ್ಡಿಯಿಲ್ಲ. ಧರ್ಮಗುರುವನ್ನು ಮೆರೆಸುವುದು ಮುಖ್ಯ ಉದ್ದೇಶವಾಗಬೇಕೇ ವಿನಾ ವಧುವರರನ್ನು, ಮುದ್ರಿಸಿದವರನ್ನಲ್ಲ.

೩. ವಿವಾಹವು ಜೀವನದ ಒಂದು ಸಾಮೂಹಿಕ - ಧಾರ್ಮಿಕ ಘಟನೆ. ಅದು ವ್ಯಕ್ತಿಯ, ಕೌಟುಂಬಿಕ ಜೀವನದ ದೃಷ್ಟಿಯಿಂದ ಮಹತ್ವಪೂರ್ಣ. ಆದರೆ ಸಾಮಾಜಿಕ, ರಾಷ್ಟ್ರೀಯ ದೃಷ್ಟಿಯಿಂದ ಒಂದು ಸಹಜ ಮತ್ತು ಸಾಮಾನ್ಯ ಘಟನೆ.

''ಕಲ್ಯಾಣ'' ಅಪ್ಪ ಬಸವಣ್ಣನವರ ಅದ್ಭುತವಾದ ಒಂದು ಪರಿಕಲ್ಪನೆ. ಇಡೀ ಸಮಾಜ, ರಾಷ್ಟ್ರ ಮಾತ್ರವಲ್ಲ ಮಾನವ ಕುಲವನ್ನೇ ವ್ಯಾಪಿಸಿಕೊಳ್ಳುವುದು, ಆಲಂಗಿಸಿಕೊಳ್ಳುವುದು. ಅವರ ಧ್ಯೇಯ ಈ ಭುವಿಯಲ್ಲಿ ಕಲ್ಯಾಣರಾಜ್ಯ ಸ್ಥಾಪನೆ ಮಾಡುವುದು; ಇದು ದೈವೀ ಮೌಲ್ಯಗಳಿಂದ ಕೂಡಿದ ಸುಂದರ, ಬಂಧುರ ದಿವ್ಯ ಶರಣ ಸಮಾಜದ ಸಾರವನ್ನು ಪ್ರತಿನಿಧಿಸುವ ಪದ. ಇಂಥ ಸುಂದರ, ಅರ್ಥಗರ್ಭಿತ ಸೈದ್ಧಾಂತಿಕ ಪದವನ್ನು ವಿವಾಹಕ್ಕೆ ಸೀಮಿತಗೊಳಿಸಿ, ''ಕಲ್ಯಾಣ ಮಹೋತ್ಸವ'' ಎಂದು ಬಳಸಿ ಒಂದು ಉದಾತ್ತ (Sublime) ಮತ್ತು ಉನ್ನತ (Supreme) ಪರಿಕಲ್ಪನೆಯನ್ನು ಕೆಡಿಸುವುದು ಬೇಡ. ಈ ಸಂದರ್ಭದಲ್ಲಿ ಎತ್ತಬಹುದಾದ ಸಂದೇಹವೆಂದರೆ ಕಲ್ಯಾಣ ಪಟ್ಟಣದ ವರ್ಣನೆಯನ್ನು ಮಾಡಿದ ಚನ್ನಬಸವಣ್ಣನವರ ಒಂದು ವಚನದಲ್ಲಿ (ಚ.ಬ.ವ. ೩೪೫) ''ವಿವಾಹಕ್ಕೆ ಕಲ್ಯಾಣವೆಂಬ ಹೆಸರಾಯಿತು'' ಎಂದಿಲ್ಲವೆ ? ಎಂದು ಕೇಳುವುದು. ಈ ವಚನವನ್ನು ಯಾಂತ್ರಿಕವಾಗಿ ತೆಗೆದುಕೊಂಡ ಕೆಲವು ಬುದ್ಧಿವಂತರು ವಿವಾಹಕ್ಕೆ ಕಲ್ಯಾಣ ಮಹೋತ್ಸವ ಎಂದು ಬಳಸಿ, ಪ್ರಚಾರ ಮಾಡುತ್ತಿದ್ದಾರೆ.

ಆ ವಚನದಲ್ಲಿ ಚನ್ನಬಸವಣ್ಣ ರಚಿಸಿದ ಕೆಲವು ಸಾಲುಗಳು ಇರುವುದು ಸತ್ಯ. ಆದರೆ ಅದಕ್ಕೆ ಸೇರಿಸಲ್ಪಟ್ಟ ವಾಕ್ಯಗಳೇ ಅತಿ ಹೆಚ್ಚು. ಅವು ಗದ್ಯರೂಪದಲ್ಲಿ ಸಡಿಲವಾಗಿ, ಪುರಾಣಿಕರ ವರ್ಣನೆಯಂತೆ ಹರಿದಿವೆ. ಆ ವಚನದಲ್ಲಿ ಹೇಳುವಂತೆ ಬೃಹತ್ ಮನೆ, ಅಸಂಖ್ಯಾತ ಮಠಗಳ ಕುರುಹುಗಳೇ ಕಲ್ಯಾಣದಲ್ಲಿ ಎಲ್ಲಿಯೂ ಇಲ್ಲ. ಬಿಲ್ಡಿಂಗ್ ಪೂರ್ಣ ರೂಪದಲ್ಲಿ ಇಲ್ಲದಿದ್ದರಷ್ಟೇ ಬಿದ್ದ ಕಲ್ಲುಗೋಡೆಗಳ ರೂಪದಲ್ಲಾದರೂ ಇರಬೇಕಿತ್ತು. ಈಗ ನಾವು ಸ್ವಭಾವತ ತಾತ್ತ್ವಿಕವಾಗಿ ಇರುವ ಲಿಂಗಾಯತ ಧರ್ಮದ ಸಂವಿಧಾನ ವಚನ ಸಾಹಿತ್ಯವನ್ನು ತಾತ್ತ್ವಿಕ ಚೌಕಟ್ಟನಲ್ಲಿ ಚಿಂತನೆ ಮಾಡಿ, ಪರಿಷ್ಕರಿಸಬೇಕಾಗಿದೆ. ಆದ್ದರಿಂದ ''ಕಲ್ಯಾಣ'' ಎಂಬ ಅಸಾಮಾನ್ಯ ಪದವನ್ನು 'ಮದುವೆ' ಎಂಬ ಸಾಮಾನ್ಯ ಘಟನೆಗೆ ಸೀಮಿತಗೊಳಿಸಬಾರದಾಗಿ ವಚನ ಸಾಹಿತ್ಯಾಸಕ್ತರಲ್ಲಿ ನಮ್ಮ ಕಳಕಳಿಯ ಮನವಿ.

ಕೆಲವರಿಗೆ ನಾವು ಸತ್ಯವನ್ನೇ ಹೇಳಿದರೂ ಅದನ್ನು ಒಪ್ಪಿಕೊಳ್ಳುವ ಮನಸ್ಸಿಲ್ಲದೆ ತಮ್ಮ ತಪ್ಪನ್ನು ಮುಂದುವರಿಸುತ್ತಾರೆ. ಈ ವೈಯಕ್ತಿಕ ದ್ವೇಷ, ಈರ್ಷೆಗಿಂತಲೂ ವಚನ ಸಾಹಿತ್ಯವನ್ನು ರಕ್ಷಿಸುವುದು, ಅದರ ಪಾವಿತ್ರ್ಯವನ್ನು ಕಾಪಾಡುವುದು ನಮ್ಮ ಪವಿತ್ರ ಧ್ಯೇಯವಾಗಿರಬೇಕು. ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಒಂದು ವಚನವು ಹೀಗಿದೆ.

''ಜಾತಕರ್ಮ, ಶುಭಕರ್ಮ, ಪ್ರೇತಕರ್ಮವ
ಮಾಡುವರು ಲೋಕದ ಮನುಜರು

Digitalized by e-Sahithya Documentation Forum
Sponsored by Sarayu Foundation Trust

ಈ ಪರಿಯ ಮಾಡುವನೇ ಶಿವಭಕ್ತ ? ಅದೆಂತೆಂದಡೆ
ಹುಟ್ಟಿದ ಮಕ್ಕಳಿಗೆ ಲಿಂಗಧಾರಣೆ
ನೆಟ್ಟನೆ ವಿವಾಹದಲ್ಲಿ ಶಿವಗಣಂಗಳ ಪ್ರಸಾದ
ದೇವರ ಪಾದಕ್ಕೆ ಸಂದಲ್ಲಿ ಶಿವಭಕ್ತಂಗೆ
ವಿಭೂತಿ ವೀಳೆಯಂಗೊಟ್ಟು
ಸಮಾಧಿಪೂರ್ಣಂ ಮಾಡುವುದೇ ಶಿವಾಚಾರ
ಲೋಕದ ಕರ್ಮವ ಮಾಡಿದಡೆ, ಆತ ಭಕ್ತನಲ್ಲ
ಲಿಂಗದೂರ, ಅಘೋರ ನರಕಿಯಯ್ಯಾ
ಕೂಡಲ ಚೆನ್ನಸಂಗಮದೇವಾ

- ಚ.ಬ.ವ ೨೩೮

ವಿವಾಹ ಎಂಬ ಪದವನ್ನು ಇಲ್ಲಿ ಬಳಸಲಾಗಿದೆ. ಅಕ್ಕಮಹಾದೇವಿಯ ವಚನದಲ್ಲಿ 'ಮದುವೆ' ಎಂಬ ಪದ ಬಳಕೆಯಾಗಿದೆ. ಧರ್ಮಪಿತರ ವಚನದಲ್ಲಿ ಸಹ ಹಲವಾರು ಕಡೆ 'ಮದುವೆ' ಎಂಬ ಪದವೇ ಬಳಕೆಯಾಗಿದೆ. ಆದ್ದರಿಂದ ''ಕಲ್ಯಾಣ'' ಎಂಬ ಪದವನ್ನು ಮದುವೆಗಾಗಿ ಸೀಮಿತಗೊಳಿಸುವುದು ಬೇಡ. ಅದೇ ರೀತಿ ಮಹೋತ್ಸವ ಎಂಬ ಪದವನ್ನು ಸಹ ಬಳಸುವುದು ಅನವಶ್ಯಕ. ಉತ್ಸವ ಎಂಬುದು ಸಾರ್ವಜನಿಕ ಚಟುವಟಿಕೆಗೆ ಅನ್ವಯಿಸುವ ಪದ. ವೈಯಕ್ತಿಕ ಜೀವನ ಕೌಟುಂಬಿಕ ವ್ಯಾಪ್ತಿಗೆ ಸೇರಿದ ಘಟನೆ. 'ಮಹೋತ್ಸವ' ಎನ್ನುವುದು ಶರಣ ಮೇಳದಂತಹ ಇಡೀ ಸಮಾಜವನ್ನು ಒಂದೆಡೆಗೆ ತರುವ ಕಾರ್ಯಕ್ರಮಕ್ಕೆ ಅನ್ವಯಿಸಬೇಕಾದುದು. ಆದರೂ, ''ಅದು ಕೃತಕ ಎನ್ನಿಸುತ್ತದೆ, ಇನ್ನೂ ಇಡೀ ಸಮಾಜವನ್ನು ಒಂದು ದಾರಿಗೆ ತರಲು ಆಗಿಲ್ಲ'' ಎಂದು ನಾವು ಶರಣ ಮೇಳಕ್ಕೆ ಉತ್ಸವ ಎಂದು ಮಾತ್ರ ಬಳಸುತ್ತಿದ್ದೇವೆ. ಹೀಗಿರುವಾಗ ಇಬ್ಬರು ವ್ಯಕ್ತಿಗಳಿಗೆ, ಒಂದೆರಡು ಮನೆತನಕ್ಕೆ ಸಂಬಂಧಿಸಿದ 'ವಿವಾಹ' ಎಂಬ ಸಹಜ ಘಟನೆಯನ್ನು ಮಹೋತ್ಸವ ಎಂದು ಕರೆಯುವುದು ಅರ್ಥರಹಿತ. ಬಸವ ತತ್ತ್ವಾನುಯಾಯಿಗಳು ಪದಗಳ ಅರ್ಥವನ್ನು ಅರಿತು ಎಚ್ಚರಿಕೆಯಿಂದ ಬಳಸಬೇಕು.

ಶರಣ ಪದ ಬಳಕೆ

ಒಂದು ಮದುವೆಯ ಸನ್ನಿಧಿ ವಹಿಸಿ, ನಿರ್ವಹಣೆ ಮಾಡಲು ಹೋಗಬೇಕಾಯಿತು. ಆ ಮದುವೆಯಲ್ಲಿನ ಪ್ರಮುಖ ವ್ಯಕ್ತಿಯೊಬ್ಬರು ಮೊದಲು ಬರಲಿಲ್ಲ ; ಒತ್ತಾಯದಿಂದ ಕರೆತರಬೇಕಾಯಿತು. ನಂತರ ಮನಸ್ಸಿಲ್ಲದೆ ಬಂದರು ಎಂದು ಒಬ್ಬರು ಹೇಳಿದರು. ಏಕೆ ಎಂದು ಕೇಳಿದೆ. ಆಮಂತ್ರಣ ಪತ್ರದಲ್ಲಿ ವಧುವಿಗೆ ಶರಣೆ ಎಂದು, ವರನಿಗೆ ಶರಣ ಎಂದು, ಸುಖಾಗಮನ ಬಯಸುವವರು. ಶರಣ..... ಎಂದು ಅವರು ಹೆಸರ ಹಾಕಿದ್ದು ಕಾರಣ. ಶರಣ ಎಂದರೆ ಮನೆ, ಸಂಸಾರ ತೊರೆದು ಸನ್ಯಾಸಿ ಆದವನಂತೆ

ಎಂದು ಇವರು ಹೇಳಿದರು. ಕೇಳಿ, ನಾನು ಸುಸ್ತೋ ಸುಸ್ತು ! ಲಿಂಗಾಯತ ಸಮಾಜದಂಥ ಇಷ್ಟು ಅಜ್ಞಾನಿ ಸಮಾಜ ಜಗತ್ತಿನಲ್ಲಿ, ಮಟಮಟ ಮಧ್ಯಾಹ್ನ ಲಾಟೀನು ಹಿಡಿದು ಹುಡುಕಿದರೂ ಇನ್ನೊಂದು ಸಿಗಲಿಕ್ಕಿಲ್ಲ ಎಂದು ವಿಷಾದವೆನಿಸಿತು.

'ಶರಣ' ಎಂದರೆ ಸನ್ಯಾಸಿ ಎಂದು ಎಲ್ಲಿದೆ ? ಅರ್ಥವಿಲ್ಲದೆ ಅನೇಕ ಪದಗಳನ್ನು ಭಾರತೀಯರು ಬಳಸುತ್ತ ತಮ್ಮ ಸ್ವಂತಿಕೆಯನ್ನೇ ಕಳೆದುಕೊಂಡಿದ್ದಾರೆ. Convent ಕಾನ್ವೆಂಟ್ ಎಂದರೆ ಕ್ರಿಸ್ತ ಸನ್ಯಾಸಿಗಳು ವಾಸಿಸುವ ಸ್ಥಳ ಎಂದರ್ಥ. ಕ್ರೈಸ್ತ ಮತ ಎಂದೇ ಅದರ ಅರ್ಥ. ಕ್ರೈಸ್ತ ಸನ್ಯಾಸಿಗಳು ಶಿಕ್ಷಣ ಕೊಡಲು ಆರಂಭಿಸಿದಾಗ ಈ ಪದ ಬಳಕೆಗೆ ಬಂತು ಕಾನ್ವೆಂಟ್‌ದಲ್ಲಿ ಒಳ್ಳೆಯ ಶಿಕ್ಷಣ ಕೊಡುತ್ತಾರೆ ಎಂಬ ನಂಬಿಕೆಯಿಂದ ಹಿಂದುಗಳು ಅಲ್ಲಿಗೇ ವಿದ್ಯಾಭ್ಯಾಸಕ್ಕೆ ಮಕ್ಕಳನ್ನು ಕಳಿಸಲು ತೊಡಗಿದರು. ಅದಕ್ಕಾಗಿ ವಿದ್ಯಾಸಂಸ್ಥೆ ತೆರೆಯುವ ಹಿಂದೂ ಜನರು ತಮ್ಮ ಶಾಲೆಗೆ ಕಾನ್ವೆಂಟ್ ಎಂದು ಕರೆದುಕೊಳ್ಳಲು ಆರಂಭಿಸಿದ್ದಾರೆ. 'ಸಾಹಿಬ್' ಎಂಬ ಪದ. ಅದನ್ನು ಕೇಳಿದಾಗ, ನನಗೂ ಭಯಂಕರ ಕೋಪಬರುತ್ತದೆ. ಇಂಗ್ಲೀಷಿನಲ್ಲಿ 'ಸರ್'ಪದ ಇದೆ. ಸಾಹಿಬ್ ಅಂದರೆ ಸಂಗಾತಿ. ಇಸ್ಲಾಂ ಸ್ವೀಕರಿಸಿದವರು ಪರಸ್ಪರ ಸಾಹಿಬರು. ಧ್ವನ್ಯಾರ್ಥದಲ್ಲಿ ಸಾಹೇಬರೆಂದರೆ ಬಾಸ್, ಯಜಮಾನ ಎಂಬಂತೆ ಈಗ ಬಳಸಲಾಗುತ್ತಿದೆ. ಮಹಿಳೆಯರು ಗಂಡನಿಗೆ ಸಾಹೇಬರೇ ಎನ್ನುತ್ತಾರೆ. ಈ ಪದದ ಅರ್ಥ ತಿಳಿದಾಗಿನಿಂದ ನಾನು ತಲೆಕೆಡಿಸಿಕೊಂಡು ಭಾರತೀಯ ಭಾಷೆಯಲ್ಲಿ ಸಂಬೋಧನೆಗೆ ಯಾವ ಪದ ಸರಿ ಎಂದು ಹುಡುಕುತ್ತಿದ್ದೇನೆ. ಮಹನೀಯ, ಮಹಾಶಯ ಆರ್ಯ (ಪೂಜ್ಯ), ಒಡೆಯ, ಯಜಮಾನ, ಧಣಿ ಇತ್ಯಾದಿ - ಏಕೋ ಒಂದೂ ಸರಿ ಹೊಂದುತ್ತಿಲ್ಲ.

ಹಿರಿಯರಿಗೆ ಅಪ್ಪಾವರೇ, ಅಮ್ಮಾವರೇ/ತಾಯಿಯವರೇ
ಮಧ್ಯಮ ವಯದವರಿಗೆ ಅಣ್ಣನವರೇ, ಅಕ್ಕಾವರೇ
ಕಿರಿಯರಿಗೆ ತಮ್ಮಾ, ತಂಗಿ/ತಾಯಿ (ಗೌರವ ಸೂಚಕ)

ಹೀಗೆಲ್ಲ ಹೇಳಬಹುದು. ಆದರೆ ಮುದ್ರಿಸುವಾಗ ಲಿಂಗಾಯತ ಧರ್ಮ ಸಂಸ್ಕೃತಿಗೆ ಅನುಸಾರವಾಗಿ ಶರಣ/ಶರಣೆ ಪದವೇ ಸರಿ. ಇದರ ಸಾಮಾನ್ಯ ಅರ್ಥ, ದೇವರಿಗೆ ಶರಣಾದವನು/ದವಳು, ಬಸವ ಪಥಿಕನು/ಳು ಎಂದು ಅರ್ಥಮಾಡಬಹುದು. ನಾವು ವಧುವಿಗೆ ಶರಣೆ........, ಶರಣ.......... ಎಂದು ಬಳಸುವುದನ್ನು ತಿರಸ್ಕರಿಸಿ ಅಷ್ಟಾವರಣ ಸಂಪನ್ನ/ಸಂಪನ್ನೆ ಎಂದು ಕೆಲವರು ಬಳಸುತ್ತಾರೆ. ನಾವು ಮಾಡಿರಿ ಎಂಬುದನ್ನು ಮಾಡಬಾರದು, ವಿರೋಧಿಸಬೇಕು ಎಂದು ಈ ಕೆಲವರ ಧೋರಣೆ. ಉಳಿದವರು ಚಿ। ಸೌ॥. ಎಂದು ಬಳಸುತ್ತಾರೆ. ಬಸವ ತತ್ತ್ವದವರು ಅಷ್ಟಾವರಣ ಸಂಪನ್ನೆ/ಸಂಪನ್ನ ಎನ್ನುತ್ತಾರೆ. ಇದನ್ನು ನೋಡಿದಾಗ ಅವರ ಅಜ್ಞಾನ ಕಂಡು ನಗು ಬರುತ್ತದೆ ಏಕೆಂದರೆ ಅವರ ಪ್ರಕಾರ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟಸ್ಥಲವೇ ಆತ್ಮ ! ಅಷ್ಟಾವರಣ ಸಂಪನ್ನ = ಬಿ. ಎ., ಪಂಚಾಚಾರ ಸಂಪನ್ನ = ಎಂ. ಎ. ಷಟ್‌ಸ್ಥಲ ಸಂಪನ್ನ =

Digitalized by e-Sahithya Documentation Forum
Sponsored by Sarayu Foundation Trust

ಪಿಹೆಚ್.ಡಿ ಧಾರಕ. ಇವೆಲ್ಲವನ್ನೂ ಹೊಂದಿದವನು ಡಾಕ್ಟರೇಟ್ ಪಡೆದವನು. ಅವನನ್ನು ಡಾ॥ ಎಂದು ಬರೆದು ಗೌರವಿಸುತ್ತೇವೆ. ಇಂಥ ಡಾಕ್ಟರೇಟ್ ಹೆಸರಿಗೆ ಡಾ॥ ಎಂದು ಸೇರಿಸದೆ ಬರೀ ಬಿ.ಎ. ಎಂದು ಬರೆದರೆ ಹೇಗೆ ? 'ಶರಣ' ಎಂದರೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಅಳವಡಿಸಿಕೊಂಡವನು ಎಂದು ಅರ್ಥ. ಬರೀ ಅಷ್ಟಾವರಣ ಸಂಪನ್ನ/ಸಂಪನ್ನೆ ಎಂದರೆ ಡಾಕ್ಟರೇಟ್ ಡಿಗ್ರಿ ಪಡೆದವನ ಹೆಸರಿನ ಮುಂದೆ ಬಿ.ಎ. ಎಂದು ಬರೆದು ಕೈ ಬಿಟ್ಟಂತೆ.

'ಶರಣ' ಎಂದು ಬರೆದ ಮಾತ್ರಕ್ಕೆ ಇದಕ್ಕೆ ಅರ್ಹತೆ ಇದೆಯೇ ಎಂದು ಕೆಲವರು ಕೇಳಬಹುದು. ಯಾರೂ ಯಾವ ಪದಕ್ಕೂ ಪೂರ್ಣ ಅರ್ಹರಲ್ಲ. ಹೇಗೆಂದರೆ, ಶ್ರೀ... ಎಂದರೆ ಸಂಪತ್ತು. ವಿದ್ಯೆ, ಧನ, ಮುಂತಾದ ಎಲ್ಲ ಸಂಪತ್ತು ಹೊಂದಿರುವಿಕೆ. ಶ್ರೀ, ಶ್ರೀಮತಿ ಎಂದು ಬರೆದುಕೊಳ್ಳುವ ಎಲ್ಲರಿಗೂ ಈ ಸಂಪತ್ತು ಇರುತ್ತವೆಯೇ ?

ಧರ್ಮ-ಸಂಸ್ಕೃತಿ

ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ಸಂಸ್ಕೃತಿ ಮತ್ತು ಪಾರಿಭಾಷಿಕ ಪದಗಳು ಇರುತ್ತದೆ. ಉದಾಹರಣೆಗೆ ಊಟ ಆಯ್ತಾ ? ಎಂದು ನಾವು ಅನ್ನುವುದಿಲ್ಲ, ಪ್ರಸಾದವಾಯಿತೆ ? ಎನ್ನುತ್ತೇವೆ. ಊಟಕ್ಕೆ ಬನ್ನಿ ಎನ್ನುವುದಿಲ್ಲ, ಪ್ರಸಾದಕ್ಕೆ ಬನ್ನಿ ಎನ್ನುತ್ತೇವೆ. ಹಾಗೆಯೇ ಲಿಂಗಾಯತ ಧರ್ಮಾನುಯಾಯಿಗಳೆಲ್ಲರೂ ಶರಣರು. ಮುಸಲೀಮರು ಪರಸ್ಪರರನ್ನು 'ಸಾಹಿಬ್' ಎಂದು ವ್ಯವಹರಿಸಿಕೊಳ್ಳುವಂತೆ, ಶರಣ ಧರ್ಮಾನುಯಾಯಿಗಳು ಪರಸ್ಪರ ಶರಣ ಪದದ ಮೂಲಕ ವ್ಯವಹರಿಸಬೇಕು. ಆದ್ದರಿಂದ ಶರಣ ಧರ್ಮದ ಉದಾತ್ತ ಸಂಸ್ಕೃತಿಯನ್ನು ಪ್ರಚಾರ ಮಾಡಲು ಪ್ರತಿಯೊಂದು ಹೆಜ್ಜೆಯಲ್ಲೂ ನಾವು ಪ್ರಯತ್ನಿಸಬೇಕು. ಪದಕ್ಕೆ ತಕ್ಕ ಅರ್ಹತೆ ಸಾವಿರಕ್ಕೆ ಒಬ್ಬರಲ್ಲೂ ಇರುವುದಿಲ್ಲ. ಇರುವುದಕ್ಕೆ ತಕ್ಕಂತೆ ಸಂಬೋಧನೆ ಮಾಡಬೇಕೆಂದು ಪ್ರಯತ್ನ ಪಡುವದಾದರೆ ಆಗ

೧. ಲಂಚಕೋರ ಅಧಿಕಾರಿಗಳಾದ .... ಅಪರೇ
೨. ಗೂಂಡಾ ಸಾರ್ವಭೌಮರಾದ .... ಅವರೇ
೩. ಸರ್ವಾಧಿಕಾರಿ ಪ್ರವೃತ್ತಿಯವರಾದ .... ಅವರೇ
೪. ಜಾತಿವಾದಿ ಜಗದ್ಗುರುಗಳಾದ .... ಅವರೇ

ಇತ್ಯಾದಿ ಇತ್ಯಾದಿ ಅನ್ನಬೇಕಾದೀತು. ಶರಣ ಧರ್ಮದ ಸಂಸ್ಕೃತಿಗನುಗುಣವಾಗಿ ಶರಣ/ಶರಣೆ ಪದವನ್ನು ಬಳಸುವುದರಿಂದ ಕೆಟ್ಟವರೂ ನಾಚಿಕೆಯಿಂದ ನಲುಗಿ, ತಿದ್ದಿಕೊಳ್ಳಲು ಪ್ರಯತ್ನಿಸಬಹುದು. ಆದ್ದರಿಂದ ಆದಿ ಶರಣರು ಕಲಿಸಿರುವ ನಡೆ, ನುಡಿ, ಶಿಷ್ಟಾಚಾರಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯವಿದೆ.

- ಮಾತಾಜಿ

ನಾನು ಕಾಯುತ್ತಿದ್ದೇನೆ, ಹರಸುತ್ತಿದ್ದೇನೆ

ಒಂದು ಹೃದಯ ಸ್ಪರ್ಶಿ ಪ್ರಸಂಗ

- ಮಾತಾಜಿ

ನವೆಂಬರ್ ತಿಂಗಳಲ್ಲಿ ಎರಡು ವಿಲಕ್ಷಣ ಘಟನೆಗಳು ನಡೆದವು ; ಅವು ಹೃದಯ ಸ್ಪರ್ಶಿ ಕೂಡ. ಶರಣ ಮೇಳ ದೇಣಿಗೆ ಸಂಗ್ರಹಕ್ಕಾಗಿ ಅನೇಕ ಶರಣಬಂಧುಗಳು ಕಾರು ತೆಗೆದುಕೊಂಡು ಹೋಗಿದ್ದರು. ರಾತ್ರಿ ವಾಪಸ್ಸು ಬೆಂಗಳೂರಿಗೆ ಬರುವಾಗ ಆಗಲೇ ೧೨ ಗಂಟೆ. ದಾರಿಯಲ್ಲಿ ಒಂದು ದೊಡ್ಡ ಕಪ್ಪನೆಯ ವಸ್ತುವನ್ನು ಕತ್ತಲಲ್ಲಿ ನೋಡಿ ಕುತೂಹಲಗೊಂಡು ಬಂದು ಕಾರು ನಿಲ್ಲಿಸಿದ್ದಾರೆ. ರಸ್ತೆಯ ಬದಿಯಲ್ಲಿ ಬಿದ್ದ ಆ ಬೃಹತ್ ಪ್ಲಾಸ್ಟಿಕ್ ಚೀಲದಲ್ಲಿ ಪ್ಲಾಸ್ಟಿಕ್ ಕೊಡಗಳಿವೆ. ಅದನ್ನು ಏನು ಮಾಡಬೇಕು ಎಂದು ಸಂದಿಗ್ಧತೆಗೆ ಒಳಗಾಗಿದ್ದಾರೆ.

"ತೆಗೆದುಕೊಂಡು ಹೋಗೋಣ ; ಇಲ್ಲದ್ದಿದರೆ ಇದು ಯಾರದೋ ಪಾಲಾಗಬಹುದು. ಒಯ್ದರೆ ಶರಣ ಮೇಳಕ್ಕೆ ಉಪಯೋಗವಾಗುತ್ತೆ. ಕಳೆದುಕೊಂಡ ವ್ಯಕ್ತಿಗೆ ಅಪ್ರತ್ಯಕ್ಷವಾಗಿ ಪುಣ್ಯ ಬರುತ್ತದೆ.'' ಎಂದು ಕೆಲವರು, ಮತ್ತೆ ಕೆಲವರು "ಇದನ್ನು ಒಯ್ದರೆ ಮಾತಾಜಿಯವರು ಬೈಯ್ಯಬಹುದು, ಬೇರೆಯವರದ್ದು ಏಕೆ ತಂದಿರಿ ?'' ಎಂದು ಆದ್ದರಿಂದ ಬಿಟ್ಟು ಹೋಗೋಣ ಎಂದು ಚರ್ಚಿಸಿದ್ದಾರೆ.

ದಾರಿಯಲ್ಲಿ ಬಿಟ್ಟು ಹೋದರೆ ಏನು ಪ್ರಯೋಜನ ? ಎಂದು ಮೊದಲ ವಾದಿಗಳು. ಯಾರಾದರೂ ವಾಪಸ್ಸು ಬರುತ್ತಾರೇನೋ ಅದನ್ನು ಹುಡುಕಿಕೊಂಡು ಎಂದು ಕೊರೆಯುವ ಚಳಿಯಲ್ಲಿ ಮುಕ್ಕಾಲು ಗಂಟೆ ಕಾದಿದ್ದಾರೆ. ಅಂತೂ ಒಂದು ನಿರ್ಧಾರಕ್ಕೆ ಬಂದು ಹೊತ್ತು ತಂದರು. ಶರಣ ಮೇಳ ಸಂಗ್ರಹಕ್ಕೆ ಹೋಗಿದ್ದ ಆ ತಂಡದಲ್ಲಿ ಹೊಸ ಭಕ್ತರು ಇದ್ದುದರಿಂದ ರಾತ್ರಿ ೧೨ ಆಗಿದ್ದರೂ ಅವರನ್ನು ಭೇಟಿಯಾಗಲು ಹೋದೆ. ಅಲ್ಲಿಟ್ಟಿದ್ದ ದೊಡ್ಡಗಂಟು ನೋಡಿ ಕುತೂಹಲದಿಂದ ವಿಚಾರಿಸಿದೆ. ವಿವರ ತಿಳಿಸಿದರು. ನನಗೆ ತುಂಬಾ ದುಃಖವೆನಿಸಿತ್ತು. ಅವರು ತೆಗೆದುಕೊಂಡ ನಿರ್ಧಾರ, ತಂದುದು ಸರಿ ; ಇಲ್ಲದಿದ್ದರೆ ಆ ಗಂಟು ಕತ್ತಲಲ್ಲಿ ಹಲವಾರು ಸಂದೇಹ ಹುಟ್ಟಿಸುತ್ತಿತ್ತು. ಆದರೆ ನನಗೆ ದುಃಖವಾದುದೇಕೆಂದರೆ, ಯಾರೋ ಒಬ್ಬ ಹಳ್ಳಿಯ ವ್ಯಾಪಾರಿ ಬಸ್ ಅಥವಾ ಲಾರಿ ಮೇಲೆ ಹಾಕಿಕೊಂಡು ಈ ವಸ್ತುವನ್ನು ಒಯ್ಯುವಾಗ ಗಾಳಿಯ ಹೊಡೆತಕ್ಕೆ ಸಿಕ್ಕಿ ಕೆಳಗೆ ಬಿದ್ದಿದೆ. ಪಾಪ ! ಇದರ ಮೇಲೆ ಉಪಜೀವನ ಮಾಡುವ ಅವನು ಎಷ್ಟು ಕಷ್ಟ ಪಡುವನೊ ? ಸಾಲ ಮಾಡಿ ಖರೀದಿಸಿದ್ದನೇನೊ ? ಅನಾಮಿಕ ಬಡ ವ್ಯಾಪಾರಿಗೆ ಅನ್ಯಾಯವಾಯಿತು ಎಂದು ತುಂಬಾ ಸಂಕಟವಾಯಿತು. ಮಾಡುವುದೇನು ಯಾರಾದರೂ ಕಳೆದುಕೊಂಡವನು ಪತ್ತೆ ತಮ್ಮದು ಎಂದು ಕೇಳಬಹುದೆ ಎಂದು ಕಾಯ್ದೇ ಕಾಯ್ದೆವು.

Digitalized by e-Sahithya Documentation Forum
Sponsored by Sarayu Foundation Trust

ಹಚ್ಚುವುದಾದರೂ ಹೇಗೆ ? ಬಸ್ಸಿನ ಮೇಲೆ ಒಯ್ಯುತ್ತಿದ್ದನೋ ? ಅಥವಾ ಲಾರಿಯು ಸಾಮಾನು ಹೊತ್ತು ಹೋಗುವಾಗ ಒಂದು ಗಂಟು ಕಳಚಿ ಬಿದ್ದಿತ್ತೋ ? ಒಂದು ವೇಳೆ, ಒಬ್ಬ ಚಿಕ್ಕ ವ್ಯಾಪಾರಿಯು ಕಳೆದುಕೊಂಡಿದ್ದರೆ ಅವನಿಗೆ ತೊಂದರೆಯಾಗದಂತೆ ಪವಾಡ ಸದೃಶವಾಗಿ ಆ ಹಣ ಒದಗುವುದು ಮಾತ್ರವಲ್ಲ ಅವನಿಗೆ ಇನ್ನೂ ಹೆಚ್ಚು ಸಂಪತ್ತು ಅನುಗ್ರಹಿಸಿರಿ ಎಂದು ಸೃಷ್ಟಿಕರ್ತ ಲಿಂಗದೇವನಲ್ಲಿ ಧರ್ಮಕರ್ತ ಬಸವಣ್ಣನವರಲ್ಲಿ ಪ್ರಾರ್ಥಿಸುತ್ತಾ ಹೃತ್ಪೂರ್ವಕವಾಗಿ ಆ ಅಪರಿಚಿತನನ್ನು ಹರಸುತ್ತಿದ್ದೇನೆ.

ಬಡವಿ ತಾಯಿ-ಮಗ

ದಿ. ೨೭-೧೧-೯೯ ರಂದು ಮೆಹಬೂಬ್‌ನಗರದಲ್ಲಿ ಶರಣ ಕೊಂಡಾ ಬಸವರಾಜ್ ಅವರ ಮಗನ ಮದುವೆ ಇತ್ತು. ಸ್ವಧರ್ಮ (ಬಸವ ತತ್ತ್ವ)ದ ಪ್ರಕಾರವೇ ಮದುವೆ ನಡೆಸಬೇಕೆಂಬ ಹಂಬಲದಿಂದ ನನ್ನನ್ನು ಆಹ್ವಾನಿಸಿದ್ದರು. ಕೂಡಲ ಸಂಗಮದಿಂದ ರಾಯಚೂರು ಮಾರ್ಗವಾಗಿ ಹೊರಟಿದ್ದೆವು. ದಾರಿಯಲ್ಲಿ ೩ ಊರುಗಳಲ್ಲಿ ಸ್ವಾಗತ ಇಟ್ಟುಕೊಂಡಿದ್ದರು. ರಾಯಚೂರಿನಿಂದ ಫೋನ್ ಮಾಡಿ, ಬರುತ್ತಿರುವ ವಿಷಯ ತಿಳಿಸಬೇಕಿತ್ತು. ಭವ್ಯ ಸ್ವಾಗತ ಸಮಾರಂಭ ಏರ್ಪಡಿಸಿದ್ದ ಮಸ್ಕಲ್ ಜನರು ಹೆದ್ದಾರಿಯ ಮೇಲೆ ಕಾಯುತ್ತಿದ್ದರು. ಕಾರು ನಿಲ್ಲಿಸಿ, ನಮ್ಮ ಕಾರ್ಯಕರ್ತರು ಫೋನ್ ಮಾಡಲು ಹೋದರು. ಆಗ ಓರ್ವ ತಾಯಿ ಮತ್ತು ಮಗ ಬಸ್‌ಗಾಗಿ ಕಾಯುತ್ತಿದ್ದರು. ಇಬ್ಬರೂ ಬಡತನದಿಂದ ನಲುಗಿದವರು. ಅಜ್ಜಿಯ ಸೀರೆ ಹರಿದಿತ್ತು. "ನಮ್ಮ ದೇಶದಲ್ಲಿ ಎಂಥ ಬಡತನವಿದೆ, ಶ್ರೀಮಂತರು, ರಾಜಕಾರಣಿಗಳು, ಸರ್ಕಾರಿ ನೌಕರರು ದಿನದಿನಕ್ಕೆ ಸಬಲರಾದರೆ ಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. ದೇವರೇ ಇದಕ್ಕೆ ಪರಿಹಾರವೇನು ? ಬಡವರಿಗೆ ಬದುಕುವ ದಾರಿ ಏನು ? ಅಸಂಘಟಿತ ಜನ ಮತ್ತಷ್ಟು ಬಡತನದ ಪೆಟ್ಟು ತಿನ್ನುತ್ತಿದ್ದಾರೆ. ಸಂಘಟಿತರು, ಆಳುವವರು ಮತ್ತಷ್ಟು ಬಲಿಷ್ಠರಾಗುತ್ತಿದ್ದಾರೆ. ಧರ್ಮ, ನ್ಯಾಯ, ಸತ್ಯ ಮೂಲೆಗುಂಪಾಗುತ್ತಿವೆ. ಇದಕ್ಕೆಲ್ಲ ಏನು ಪರಿಹಾರ ?" ಹೀಗೆ ನನ್ನ ಮನಸ್ಸು ಅವರನ್ನು ನೋಡಿ ದುಃಖದಿಂದ ಆಲೋಚಿಸುತ್ತಿತ್ತು.

ತಾಯಿ ಮಗ ಪರಸ್ಪರ ಏನೋ ಮಾತಾಡಿಕೊಂಡರು. ಕಾರಿನ ಬಳಿ ಬಂದು ದರ್ಶನ ಪಡೆಯಬೇಕೆಂದು ಕೋರಿದರು. ಅವರ ಬಗ್ಗೆಯೇ ಆಲೋಚಿಸುತ್ತಿದ್ದ ನಾನು ಕಾರಿನ ಬಾಗಿಲು ತೆಗೆದೆ. ನಮಸ್ಕರಿಸಿ, ಇಬ್ಬರೂ ಒಂದೊಂದು ರೂಪಾಯಿ ಕಾಣಿಕೆ ಕೊಟ್ಟರು. ಬಹುಶಃ ಆ ಹಣ ಅವರಿಗೆ ಭಾರವಿರಲೇಬೇಕು. ಅಷ್ಟು ನಿರ್ಗತಿಕರಾಗಿದ್ದರೆಂಬುದನ್ನು ಅವರ ಕೃಶಗೊಂಡ ಶರೀರ, ಹರಿದ ಬಟ್ಟೆ ಹೇಳುತ್ತಿದ್ದವು. ಆ ಹಣವನ್ನು ತೆಗೆದುಕೊಳ್ಳುವುದು ಸರಿಯೇ ? ನನ್ನ ಮನಸ್ಸು ಹೊಯ್ದಾಡಿತು. ಇದಕ್ಕೆ ಸೇರಿಸಿ ಇನ್ನಷ್ಟು ಕೊಡಲೇ ಎನಿಸಿತು. ಆ ಅಜ್ಜಿ ಬಡವಿಯಿದ್ದರೂ ಕಣ್ಣುಗಳಲ್ಲಿ ಭಕ್ತಿ ಮಡುಗಟ್ಟಿತ್ತು ; ಆಕೆ ತೆಗೆದುಕೊಳ್ಳುವುದಿಲ್ಲ ಎನಿಸುತ್ತಿತ್ತು.

"ತಾಯಿ ನಿಮ್ಮನ್ನು ಟಿ.ವಿಯಲ್ಲಿ ನೋಡಿದ್ದೇವೆ. ನಾವು ದೂರದ ಹಳ್ಳಿಯವರು. ನೋಡಿ ಗುರುತಿಸಿದೆವು. ತುಂಬಾ ಬಡವರು. ನಿಮ್ಮ ಆಶೀರ್ವಾದದಿಂದ ನಮ್ಮ ಕಷ್ಟ ಪರಿಹಾರವಾಗಲಿ." ಎಂದು ನಮಸ್ಕರಿಸಿದರು. ಆ ಎರಡೂ ರೂಪಾಯಿಗಳನ್ನು ವಾಪಸ್ಸು ಮಾಡಿದರೆ ಅವರ ಭಕ್ತಿಗೆ, ಭಾವುಕತೆಗೆ ಆಘಾತವಾಗಬಹುದು ಎಂದು ಜೋಪಾನವಾಗಿ ತೆಗೆದುಕೊಂಡೆ. ಅಲ್ಲದೆ ಆ ಹಣ ಸತ್ಯ ಶುದ್ಧ ದುಡಿಮೆಯಿಂದ ಅವರು ಗಳಿಸಿ, ದಾಸೋಹ ಭಾವದಿಂದ ನೀಡಿರುವ ಪರಮ ಪವಿತ್ರ ಹಣ; ಧರ್ಮಪಿತರ ಮಹಾಮನೆಯ ದಾಸೋಹಕ್ಕೆ ಶರಣ ಮೇಳದಲ್ಲಿ ಸಲ್ಲಲಿ ಎಂದು ತೆಗೆದುಕೊಂಡೆ. ಅಂದಿನಿಂದಲೂ ಸೃಷ್ಟಿಕರ್ತ ಲಿಂಗದೇವ, ಧರ್ಮಪಿತ ಬಸವಣ್ಣನವರಲ್ಲಿ ಪ್ರಾರ್ಥಿಸುತ್ತಿದ್ದೇನೆ.

"ಅವರು ಎಂಥಾ ಪ್ರಾಮಾಣಿಕ ಸದ್ಭಕ್ತರು ! ಆದ್ದರಿಂದ ಅವರಿಗೆ ಸಂಕಷ್ಟ ಕಳೆದು ಸಂಪತ್ತು ಪ್ರಾಪ್ತಿಯಾಗಬೇಕು. ಅವರು ಮತ್ತೊಮ್ಮೆ ಸುಸ್ಥಿತಿಯಲ್ಲಿ ಭೇಟಿಯಾಗಿ ತಾವು ಉತ್ತಮ ಸ್ಥಿತಿಗೆ ಏರಿದುದನ್ನು ವರದಿ ಮಾಡಬೇಕು." ಎಂದು ಸಂಕಲ್ಪಿಸಿ, ಹರಸುತ್ತಿದ್ದೇನೆ. ಪ್ರಯಾಣದ ಆತುರದಲ್ಲಿ ಅವರ ವಿಳಾಸವನ್ನು ಪಡೆಯದುದಕ್ಕಾಗಿ ಪರಿತಾಪವನ್ನೂ ಪಡುತ್ತಿದ್ದೇನೆ.

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇರದೆ ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' x ೬೦'-ವಿಸ್ತೀರ್ಣ ೨೪೦೦ ಚ. ಅಡಿಗಳು

ವರ್ಗ 'ಬಿ'-೩೦' x ೪೦'-ವಿಸ್ತೀರ್ಣ ೧೨೦೦ ಚ. ಅಡಿಗಳು

Digitalized by e-Sahithya Documentation Forum
Sponsored by Sarayu Foundation Trust

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ವಿರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ೧೦೦-೦೦ (ಒಂದುನೂರು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080 - 3325335, 3322790
Telefax : 3306183

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ, ನಗರ ಯೋಜನೆ, **ಬಸವ ಮಂಟಪ**
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - ೫೬೦ ೦೧೦

ಶರಣ ಮೇಳದಲ್ಲಿ ಬಿಳಿಯ ವಸ್ತ್ರಧಾರಣೆ

ಶರಣ ಮೇಳದ ನಾಲ್ಕು ದಿವಸಗಳ ಕಾರ್ಯಕ್ರಮದ ಅವಧಿಯಲ್ಲಿ ಬಿಳಿಯ ಬಟ್ಟೆಗಳನ್ನು ಧರಿಸಿ, ಸದಾ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದಿರಿ. ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಗಳಾಗುವವರು ಕಡ್ಡಾಯವಾಗಿ ಬಿಳಿಯ ಬಟ್ಟೆಯುಟ್ಟು ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದಿರಲೇಬೇಕು.

ಪ್ರೇರಣೆಗಳು (INTUITIONS)

- ಬಸವಾತ್ಮಜೆ

ಆಧ್ಯಾತ್ಮಿಕ, ಅನುಭಾವಿಕ ಕ್ಷೇತ್ರದಲ್ಲಿ ಪ್ರೇರಣೆಗಳು, ಸ್ಫುರಣಗಳು ಆಗುತ್ತಿರುವುದು ಬಲು ಸಹಜ. ದೈವೀ ಶಕ್ತಿಯ ಕಾರ್ಯಕಲಾಪದ ಬಗ್ಗೆ ಸೋಜಿಗವೆನಿಸುತ್ತದೆ.

೧. ಅಖಿಲ ಭಾರತ ವೀರಶೈವ ಮಹಾಸಭೆಯ ಹಿಂದಿನ ಅಧ್ಯಕ್ಷರಾದ ಲಿಂಗೈಕ್ಯ ಶ್ರೀ ಐ.ಎಂ. ಮಗದುಮ್ ಅವರು ಕರೆದಿದ್ದ ಒಂದು ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿನಿಂದ ಬಾಗಲಕೋಟೆಯವರೆಗೆ ಗೋಳಗುಮ್ಮಟ ಟ್ರೇನಿನಲ್ಲಿ ಹೋಗುವಾಗ ಆಕಸ್ಮಿಕವಾಗಿ ಭೇಟಿಯಾದ ಗೋಂದಿ ಆಶ್ರಮದ ಪೂಜ್ಯ ನಾಮದೇವ ಸ್ವಾಮಿಗಳಿಂದ ಪಂಢರಾಪುರಕ್ಕೆ ವರ್ಷಕ್ಕೆ ಎರಡು ಬಾರಿ ವಾರಕರಿಯವರು ಹೋಗುವ ವಿಷಯ ತಿಳಿದು, ಶರಣ ಮೇಳ ಮಾಡುವ ಪ್ರೇರಣೆ ಒದಗಿತು. ೧೯೮೮ ರಲ್ಲಿ ಮೊದಲ ಶರಣ ಮೇಳ ಜರುಗಿತು. ಅನಿರೀಕ್ಷಿತ ಯಶಸ್ಸು ಪಡೆಯಿತು. ಇಂಥ ಒಂದು ಶರಣ ಮೇಳ ನಡೆಯುವುದು ಎಂಬ ಮಡಿವಾಳ ಮಾಚಿದೇವರ ಕಾಲಜ್ಞಾನ ವಚನಗಳನ್ನು ಆಗಿನ್ನೂ, ನಾನು ಓದಿರಲಿಲ್ಲ. ಅವನ್ನು ನಾನು ಓದಿದ್ದು ೧೯೯೧ರಲ್ಲಿ ; ಓದುವ ಮೊದಲೇ ಪ್ರೇರಣೆಯಾಗಿ, ಶರಣ ಮೇಳ ಆರಂಭವಾಗಿತ್ತು ಎಂಬುದು ಗಮನಾರ್ಹ.

೨. 'ಲಿಂಗದೇವ' - ದೇವರಿಗೆ ಅಪ್ಪ ಬಸವಣ್ಣನವರಿಟ್ಟ ತಾತ್ತ್ವಿಕ ಹೆಸರು. ಇದು ಪೂರ್ಣರೂಪದಲ್ಲಿ ಪ್ರಕಟಗೊಂಡುದು ೧೯೬೬ನೇ ಇಸವಿ ಆಗಸ್ಟ್ ೧೯ ರಂದು ; ೮೦೦ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ "ಬಸವ ವಚನ ದೀಪ್ತಿ" ಮುದ್ರಿಸಿದಾಗ. ಆದರೆ ಧರ್ಮಪಿತರು ಪ್ರೇರಣೆ ನೀಡಿ ಆಗಲೇ ಪೂಜ್ಯ ಶ್ರೀ ಅಪ್ಪಾಜಿಯವರು ಇದ್ದಾಗಲೇ ೧೯೫೪ರ ಜನವರಿ ೧೪ ರಂದು ಬಿಡುಗಡೆಗೊಂಡ ಬಸವ ಧರ್ಮ ಸಂಸ್ಕಾರಗಳು ಪುಸ್ತಕದಲ್ಲಿ ಶೀರ್ಷಿಕೆಯ ಪುಟದಲ್ಲೇ ಪ್ರಕಟಗೊಳ್ಳುವಂತೆ ಮಾಡಿದ್ದಾರೆ. ಪೂಜ್ಯ ಅಪ್ಪಾಜಿ ಜೂನ್ ೩೦, ೧೯೫೪ರಂದು ಲಿಂಗೈಕ್ಯರಾದರು. ೧೯೯೬ರ ಜನವರಿ ೧೪ ರಂದು ಶರಣ ಮೇಳ ಎಂಬ ಹೊತ್ತಿಗೆಯನ್ನು ಪ್ರಕಟಿಸಲಾಗಿದೆ. ಅಲ್ಲಿ 'ಲಿಂಗದೇವ' ಅತ್ಯಂತ ಸ್ಪಷ್ಟವಾಗಿ ಪ್ರಕಾಶಿಸಿದ್ದಾನೆ. ನಿನ್ನೆ (೩/೧೨/೯೯) ಆ ಪುಸ್ತಕ ಓದುವಾಗ ಇದು ಗೋಚರವಾಗಿ ಆಶ್ಚರ್ಯವಾಗಿದೆ.

೩. "ಸಕಲ ಪುರಾತನರು ಹೇಳಿದ ಕಾಲಜ್ಞಾನ" ಎಂಬ ಪುಸ್ತಕವೊಂದನ್ನು ಅಲ್ಲಮ ಪ್ರಭು ಸ್ವಾಮಿಗಳಿಗೆ ಬಸವ ಜ್ಯೋತಿ ಪ್ರವಾಸಕಾಲದಲ್ಲಿ ಒಬ್ಬರು ಕೊಟ್ಟಿದ್ದಾರೆ. ಈ ಹಿಂದೆ ನನಗೆ ಸಿಕ್ಕ ೨ ಕಾಲಜ್ಞಾನ ವಚನಗಳಿಗಿಂತ ಹೆಚ್ಚಿನ ಪುಟ ಇದರಲ್ಲಿವೆ. ಸುಮಾರು ೩೧೦ ಪುಟದ ಪುಸ್ತಕವಿದು. ಮೊದಲ ಕೆಲವು ಪುಟಗಳು ಕಿತ್ತು ಹೋಗಿವೆ. ಸ್ವೀಡನ್‌ನಿಂದ

Digitalized by e-Sahithya Documentation Forum
Sponsored by Sarayu Foundation Trust

ಬಂದ ಓರ್ವ ಮಹಿಳೆ ಕ್ರೈಸ್ತರ ಬೈಬಲ್‌ದಲ್ಲಿ ಪ್ರೊಫೆಸಿ ಇರುವುದಾಗಿಯೂ, ನಿಮ್ಮಲ್ಲೂ ಅದು ಉಂಟಾ ? ಎಂದು ಕೇಳಿದಾಗ ಕಾಲಜ್ಞಾನ ವಚನ ಪುಸ್ತಕ ತೋರಿಸಿದೆ. ಆಕೆಗೆ ವಿವರಕೊಡುವ ಸಲುವಾಗಿ ಈ ಪುಸ್ತಕದ ಪುಟ ತಿರುವಿ ಹಾಕುತ್ತಿದ್ದೆ. ಆಗ ಒಂದು ಪದ ಓದಿ, ರೋಮಾಂಚನವಾಯಿತು. ಅದುವೇ ''ಬಸವ ಪಂಚಮಿ'' ಎಂಬ ಪದ.

ಹಿಂದೆ ನನಗೆ ಸಿಕ್ಕ ಕಾಲಜ್ಞಾನ ವಚನ ಪುಸ್ತಕಗಳಲ್ಲಿ ಅಕ್ಕಮಹಾದೇವಿಯ ಕಾಲಜ್ಞಾನ ವಚನ ಇರಲಿಲ್ಲ. ಈಗ ಸಿಕ್ಕಿದ್ದರಲ್ಲಿದೆ. ಅದರಲ್ಲಿ ಪುಟ ೧೨೮-೧೨೯ರಲ್ಲಿ ಈ ವಾಕ್ಯಗಳಿವೆ.

ಭೂಮಿ ಬೆಳೆಯಿಂದ ಮಂದ ಆದೀತು
ಮೇಘ ಬಯಲಾಗುವುದು
ಆಗ ಸಿದ್ಧರು ಉದಯಂಗೈದಾರು
ಸಾಗರ ಉಕ್ಕುವುದು
ಆಗ ಬಂದಾರು ಶರಣರು, ಸೋಜಿಗವಾದೀತು
ಪರಿಧಾವಿಯಲ್ಲಿ ತಾಲು ಕುಂಡಾರು (ಕ್ರಿ.ಶ. ೧೯೭೨)
ಶರಣರು ಲೋಕದಿ ಲೋಕಂಗಳ ಕಂಡಾರು
ಈ ಕೃತಿ ಶರಣರ ಬರವು
ವಿರೋಧಿ ಕೃತ (ಕ್ರಿ.ಶ. ೧೯೭೧) ಸಂವತ್ಸರದ ದೀಪಸಂದ ಬಸವನ
ಪಂಚಮಿಯಲ್ಲಿ ಈ ಕಲ್ಯಾಣದ ಶರಣರು
ಪ್ರತ್ಯಕ್ಷದಲ್ಲಿ ಮೈಗಾಣಿಸುವರು **॥ ಪದ್ಯ ೨೧ ॥**

''ಬಸವ ಪಂಚಮಿ'' ಪದವನ್ನು ಬಳಕೆಗೆ ತಂದವಳು ನಾನು ಎಂಬುದನ್ನು ನಮ್ರವಾಗಿ ಶರಣ ಬಂಧುಗಳ ಗಮನಕ್ಕೆ ತರುತ್ತೇನೆ. ಡಾ॥ ಬಾಡಾಲ ರಾಮಯ್ಯನವರ ಸಂಶೋಧನೆಯ ಆಧಾರದ ಮೇಲೆ ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣಶುದ್ಧ ಪಂಚಮಿಯಂದು ಎಂದು ತಿಳಿದ ಮೇಲೆ ಮೊದಲ ಬಾರಿ (೧೫-೮-೧೯೮೦) ಆಚರಿಸುವಾಗ ಪ್ರಜಾವಾಣಿಯಲ್ಲಿ ಒಂದು ಜಾಹಿರಾತು ಕೊಟ್ಟು ಆಚರಣೆಗೆ ತಂದೆವು. ಕಾಲಜ್ಞಾನ ವಚನಗಳ ಆಧಾರದ ಮೇಲೆ ಡಾ॥ ಬಾಡಾಲ ರಾಮಯ್ಯನವರು ನಿರ್ಧರಿಸಿದ್ದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡ ನಾವು ಬಸವ ಲಿಂಗೈಕ್ಯ ದಿನವನ್ನು ಆಚರಣೆಗೆ ತಂದು, ಬಸವ ಪಂಚಮಿ ಎಂದು ಕರೆಯಲಾರಂಭಿಸಿದ್ದರಿಂದ ಕೆಲವು ಮಠಾಧೀಶರು (ಮತ್ಸರ ಬುದ್ಧಿಯಿಂದ) ಇಂದಿಗೂ ಬಸವ ಪಂಚಮಿಯನ್ನು ಮಾನ್ಯ ಮಾಡುತ್ತಿಲ್ಲ. (ಧರ್ಮಪಿತರು ಅವರಿಗೆ ಒಳ್ಳೆಯ ಬುದ್ಧಿ ಕರುಣಿಸಲಿ) ಆದರೆ ನನಗೆ ಆಗುತ್ತಿರುವ ಅಪರಿಮಿತ ಸಂತೋಷಕ್ಕೆ ಕಾರಣವೇನೆಂದರೆ ಅಕ್ಕಮಹಾದೇವಿ ತನ್ನ ಕಾಲಜ್ಞಾನ ವಚನಗಳಲ್ಲಿ ''ದೀಪ ಸಂದ ಬಸವನ ಪಂಚಮಿ'' ಅಂದರೆ ಲಿಂಗೈಕ್ಯರಾದ ಬಸವಣ್ಣನವರ ಲಿಂಗೈಕ್ಯ ದಿನ ಪಂಚಮಿ ಎಂಬ ಭಾವವು ಸ್ಪಷ್ಟಗೊಳ್ಳುತ್ತದೆ. ಹೀಗೆ ತಾನು

ನುಡಿದ ಕಾಲಜ್ಞಾನದಲ್ಲಿ ಅಕ್ಕಮಹಾದೇವಿ ಬಳಸಿರುವ ಬಸವ ಪಂಚಮಿ ಪದವನ್ನು ಬಳಕೆಗೆ ನಾನು ತರಲು ಯಾವುದೋ ಅಂತರ್ ಪ್ರೇರಣೆಯೇ ಕಾರಣ.

೪. ಸಮರ್ಪಣಾ ಗೀತೆ

ಜಾಗತಿಕ ಧರ್ಮಗಳನ್ನೂ ಅಧ್ಯಯನ ಮಾಡುವಾಗ, ಬುದ್ಧನ ನಂತರ ಆತನ ಅನುಯಾಯಿಗಳು ಕ್ರೋಢೀಕರಿಸಿದ

ಬುದ್ಧಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ನನಗೆ ಬಹಳ ಹಿಡಿಸಿದ್ದವು. ಅದೇ ರೀತಿ ಕ್ರೈಸ್ತ ಧರ್ಮದ ವಾಕ್ಯಗಳು

ಜೀಸಸನ ಕಡೆಗೆ ತಿರುಗು
ದೇವರ ಕಡೆಗೆ ತಿರುಗು
ಪವಿತ್ರಾತ್ಮರ ಸಂಘವನ್ನು ಸೇರು

ಬಹಳ ಹಿಡಿಸಿದ್ದವು. ಈ ತ್ರಿತತ್ತ್ವ (Trinity)ಗಳ ಪರಿಕಲ್ಪನೆಯನ್ನು ಅಧ್ಯಯನ ಮಾಡುವಾಗ ಮೂರು ಧರ್ಮಗಳಲ್ಲಿ ಈ ಪರಿಕಲ್ಪನೆ ಒಂದೇ ರೀತಿ ಇರುವುದು ಮನವರಿಕೆಯಾಯಿತು.

	ಬೌದ್ಧ	ಕ್ರೈಸ್ತ	ಲಿಂಗಾಯತ
ಗುರು	ಬುದ್ಧ	ಜೀಸಸ್	ಬಸವಣ್ಣ
ಲಿಂಗ	ಧರ್ಮ	ದೇವರು	ಲಿಂಗದೇವರು
ಜಂಗಮ	ಸಂಘ	ಪವಿತ್ರಾತ್ಮರ ಸಂಘ	ಜಂಗಮ

ಇದು ಮನವರಿಕೆಯಾದಾಗ ಈ ರೀತಿ ಪ್ರಾರ್ಥನೆ ರೂಪಿಸಿದೆ ೧೯೭೫ ರ ಜುಲೈ ೨ ರಂದು ಈ ಪ್ರಾರ್ಥನೆಯನ್ನು ಮೊಟ್ಟ ಮೊದಲ ಬಾರಿಗೆ ಪೂಜ್ಯ ಅಪ್ಪಾಜಿಯವರ ಸಮಾಧಿ ಕ್ರಿಯೆ ಮುಗಿದ ಮೇಲೆ ಸಂಜೆ ೭ಕ್ಕೆ ಮಾಡಿದೆವು. ಸಂಜೆ ೭ ಘಂಟೆಗೆ ಸಂಕ್ಷಿಪ್ತ ಪ್ರಾರ್ಥನೆ ಮಾಡಬೇಕೆಂಬ ದಿವ್ಯ ಆದೇಶ ನನಗೆ ದಿ.೨೯-೬-೯೫ರಂದು ಆಗಿತ್ತು. ಅಂದು ನಾನು ಜೋಡಿಸಿದ ಪ್ರಾರ್ಥನೆ ಹೀಗಿತ್ತು.

ಶ್ರೀ ಗುರು ಬಸವಂಗೆ ಶರಣಾಗಿಹೆ
ಲಿಂಗದೇವನಿಗೆ ಶರಣಾಗಿಹೆ
ಶರಣಗಣಕ್ಕೆ ಶರಣಾಗಿಹೆ
ಗಣ ಪದವಿಯನ್ನು ನಾ ಹೊಂದಿಹೆ

ಅನ್ಯಧರ್ಮಗಳ ಅಧ್ಯಯನದ ಪ್ರೇರಣೆಯಿಂದ ಈ ನಾಲ್ಕು ವಾಕ್ಯಗಳನ್ನು ರಚಿಸಿದೆ.

Digitalized by e-Sahithya Documentation Forum
Sponsored by Sarayu Foundation Trust

ಧರ್ಮಪಿತರ ವಚನಗಳನ್ನು ಪುನಃ ಪುನಃ ಓದುವಾಗ ತಪ್ಪುತಪ್ಪಾಗಿ ಮುದ್ರಣಗೊಂಡಿರುವ ಒಂದು ವಚನ ಸಿಕ್ಕಿತು.

ಶಿವಾಶಿವಾ, ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ
ಸತ್ಯಶುದ್ಧವುಳ್ಳವಂಗೆ ಗುರುವಿಲ್ಲ
ಸತ್ಯಶುದ್ಧವುಳ್ಳವಂಗೆ ಲಿಂಗವಿಲ್ಲ
ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ
ಸತ್ಯಶುದ್ಧವುಳ್ಳವಂಗೆ ಪಾದೋದಕವಿಲ್ಲ
ಸತ್ಯಶುದ್ಧವುಳ್ಳವಂಗೆ ಪ್ರಸಾದವಿಲ್ಲ
ಸತ್ಯಶುದ್ಧವುಳ್ಳವಂಗೆ ಗಣತ್ವವಿಲ್ಲ ಕೇಳಿರೆ

(ಬಸವಣ್ಣನವರ ಷಟ್‌ಸ್ಥಲ ವಚನಗಳು - 934)

ಇದರಿಂದ ಗ್ರಹಿಸಬಹುದಾದುದು ಹೀಗಿದೆ. ಇಷ್ಟಲಿಂಗ ಬಿಟ್ಟು ಅನ್ಯ ದೇವತಾ ಮೂರ್ತಿಗಳನ್ನು ಪೂಜಿಸಬೇಡಿರಿ ಎಂದು ಏಕಲಿಂಗನಿಷ್ಠೆಯನ್ನು ಹೇಳಿದಾಗ ಕೆಲವರು ಹೇಳುವುದುಂಟು, ''ಆ ಮೂರ್ತಿಯೂ ಸತ್ಯಶುದ್ಧವಾಗಿರುತ್ತದೆ. ಅದಕ್ಕೂ ಶುದ್ಧಿ ಮಾಡಿರುತ್ತಾರೆ, ಪ್ರಾಣಪ್ರತಿಷ್ಠಾಪನೆ ಮಾಡಿರುತ್ತಾರೆ'' ಎಂದು. ಇಂಥವರಿಗೆ ಧರ್ಮಪಿತರು ಹೇಳುತ್ತಾರೆ, ''ಅಯ್ಯಾ, ಈ ಸತ್ಯಶುದ್ಧ ಮೂರ್ತಿಗಳನ್ನು ಪೂಜಿಸುವವರಿಗೆ ಗುರು ಇಲ್ಲ, ಅರ್ಥಾತ್ ಗುರುವಿನಿಂದ ಕಡ್ಡಾಯ ದೀಕ್ಷೆ; ಲಿಂಗಧಾರಣೆ ಇಲ್ಲ ; ಸತತವಾಗಿ ಹಿತಚಿಂತನೆ ಮಾಡುವ ಜಂಗಮ ಇಲ್ಲ. ಗುರು ಜಂಗಮರು ಕರುಣಿಸುವ ಪಾದೋದಕ-ಪ್ರಸಾದವಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಗಣತ್ವ (Membership of the Community) ವಿಲ್ಲ. ಏಕೆಂದರೆ ಅವರವರಿಗೆ ಬೇಕಾದ ಮೂರ್ತಿಗಳನ್ನು ಅವರವರು ಪೂಜಿಸುವರು. ತಮತಮಗೆ ಅನುಕೂಲವೆನಿಸಿದಾಗ ಗುಡಿಗಳಿಗೆ ಹೋಗಿ ಬರುವರು. ಸಾಮಾಜಿಕ-ಧಾರ್ಮಿಕ (Social and religious fraternity) ಸೋದರತ್ವವನ್ನು ಈ ಮೂರ್ತಿಗಳು ಕೊಡಲಾರವು.''

ಧರ್ಮಪಿತರ ಈ ವಚನ ಸ್ವಚ್ಛವಾಗಿ, ಸ್ಫುಟವಾಗಿ ಇಲ್ಲದಿದ್ದರೂ ಒಂದು ಪರಮ ಸತ್ಯವನ್ನು ಘೋಷಿಸಿತು. ವ್ಯಕ್ತಿಗೆ (ಧರ್ಮಪಿತರು ಕರುಣಿಸಿದ) ಇಷ್ಟಲಿಂಗವು ಗುರುವಿನಿಂದ ದೊರೆಯುತ್ತದೆ. ಅವನು ಲಿಂಗ ಆಯತನಾಗುತ್ತಾನೆ. ಆಗ ಅವನಿಗೆ ಜಂಗಮನ ಮಾರ್ಗದರ್ಶನ ಸಿಗುತ್ತದೆ. ಜಂಗಮ-ಅಂದರೆ ಲಿಂಗಧಾರಿಗಳ ಸಮಾಜವು ಸಿಗುತ್ತದೆ. ದೀಕ್ಷಾ ಗುರು ಮತ್ತು ಜಂಗಮರು ಆಗಾಗ ಕರುಣಪ್ರಸಾದ ಕೊಡುತ್ತಾರೆ. ಹೀಗಾಗಿ ಅವನಿಗೆ ಒಂದು ಸಮಾಜದ ಲಿಂಗಧಾರಿಗಳ ಸಮಾಜದ ಸದಸ್ಯತ್ವ - ಗಣತ್ವ ಪ್ರಾಪ್ತಿಯಾಗುತ್ತದೆ. ಎಂಥಾ ಭಾಗ್ಯವಿದು ?! ಈ ಗಣಪದವಿ ಬ್ರಹ್ಮಪದವಿ, ವಿಷ್ಣುಪದವಿ, ರುದ್ರಪದವಿಗಿಂತಲೂ ಮಿಗಿಲು !!

ಈ ವಚನದೊಳಗಣ ಭಾವವು ಗೋಚರವಾದಾಗ ನಾನು ಹರ್ಷದಿಂದ

ಕುಣಿದಾಡಿಬಿಟ್ಟೆ. ಅಪ್ಪ ಬಸವಣ್ಣನವರು ನನ್ನ ಸಮರ್ಪಣಾ ಗೀತೆಯನ್ನು ಪೂರ್ಣಗೊಳಿಸಿದರು ಎಂದು ಅನಂತಾನಂತ ಧನ್ಯವಾದ ಅರ್ಪಿಸಿ ಈ ರೀತಿ ಪುನರಚಿಸಿದೆ.

ಶ್ರೀ ಗುರುಬಸವಂಗೆ ಶರಣಾಗಿಹೆ
ಲಿಂಗದೇವನಿಗೆ ಶರಣಾಗಿಹೆ
ಶರಣ ಗಣಕ್ಕೆ ಶರಣಾಗಿಹೆ
ಕರುಣ ಪ್ರಸಾದ ಸ್ವೀಕರಿಸಿಹೆ
ಗಣಪದವಿಯನ್ನು ನಾ ಹೊಂದಿದೆ.

ಪಾದೋದಕ- ಪ್ರಸಾದ ಎರಡನ್ನೂ ಬೇರೆ ಬೇರೆ ವಾಕ್ಯಗಳಾಗಿ ಮಾಡದೆ ಕರುಣ-ಪ್ರಸಾದ ಎರಡನ್ನೂ ಒಳಗೊಂಡ ಕಾರಣ. ಕರುಣ-ಪ್ರಸಾದ ಎಂಬುದನ್ನು ಬಳಸಿ, ಪಂಚ ಸೂತ್ರಗಳನ್ನು ಸಿದ್ಧಪಡಿಸಿದೆ. ನನ್ನ ಈ ರಚನೆಗೆ ಪ್ರಭುದೇವರು ತಮ್ಮೊಂದು ವಚನದ ಮೂಲಕ ಮತ್ತಷ್ಟು ಪುಷ್ಟಿ ನೀಡುವರು.

ಆಯಿತ್ತು ಬಸವಾ ನಿನ್ನಿಂದ ಗುರು ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವನೆಗೆ
ಆಯಿತ್ತು ಬಸವಾ ನಿನ್ನಿಂದ ಜಂಗಮ ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ

ಗುರು-ಲಿಂಗ-ಜಂಗಮ-ಪ್ರಸಾದ ಈ ಚತುರ್ವಿಧ ಸಾರಾಯ ಸಂಪತ್ತಿನಿಂದ ನಾವು ಧನ್ಯರಾಗುತ್ತೇವೆ. ಶರಣ ಸಮಾಜದ ಸದಸ್ಯರಾಗುತ್ತೇವೆ.

ಹೀಗೆ ಅಪ್ಪನವರು ಮೊದಲು ಪ್ರೇರಣೆ ನೀಡುತ್ತಾರೆ. ನಂತರ ಆದಕ್ಕೆ ಬೇಕಾದ ಆಧಾರ-ದಾಖಲೆ ಒದಗಿಸುತ್ತಾರೆ. ನಾನು ಬಹಿರಂಗಿಕ ಚಟುವಟಿಕೆ ಕಡಿಮೆ ಮಾಡಿ ನಿರಂತರವಾದ ಚಿಂತನೆಯಲ್ಲಿದ್ದರೆ ಪುಂಖಾನುಪುಂಖವಾಗಿ ವಿಚಾರಗಳನ್ನು ಕರುಣಿಸುತ್ತಿರುತ್ತಾರೆ. ಅದಕ್ಕಾಗಿ ನನಗೆ ಅಪಾರ ಕೃತಜ್ಞತೆ ತುಂಬಿದೆ.

ರಾಷ್ಟ್ರೀಯ ಬಸವ ದಳಗಳು ಕಲ್ಯಾಣ ಕಿರಣ ಓದಲೇ ಬೇಕು

ಕಲ್ಯಾಣ ಕಿರಣವು ಸಮಾಜ ಸಂಘಟನೆಗೆ ಪರಿಣಾಮಕಾರಿ ಸಾಧನ ಆದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಕಲ್ಯಾಣ ಕಿರಣ ತರಿಸಬೇಕಲ್ಲದೆ ಅದರ ಮೂಲಕ ನೀಡುವ ಸೂಚನೆಗಳನ್ನು ಪಾಲಿಸಬೇಕು. ಕಲ್ಯಾಣ ಕಿರಣ ಬರುತ್ತಲೇ ಅದನ್ನು ಪ್ರಾರ್ಥನಾ ನಂತರ ಸಾಮೂಹಿಕವಾಗಿ ಓದಬೇಕು.

Digitalized by e-Sahithya Documentation Forum
Sponsored by Sarayu Foundation Trust

ಅಕ್ಟೋಬರ್ - ನವೆಂಬರ್ ತಿಂಗಳಿನಲ್ಲಿ ಕಾಣಿಕೆ ಕೊಟ್ಟ ಸದ್ಭಕ್ತರು

ಕಟ್ಟಡ ನಿಧಿ

ಶರಣರಾದ

ಇಂದಿರಮ್ಮ ಮತ್ತು ಎನ್. ಎಸ್. ವಿರುಪಾಕ್ಷಪ್ಪ, ಕೋಲಾರ	೫೦೦೧-೦೦
ಜಿ. ಸಿ. ವೀರಶೇಖರಪ್ಪ, ಮಧುಗಿರಿ	೫೦೦೧-೦೦

ಶರಣಮೇಳದ ದಾಸೋಹಕ್ಕೆ

ಸಿ. ಬಿ. ಬೇವನೂರು	೧೩,೦೦೦-೦೦
ಮ. ಚ. ಗುರುಸ್ಥಲಮಠ, ಧಾರವಾಡ	೫೦೦೦-೦೦
ಪಿ. ನಂಜಮ್ಮ, ಮಾಲೂರು	೫೦೦೦-೦೦
ಆರ್. ಮಹಾಬಳೇಶ್ವರ, ಗುಡಿಯಾತ್ತಂ	೫೦೦೦-೦೦
ಕೃಷ್ಣಪ್ಪ ಮುಸಳೆ, ಗಡಹಿಂಗ್ಲಾಜ್.	೫೦೦೦-೦೦

ಬಸವ ಧರ್ಮಪೀಠದ ದಾಸೋಹನಿಧಿಗೆ ೧೧೧೧-೦೦ ರೂ ಕೊಟ್ಟವರು

ಬಿ. ವಿ. ಚನ್ನವೀರದೇವರು, ಬೆಳ್ಳಾವಿ.
ಪಿ. ಎನ್. ಅನ್ನಪೂರ್ಣ ಮತ್ತು ಬಿ. ರಾಜಶೇಖರಯ್ಯ, ಕೋಲಾರ್
ರುಕ್ಮಿಣಿಯಮ್ಮ ಮತ್ತು ಜಿ. ನಾಗರಾಜ, ಕೋಲಾರ
ಕವಿತಾ ವೈಜನಾಥ ಬಿ. ಪಾಟೀಲ, ಕೋಲಾರ
ಹೆಚ್. ಎಸ್. ನಾಗಪ್ಪ ಬಿ. ಪಾಟೀಲ, ಕೋಲಾರ
ನಾಗರತ್ನಮ್ಮ ಮತ್ತು ಟಿ. ಎನ್. ಮಹಾದೇವ, ಕೋಲಾರ
ಕಾಶಿ ವಿಶ್ವನಾಥ, ಕೋಲಾರ
ಬಿ. ಜಿ. ಬಸಮ್ಮ, ಬಂಗಾರಪೇಟೆ
ಸಿ. ರಾಜಶೇಖರ್, ವಕ್ಕಲೇರಿ
ಬಿ. ಶಿವಮ್ಮ ಮತ್ತು ಜಲಕಂಠಯ್ಯ, ಕೋಲಾರ
ಜಿ. ಪಿ. ಮುನಿಸ್ವಾಮಿ ಮತ್ತು ಕುಟುಂಬ, ಕೋಲಾರ
ಬಿಸಪ್ಪ ಗೌಡ, ವಕೀಲರು, ಕೋಲಾರ
ನಾರಾಯಣ ಸ್ವಾಮಿ ಮತ್ತು ಕುಟುಂಬ, ಕೋಲಾರ
ಡಾ|| ಪಿ. ರತ್ನಮ್ಮ ಮತ್ತು ಕುಟುಂಬ, ಕೋಲಾರ
ವಿಜಯಲಕ್ಷ್ಮಿ ಮತ್ತು ಆರ್ ವೆಂಕಟೇಶ್, ಕೋಲಾರ
ಎಸ್. ಉಮಾದೇವಿ, ಕೋಲಾರ
ಲಕ್ಷ್ಮೀದೇವಮ್ಮ ಮತ್ತು ರಾಮಾಂಜನೇಯ, ಕೋಲಾರ
ಹೆಚ್. ಎಂ. ವೀರಸಂಗಯ್ಯ, ಕೋಲಾರ

ಸಿ. ಎಸ್. ಬಿಂದು ಸುರೇಂದ್ರನಾಥ, ಕೋಲಾರ
ಕೆ. ಸುಶೀಲಮ್ಮ ಮತ್ತು ಕೆ. ಚನ್ನರಾಯಪ್ಪ, ಕೋಲಾರ
ಅಕ್ಕಮ್ಮ ಮತ್ತು ಮುನಿವೆಂಕಟಸ್ವಾಮಿ, ಕೋಲಾರ
ಸರಸ್ವತಿ ಬಾಯಿ ಮತ್ತು ಮುನಿಸಿಂಗ್, ಕೋಲಾರ
ರತ್ನಮ್ಮ ಮತ್ತು ಕೆ. ವೆಂಕಟೇಶಪ್ಪ, ಕೋಲಾರ
ರತ್ನಮ್ಮ ಕೆ. ವೆಂಕಟಮುನಿರೆಡ್ಡಿ, ಕೋಲಾರ
ತೊಳಸಮ್ಮ ಮತ್ತು ಎಸ್. ಕೃಷ್ಣಪ್ಪ, ಕೋಲಾರ
ಅಮರಾವತಮ್ಮ ಮತ್ತು ಕೆ. ವಿ. ವೆಂಕಟೇಶಪ್ಪ, ಕೋಲಾರ
ಶೈಲಜಾ ಬಿ. ಸದಾಶಿವಯ್ಯ, ಕೋಲಾರ
ವನಜಾಕ್ಷಿ ಮತ್ತು ಜಿ. ಆನಂದ್, ಕೋಲಾರ
ಸರೋಜಮ್ಮ ಮತ್ತು ವಿ. ಶಿವಣ್ಣ, ಕೋಲಾರ
ರಾಧಮ್ಮ ಮತ್ತು ಪಿ. ವೆಂಕಟೇಶಪ್ಪ, ಕೋಲಾರ
ಪದ್ಮಾವತಿ ಮತ್ತು ಎಂ. ವೆಂಕಟೇಶಪ್ಪ, ಕೋಲಾರ
ಎಸ್. ನಾರಾಯಣಮ್ಮ ಮರಿಯಪ್ಪ, ಕೋಲಾರ
ರುಕ್ಮಿಣಿಯಮ್ಮ ಮತ್ತು ವಿ. ನಾರಾಯಣಪ್ಪ, ಕೋಲಾರ
ವೆಂಕಟಮ್ಮ ಮತ್ತು ಎಸ್. ವೀರೇಗೌಡ, ಕೋಲಾರ
ಕೋನಮ್ಮ ಮತ್ತು ಕೃಷ್ಣಪ್ಪ, ಕೋಲಾರ
ಎಸ್. ಬೈಚಪ್ಪ - ನಾಗಪ್ಪ, ಕೋಲಾರ
ಸರಸಮ್ಮ ಮತ್ತು ಮುನಿಯಪ್ಪ, ಕೋಲಾರ
ಬಿ. ರಾಜಶೇಖರಯ್ಯ, ಕೋಲಾರ
ರತ್ನಮ್ಮ ಮತ್ತು ಶ್ರೀನಿವಾಸಪ್ಪ, ಕೋಲಾರ
ಕೆ. ಎಂ. ರಾಮಯ್ಯ, ಕೋಲಾರ
ಎಂ. ವೆಂಕಟೇಶ್, ಕೋಲಾರ
ಲೀಲಾವತಿ ಎಸ್. ಕೆಂಪರಾಜ, ಕೋಲಾರ
ನಂಜುಂಡರೆಡ್ಡಿ, ಕೋಲಾರ
ಆರ್. ರುದ್ರಮುನಿಯಪ್ಪ, ಚೊಕ್ಕಂಡಹಳ್ಳಿ
ಸಿ. ಎಲ್. ನಾಗರಾಜ್, ಚೊಕ್ಕಂಡಹಳ್ಳಿ
ಕೆ. ಆಂಜನಪ್ಪ, ಅಬ್ಬೇನಹಳ್ಳಿ
ಡಾ|| ರಾಜಶೇಖರ್, ಲಕ್ಕೂರು
ಸಂತೋಷ್, ಹೊಸೂರು
ಷಣ್ಮುಗ ಸುಧಾರಾಮ್, ಮೀಡೋಗರ ಹಳ್ಳಿ
ಕುಮಾರಿ ಲಿಖಿತಾ ಎಸ್. ಶಿವರುದ್ರಯ್ಯ

Digitalized by e-Sahithya Documentation Forum
Sponsored by Sarayu Foundation Trust

ಕೆ. ರಾಹುಲ್ ಗೌಡ ಮತ್ತು ಕೆ. ರಾಜೇಶ್‌ಗೌಡ
ಶಾಂತಮ್ಮ ಮತ್ತು ಮುನೇಗೌಡ, ಛತ್ರ ಕೋಡಿಹಳ್ಳಿ
ಜಿ. ಚನ್ನವೀರಯ್ಯ, ಗಂಜಲಗುಂಟೆ
ಜಿ. ಸಿ. ವೀರಶೇಖರಪ್ಪ, ಮಧುಗಿರಿ
ಬಾಣೂರು ಹಿರಣ್ಣಯ್ಯ, ಶಿವಮೊಗ್ಗ
ಕೆ. ಹನುಮಂತರಾಯಪ್ಪ, ಪಾವಗಡ
ಬಿ. ಸಿದ್ಧನಂಜಪ್ಪ, ಬ್ಯಾಡಗೆರೆ
ಕಂಬದೂರಪ್ಪ, ಬ್ಯಾಡಗೆರೆ
ಬಿ. ಚಂದ್ರಣ್ಣ, ಟಿ. ಎನ್. ಕೋಟೆ
ಕಟ್ಟೆ ರುದ್ರಣ್ಣ, ಟಿ. ಎನ್. ಕೋಟೆ
ಮಂಡೂರಪ್ಪನವರ ಬಸಣ್ಣ, ಟಿ. ಎನ್. ಕೋಟೆ
ಗಂಗಮ್ಮ ಎ. ಜಿ. ಗುರುಶಾಂತಪ್ಪ, ಟಿ. ಎನ್. ಕೋಟೆ
ಲೋಕಾನಾಥ ಪಟೇಲ್, ಅಡವನ ಹಳ್ಳಿ

ಪೂಜಾನಿಧಿಗೆ ಮತ್ತು ಕಾಣಿಕೆಯಾಗಿ ೫೦೧ ರೂ ಕೊಟ್ಟ ಶರಣರು

ಸುರೇಶ್ ಮರಿಯಪ್ಪ, ಗಂಗಸಂದ್ರ
ಎನ್. ರೇವಣ್ಣಸಿದ್ಧಪ್ಪ, ಗಾಣಿಗರ ಪಾಳ್ಯ
ರಾಮಸ್ವಾಮಿ ಎಲ್ ಬಸವರಾಜು, ಗಾಣಿಗರ ಪಾಳ್ಯ
ಸರಸ್ವತಮ್ಮ ಹೆಚ್. ಬಿ. ನಾರಾಯಣಸ್ವಾಮಿ, ಡಿ. ಕೆ. ಹಳ್ಳಿ
ಪದ್ಮಜ ಟಿ. ರಂಗಪ್ಪ, ಡಿ. ಕೆ. ಹಳ್ಳಿ
ಶೋಭಾ ಎಂ. ಮಹಾದೇವ ಗೊರನಾಳ, ಡಿ. ಕೆ. ಹಳ್ಳಿ
ಎಂ. ಎ. ಹುಸೇನ್, ಕೋಲಾರ
ಕೆ. ಸಿ. ವೀರಭದ್ರಯ್ಯ, ಕೆಸರನಹಳ್ಳಿ
ಮಹಾನಂದ ಗಜೇಂದ್ರಕುಮಾರ್
ಯಶೋದ ಚನ್ನವೀರಪ್ಪ, ಕೆ. ಜಿ. ಎಫ್
ಕುಮಾರಿ ಯಶಸ್ವಿನಿ ಅಮರನಾರಾಯಣ, ಕೋಲಾರ
ಎಂ. ಸುಬ್ರಮಣಿ, ಬಂಗಾರಪೇಟೆ
ಆರ್. ಚಂದ್ರಶೇಖರಯ್ಯ, ಎಸ್. ಜಿ. ಕೋಟೆ
ಹೆಚ್. ಬಿ. ತೋಂಟೇಶ, ಬಂಗಾರಪೇಟೆ
ಬಿ. ವಿಜಯಕುಮಾರ್, ಎಸ್. ಜಿ. ಕೋಟೆ
ದಾಮೋದರ ಪುಂಜ, ಡಿ. ಕೆ. ಹಳ್ಳಿ
ಶಂಕರಪ್ಪ, ಎಸ್. ಜಿ. ಕೋಟೆ

ಬಸವರಾಜ ರೂಗಿ, ಡಿ. ಕೆ. ಹಳ್ಳಿ
ಮಹಾಂತಪ್ಪ ಬಸವಾಪಟ್ಟಣ, ಡಿ. ಕೆ. ಹಳ್ಳಿ
ನಾರಾಯಣ ಸ್ವಾಮಿ, ಡಿ. ಕೆ. ಹಳ್ಳಿ
ರೇಣುಕಾ ಉಮಾಶಂಕರ್, ಕೋಲಾರ
ಎಸ್. ಬಸವರಾಜು, ಶ್ರೀನಿವಾಸಪುರ
ಹೆಚ್. ಎಸ್. ನಾಗಪ್ಪ, ಕೋಲಾರ
ನಾಗರತ್ನಮ್ಮ ಮಹಾದೇವ
ಟಿ. ಚನ್ನಪುಟ್ಟಪ್ಪ, ಮಾಲೂರು
ಶಿವಕುಮಾರ್ ಉಮರಾಣಿ, ಕೋಲಾರ
ಸಿ. ಎನ್. ರಾಯಪ್ಪ, ಚೋಳಘಟ್ಟ
ಜಿ. ಎಂ. ಕಿತ್ತೂರ್, ಕೋಲಾರ
ಹೆಚ್. ಬಿ. ಕೆಂಪಣ್ಣ
ಎಂ. ಜಿ. ವಿಠಲಾಚಾರ್, ಕೋಲಾರ
ಟಿ. ಡಿ. ಚನ್ನಬಸಪ್ಪ, ತಾವರೇಕೆರೆ
ಗೀತಾ ಕೆ. ಕೃಷ್ಣಾ, ಕೋಲಾರ
ಪದ್ಮಾಮಣಿ ವೆಂಕಟೇಶ್ ಅಯ್ಯರ್, ಕೋಲಾರ
ಹೆಚ್. ಎಸ್. ಮೀನಾಕ್ಷಿ ಎಂ. ಶ್ರೀರಾಮ್, ಕೋಲಾರ
ಎನ್. ಸಿದ್ಧಪ್ಪ, ಬೊಮ್ಮೇನಹಳ್ಳಿ
ಸುಶೀಲಮ್ಮ ಸಿ. ಎಂ. ರಾಮಯ್ಯ, ಕೋಲಾರ
ಸುಮಾ ಕೆ. ಎಸ್. ಸೋಮಶೇಖರ್, ಕೋಲಾರ
ಜಯಮ್ಮ ಸಿ. ನಾರಾಯಣಪ್ಪ, ಕೋಲಾರ
ನೇತ್ರಾವತಿ ವೆಂಕಟಶಿವಾರೆಡ್ಡಿ, ಕೋಲಾರ
ಕಲ್ಪನಾ ಬಿ. ದೇವರಾಜು, ಕೆ. ಆರ್. ಪೇಟೆ
ಗಾಯಿತ್ರಿದೇವಿ ಪಿ. ಎಂ. ವೆಂಕಟಪತಿ, ಕೋಲಾರ
ಲಕ್ಷ್ಮಮ್ಮ ಲಕ್ಷ್ಮೀನಾರಾಯಣಪ್ಪ, ಕೋಲಾರ
ರತ್ನಮ್ಮ ಎನ್. ಶಂಕರಯ್ಯಗೌಡ, ಕೋಲಾರ
ಲಕ್ಷ್ಮಮ್ಮ ಶ್ರೀನಿವಾಸಗೌಡ, ಕೋಲಾರ
ಬಸಪ್ಪ, ಕೋಲಾರ
ಶಿವಮ್ಮ ಕಂಬಳಿಸ್ವಾಮಿ ಮಠ, ಕೋಲಾರ
ಬಿ. ಎನ್. ಜಯಲಕ್ಷ್ಮೀ ಮುನಿಕೃಷ್ಣಪ್ಪ, ಕೋಲಾರ
ಲಕ್ಷ್ಮಮ್ಮ ಕುರ್ಕಿ ವೆಂಕಟರಾಮಣ್ಣ, ಕೋಲಾರ
ಬಿ. ಪಿ. ಸತ್ಯನಾರಾಯಣಮೂರ್ತಿ, ಕೋಲಾರ

Digitalized by e-Sahithya Documentation Forum
Sponsored by Sarayu Foundation Trust

ಸುಮಿತ್ರಮ್ಮ ಬಿ. ಶ್ರೀನಿವಾಸ, ಮುದುವತ್ತಿ
ಕೆ. ಎಸ್. ಶೋಭಾ ಸುಂದರಪ್ಪ, ಮುದುವತ್ತಿ
ಜಯಮ್ಮ ಡಿ. ಎಸ್. ಮುನಿಯಪ್ಪ, ಮುದುವತ್ತಿ
ಕೃಷ್ಣಮ್ಮ ಚಿಕ್ಕವೆಂಕಟಪ್ಪ, ನೆನಗಹಳ್ಳಿ
ಶಾರದಮ್ಮ ಮುನಿವೆಂಕಟಪ್ಪ, ಕೋಲಾರ
ರತ್ನಮ್ಮ ಟಿ. ಶ್ರೀನಿವಾಸ್, ಕಲ್ಲಂದೂರು
ಮಂಜುಳ ಪದ್ಮಾವತಮ್ಮ, ಕೋಲಾರ
ಎಂ. ಗೋಪಾಲಪ್ಪ, ಛತ್ರ ಕೋಡೀಹಳ್ಳಿ
ಸಿ. ಕೆ. ಮುನಿಯಪ್ಪ, ಛತ್ರ ಕೋಡೀಹಳ್ಳಿ
ಸಿ. ಅಶ್ವತ್ಥಪ್ಪ, ಛತ್ರ ಕೋಡೀಹಳ್ಳಿ
ಎ. ಪಿ. ರತ್ನಾ ಮಲ್ಲಿಕಾರ್ಜುನಯ್ಯ, ಪಾವಗಡ
ಜಿ. ಪಿ. ವಿಜಯಪ್ರಕಾಶ್, ಪಾವಗಡ
ಜಿ. ವಿ. ಪ್ರಕಾಶಮೂರ್ತಿ, ಬೆಂಗಳೂರು
ಮಠದ ರುದ್ರಮ್ಮ ನಂಜುಂಡಯ್ಯ, ರಂಗಸಮುದ್ರ
ಕೆ. ಬಿ. ಶ್ರೀಶೈಲ ಪಾರ್ವತಮ್ಮ, ಕ್ಯಾದಿಗುಂಟೆ
ಗೊಂಚಗಾರ್ ಶಿವಮ್ಮ, ಅರಸೀಕೆರೆ
ಶಿವಮೂರ್ತಿ ಗಂಗಾಧರಪ್ಪ, ಅರಸೀಕೆರೆ
ವಿ. ಚಂದ್ರಶೇಖರಯ್ಯ, ಅರಸೀಕೆರೆ
ಆರ್. ಸರ್ವಮಂಗಳಮ್ಮ ರುದ್ರಪ್ಪ, ಬ್ಯಾಡಗೆರೆ
ಹೆಚ್. ಲಿಂಗಣ್ಣ, ದೊಡ್ಡ ಚೆಲ್ಲೂರು
ಮರಿಯಪ್ಪ, ಚಿಕ್ಕಚೆಲ್ಲೂರು
ಸಿ. ಎಂ. ಬಸವರಾಜಪ್ಪ, ಚಿಕ್ಕಚೆಲ್ಲೂರು
ಜಯಶೀಲ ಟಿ. ಎಂ. ಬಸವರಾಜು, ಟಿ.-ಎನ್. ಕೋಟೆ
ಎಸ್. ಟಿ. ಕುಮಾರಸ್ವಾಮಿ, ಸೋಮಲಾಪುರ
ಎಂ. ಬಿ. ವಿಜಯಕುಮಾರ, ಮಾಚೇನಹಳ್ಳಿ
ಬಸಮ್ಮ ಜಿ. ಆರ್. ರಾಜಶೇಖರಯ್ಯ, ಹುಲ್ಲೇಕೆರೆ
ಹೆಚ್. ಎಸ್. ಚಂದ್ರಯ್ಯ, ಹುಲ್ಲೇಕೆರೆ
ಚಿಕ್ಕಬಸಪ್ಪ ಹೆಚ್. ಎಸ್. ಹುಲ್ಲೇಕೆರೆ
ರಂಗೇಗೌಡ ಮಾಸ್ಟರ್, ಲಕ್ಕಸಂದ್ರ
ಜಗದೀಶ್ ವೆಂಕಟರಾಮಯ್ಯ
ಡಾ|| ಎಂ. ಬಸವರಾಜ್, ಉರಿಗ್ಯಾಂ, ತಮಿಳುನಾಡು

- ಮುಂದುವರಿಯುವುದು

ವೀರಶೈವ ಮತ ಆಧುನಿಕ ಮಾನವತಾವಾದಕ್ಕೆ ಸಮನಲ್ಲ

- ಡಾ|| ಪಿ.ವಿ. ನಾರಾಯಣ

ವೀರಶೈವರ ಮತ ಆಧುನಿಕ ಮಾನವತಾವಾದ ಅಥವಾ ಧರ್ಮನಿರಪೇಕ್ಷತೆಗೆ ಸಮಾನಾಂತರವಲ್ಲ ಎಂದು ಖ್ಯಾತ ವಿಮರ್ಶಕ, ಕನ್ನಡ ಪ್ರಾಧ್ಯಾಪಕ ಡಾ. ಪಿ.ವಿ. ನಾರಾಯಣ ಹೇಳಿದರು.

ಮಧ್ಯಕಾಲೀನ ಸಾಹಿತ್ಯದಲ್ಲಿ ವಚನ ಸಾಹಿತ್ಯ ಮತ್ತು ಇತರೆ ವಿಷಯದ ಕುರಿತು ಸಾಮರಸ್ಯ ಸಾಹಿತ್ಯ ಸಮ್ಮೇಳನದಲ್ಲಿ ಶನಿವಾರ ಪ್ರಬಂಧ ಮಂಡಿಸಿದ ಅವರು ವೀರಶೈವರಲ್ಲಿದ್ದ ವಿವಿಧ ಜಾತಿಗಳಲ್ಲಿ ಸಾಮರಸ್ಯ ಇರಲಿಲ್ಲ. ಇವರನ್ನುದ್ದೇಶಿಸಿಯೇ ಶರಣರು ಎಲ್ಲ ಸಮಾನರು. ಮನುಷ್ಯರಲ್ಲಿ ಮೇಲು ಕೀಳಿಲ್ಲ ಎಂದು ಹೇಳಿದ್ದರೇ ವಿನಾ ಇಡೀ ಸಮಗ್ರ ಸಮಾಜವನ್ನುದ್ದೇಶಿಸಿ ಅಲ್ಲ ಎಂದು ಹೇಳಿದರು.

ಹುಟ್ಟಿನಿಂದ ಜಾತಿ ಪದ್ದತಿಯನ್ನು ಗುರುತಿಸುವ ವ್ಯವಸ್ಥೆಯನ್ನು ವಚನಕಾರರು ಧಿಕ್ಕರಿಸಿದರು. ಜಾತಿ ಒಪ್ಪಿಕೊಳ್ಳಲು ವೈಜ್ಞಾನಿಕ ಕಾರಣವಿಲ್ಲ ಎಂದು ಬಸವಣ್ಣ ಹೇಳಿದರು. ವೈದಿಕ ಸಮಾಜದ ವಿರುದ್ಧ ಪರ್ಯಾಯ ಸಮಾಜ ಸ್ಥಾಪನೆಗೆ ಯತ್ನಿಸಿದರು ಎಂದು ನಾರಾಯಣ ಹೇಳಿದರು.

ವಚನಕಾರರ ನೆರಳಿನಲ್ಲಿ ಮುಂದೆ ಬಂದ ಹರಿಹರ, ರಾಘವಾಂಕ ಮೊದಲಾದ ಕವಿಗಳು ಸಾಮರಸ್ಯ ಮೂಡಿಸಲು ಯತ್ನಿಸಿದರು. ಆದರೂ ಶಿವ ಪಾರಮ್ಯವನ್ನು ಒತ್ತಿ ಹೇಳುವ ಏಕದೇವತೋಪಾಸನೆಯನ್ನು ಪ್ರತಿಪಾದಿಸಿದರು.

ಹೆಣ್ಣು ಕೂಡ ಗಂಡಿನಷ್ಟೆ ಆಧ್ಯಾತ್ಮಿಕ ಸಾಧನೆಗೆ ಅರ್ಹಳು ಎಂದು ಪ್ರತಿಪಾದಿಸಿದ ವಚನಕಾರರು, ಹೆಣ್ಣಿನ ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಲಿಲ್ಲ ಎಂದು ಅವರು ಹೇಳಿದರು.

ನಾರಾಯಣರ ಈ ಪ್ರಬಂಧ ಮಂಡನೆಗೆ ಸಭಿಕರಿಂದ ಸ್ವಲ್ಪ ವಿರೋಧ ವ್ಯಕ್ತವಾದಾಗ ಸಾಹಿತ್ಯವನ್ನು ಶ್ರದ್ಧೆಯಿಂದ ನೋಡುವುದಾದರೆ ವಿಮರ್ಶೆಗೆ ಅವಕಾಶವಿಲ್ಲ. ವಿಮರ್ಶೆಗೊಳಪಡಿಸಿದಾಗ ಅದು ವಸ್ತು ನಿಷ್ಠವಾಗಿರಬೇಕು ಎಂದು ಪ್ರತಿಪಾದಿಸಿದರು.

ಚರ್ಚೆಯನ್ನು ಪತ್ರಕರ್ತ ದು.ಗು. ಲಕ್ಷ್ಮಣ ನಡೆಸಿಕೊಟ್ಟರು.

(ಕೃಪೆ : ಹೊಸದಿಗಂತ - ೬/೧೨/೯೯)

Digitalized by e-Sahithya Documentation Forum
Sponsored by Sarayu Foundation Trust

ಶರಣ ದ್ವೇಷಿ

ಡಾ॥ ಪಿ.ವಿ.ನಾರಾಯಣ ಅವರು

ಡಾ॥ ಪಿ.ವಿ.ನಾರಾಯಣರು ಒಂದು ಸಭೆಯಲ್ಲಿ ಮಾತನಾಡುತ್ತ ಅವರ ಅಪ್ರಬುದ್ಧತೆಯನ್ನು, ವಚನ ಸಾಹಿತ್ಯವನ್ನು ಎಷ್ಟೂ ಅರಗಿಸಿಕೊಳ್ಳಲು ಅಸಮರ್ಥರಾಗಿದ್ದಾರೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಂಡಿದ್ದಾರೆ. ಡಾ॥ ಪಿ.ವಿ.ನಾರಾಯಣರು ಮನಸ್ಸಿನಲ್ಲಿ ಧರ್ಮಪಿತ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ಬಗ್ಗೆ ಪೂರ್ವಾಗ್ರಹ ಪೀಡಿತ ದೃಷ್ಟಿಕೋನ ಹೊಂದಿ ಬರೆಯುತ್ತಲೇ ಬಂದಿದ್ದಾರೆ. ಅದನ್ನು ಲಿಂಗಾಯತ ಸಂಘ-ಸಂಸ್ಥೆಗಳು ಗಮನಿಸದೆ. ಅವರಿಗೆ ಮಾನ-ಸನ್ಮಾನ ಮಾಡುತ್ತಲೇ ಇದ್ದವು. ಬೈಸಿಕೊಂಡು ಸಹ ಪುರಸ್ಕರಿಸುತ್ತಿದ್ದುದನ್ನು ಕಂಡು ಒಳಗೊಳಗೇ ಖುಷಿಪಟ್ಟು ಅವರು ಇನ್ನಷ್ಟು ಮತ್ತಷ್ಟು ಅತಿರೇಕ ಮಾಡಿ ಬರೆಯುತ್ತಲೇ ಬಂದರು.

ಶರಣ ನಿಂದೆಯ ಪರಾಕಾಷ್ಠೆ ಮುಟ್ಟಿರುವ ವಚನ - ನಿರ್ವಚನ ಕೃತಿಗೆ ಬಸವ ಸಮಿತಿಯವರು ಬಸವ ಶ್ರೀ ಪ್ರಶಸ್ತಿ ಕೊಡಲು ನಿರ್ಧರಿಸಿ, ಘೋಷಿಸಿದರು. ಆಗ ಕನ್ನಡ - ಪ್ರಭಾದ ಓದುಗರ ಓಲೆಯಲ್ಲಿ ಓರ್ವರು ಬರೆದ ಪತ್ರ ನಮ್ಮ ಗಮನ ಸೆಳೆದು, ಪುರಸ್ಕಾರ ತಡೆ ಹಿಡಿಯಬೇಕೆಂದು ಶ್ರೀ ಬಿ.ಡಿ. ಜತ್ತಿಯವರಿಗೆ ದೂರವಾಣಿ ಮೂಲಕ ತಿಳಿಸಿ, ಪುಸ್ತಕ ತರಿಸಿ ಓದಿ, ವಿಮರ್ಶೆ ಬರೆದು ಅದರಲ್ಲಿದ್ದ ಪ್ರಮಾದಕರ ಅಂಶಗಳನ್ನು ಎತ್ತಿ ತೋರಿಸಿದೆವು. ಬಸವ ಸಮಿತಿ ಪುರಸ್ಕಾರವನ್ನು ತಡೆಹಿಡಿಯಿತು. ಇದರಿಂದ ಪಿ.ವಿ. ನಾರಾಯಣರ ಆಕ್ರೋಶ ಹೆಚ್ಚಾಗಿ ಆ ಆಕ್ರೋಶವನ್ನು ಧರ್ಮಕಾರಣ ಕಾದಂಬರಿಯಲ್ಲಿ ಅಕ್ಕನಾಗಮ್ಮನ ಮೇಲೆ ತೋರಿಸಿ, ತೀರಿಸಿಕೊಂಡರು. ಬೈಸಿಕೊಂಡು ಪುರಸ್ಕರಿಸುತ್ತಿದ್ದ ಲಿಂಗಾಯತರು ಶರಣರ ನಿಂದೆ ಮಾಡುವವರನ್ನು ಪುರಸ್ಕರಿಸಬಾರದು ಎಂಬಷ್ಟು ಮಟ್ಟಿಗೆ ಬುದ್ಧಿವಂತರಾಗದಂತೆ ತೋರುತ್ತದೆ.

ಈಗ ನಾರಾಯಣರ ಇನ್ನೊಂದು ಅವತಾರ ಇದೀಗ ಪ್ರಕಟಗೊಂಡಿದೆ. ಹೊಸ ದಿಗಂತ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಓದಿ "ಇವರು ವೀರಶೈವ ಮತವನ್ನು ಟೀಕಿಸಿದ್ದಾರೆ. ನಮಗೆ ಸಂಬಂಧವಿಲ್ಲದ ವಿಷಯ; ಅದಕ್ಕೇಕೆ ಉತ್ತರಿಸಬೇಕು ?" ಎಂದು ನಾನು ಸುಮ್ಮನಾಗಿದ್ದೆ. ಆದರೆ ಅವರ ಭಾಷಣದಲ್ಲಿ ಶರಣರು, ವಚನ ಸಾಹಿತ್ಯ ಕುರಿತು ಪ್ರಸ್ತಾಪಿಸಿರುವುದರಿಂದ ಇದು ನಮಗೂ ಸಂಬಂಧಿಸಿದ ವಿಷಯವಾದ್ದರಿಂದ ಉತ್ತರಿಸುವ ಪ್ರಯತ್ನ ಮಾಡುತ್ತಿದ್ದೇನೆ.

೧. ನಮ್ಮ ದೇಶದಲ್ಲಿ ಇರುವ ಜಾತಿ ಪದ್ಧತಿ, ಅದರ ಪ್ರತಿಫಲವಾದ ಅಸ್ಪೃಶ್ಯತೆ ಈ ದೇಶಕ್ಕಂಟಿದ ಮಹಾನ್ ಶಾಪ. ಮೊದಮೊದಲು ವೈದಿಕರು ಇದನ್ನು ಸಮರ್ಥಿಸಿಕೊಂಡು ಇದು ಸಮಾಜದ ಹಿತದೃಷ್ಟಿಯಿಂದ ಅಗತ್ಯ ; ಉದ್ಯೋಗಗಳಲ್ಲಿ ಪರಿಣತಿ ಹೊಂದ

ಬೇಕಾದರೆ ವಂಶಪಾರಂಪರಿಕವಾಗಿ ಜಾತಿ ಪದ್ಧತಿಯ ಮೂಲಕ ಬರಬೇಕು ಎಂದು ವಾದಿಸುತ್ತಿದ್ದರು. ಆದರೆ ಈಗೀಗ ಅದು ತಪ್ಪೆಂದು ಒಪ್ಪಿಕೊಳ್ಳುವ ಅನಿವಾರ್ಯ ಹಂತಕ್ಕೆ ಬಂದಿದ್ದಾರೆ.

ಈ ಸಾಮಾಜಿಕ ದೋಷ ಅಥವಾ ಸಮಸ್ಯೆಯ ಪರಿಹಾರಕ್ಕೆ ಅನೇಕರು ಅನೇಕ ಬಗೆಯಲ್ಲಿ ಸಲಹೆ ಕೊಡುತ್ತಿದ್ದಾರೆ. ಇದರಲ್ಲಿ ಒಂದು ಮಾನವತಾವಾದ. ಅಂದರೆ ಓರ್ವ ವ್ಯಕ್ತಿಯನ್ನು ಮಾನವನನ್ನಾಗಿ ಪರಿಗಣಿಸಿ ಎಲ್ಲ ಹಕ್ಕುಗಳನ್ನು ಕೊಡಬೇಕು ಎಂಬುದೇ ಮಾನವತಾವಾದ. ಧರ್ಮಗುರು ಬಸವಣ್ಣನವರು ಮಾನವತಾವಾದದ ತಳಹದಿಯ ಮೇಲೆ ನಿಂತ "ಶರಣವಾದ"ದ ಮೇಲೆ ಸಮಾಜವನ್ನು ಕಟ್ಟಬಯಸಿದರು. ಇದು ಪಿ.ವಿ.ನಾರಾಯಣರಂಥವರ ದೃಷ್ಟಿಯಲ್ಲಿ ತುಂಬಾ ಸಂಕುಚಿತ ಇರಬಹುದು. ಆದರೆ ಇಂಥವರ ಸಲಹೆಗಳು ಯಾವೊಂದು ನಿರ್ದಿಷ್ಟ ಯೋಜನೆ, ಕ್ರಿಯಾತ್ಮಕ ವಿಧಾನಗಳಿಂದ ಕೂಡಿರದೆ ಲೋಕಕ್ಕೆ, ಕಿವಿಗೆ ಇಂಪೆನಿಸುವ ಮಾತುಗಳಾಗಿ ಗಾಳಿಯಲ್ಲಿ ಹಾರಿಹೋಗುತ್ತವೆ. ಉದಾಹರಣೆಗೆ, ದಿವಂಗತ ಶ್ರೀ ಕುವೆಂಪು ಅವರು ಮಾನವತಾವಾದದ ತಳಹದಿಯ ಮೇಲೆ (ವಿಶಿಷ್ಟ) ಧರ್ಮ. ಜಾತಿ, ಮತ, ಪಂಥಗಳನ್ನೆಲ್ಲ ನೂಕಿ "ಓ ನನ್ನ ಚೇತನ ಆಗು ನೀ ಅನಿಕೇತನ" ಎಂದು ಹಾಡಿದರು. ಆದರೆ ಇದು ಪ್ರಯೋಗಶೀಲ ಮಾತಲ್ಲ. ಇಡೀ ಜೀವಮಾನ ಪರ್ಯಂತರ ೧೦ ಜನರನ್ನಾದರೂ ಅನಿಕೇತನರನ್ನಾಗಿ ಮಾಡಲು ಅವರಿಗೆ ಸಾಧ್ಯವಾಯಿತೋ ಇಲ್ಲವೋ ! ಬರಹದಲ್ಲಿ, ಭಾಷಣದಲ್ಲಿ ನಮ್ಮ ದೇಶದಲ್ಲಿ ಎಲ್ಲರೂ ಅನಿಕೇತನರೆ, ವಾಸ್ತವಿಕವಾಗಿಯಲ್ಲ !!

ಒಂದು ಹೆಣ್ಣು ಒಂದು ಗಂಡು ಮಾನವರಾಗಿ ಪ್ರೀತಿಸುತ್ತಾರೆನ್ನಿ ; ಧರ್ಮದ ಅವಲಂಬನೆಯಿಲ್ಲದೆ ಮಾನವರಾಗಿ ಪ್ರೀತಿಸಿ, ಮಾನವರಾಗಿ ಸಂಸಾರ ಮಾಡಿ, ಮಾನವರಾಗಿ ಮಕ್ಕಳನ್ನು ಹೆರುತ್ತಾರೆ. ಆದರೆ ಮಕ್ಕಳು ದೊಡ್ಡವರಾಗಿ ಮದುವೆ ಮುಂತಾದ ಪ್ರಸಂಗ ಎದುರಾದಾಗ ಬಹಳ ಬಿಕ್ಕಟ್ಟು ಎದುರಿಸಬೇಕಾಗಿ ಕಂಗಾಲಾಗುತ್ತಾರೆ. ಕಳೆದ ತಿಂಗಳು ಒಂದು ಮದುವೆ ಮಾಡಿಸಿದೆವು. ಇಬ್ಬರೂ ಸ್ನಾತಕೋತ್ತರ ಪದವಿ ಪಡೆದ ವೈದ್ಯರು. ವರ ಹುಟ್ಟು ಲಿಂಗಾಯತ, ಆಂಧ್ರದವರು, ವಧು ತಮಿಳುನಾಡಿನವರು ಹಿಂದುಳಿದ ವರ್ಗದಿಂದ ಬಂದ ಕುಟುಂಬದವರು. ವರನ ತಂದೆ-ತಾಯಿಗೆ ಬಸವ ಧರ್ಮದ ಸಂಸ್ಕಾರ ಇದ್ದುದರಿಂದ ಪ್ರತಿಭಟಿಸದೆ, ವಿರೋಧಿಸದೆ, ಮಗನ ಮದುವೆಗೆ ಬೆಂಬಲವಿತ್ತರು. ದೀಕ್ಷೆ ಮಾಡಿಸಬೇಕೆಂದು ನಿಯಮ ಹಾಕಿದರು. ಯಾವುದೇ ಧರ್ಮದ ಅವಲಂಬನೆ ಇಲ್ಲದ ವಧು ಮತ್ತು ಅವರ ತಾಯಿ ತಂದೆ ಸಂತೋಷದಿಂದ ಮಗಳಿಗೆ ದೀಕ್ಷೆ ಮಾಡಿಸಲು ಒಪ್ಪಿದರು.

ಸುದೀರ್ಘ ಪ್ರಯಾಣ ಮುಗಿಸಿ ನಾನು ಅಲ್ಲಿಗೆ ಹೋದಾಗ ರಾತ್ರಿ ಹನ್ನೊಂದೂವರೆ ಗಂಟೆ. ತುಂಬಾ ದಣಿವಾಗಿತ್ತು. ಆದರೆ, ವರನ ಚಿಕ್ಕಮ್ಮ ಸೋದರಿ ಮುಂತಾದವರು "ನಾವು ಕೆಲವೊಂದು ಶಾಸ್ತ್ರ (ಅರಿಷಿಣ ಹಚ್ಚುವುದು) ಮಾಡಬೇಕಾಗಿದೆ.

Digitalized by e-Sahithya Documentation Forum
Sponsored by Sarayu Foundation Trust

ದೀಕ್ಷೆ ಆಗಿಬಿಟ್ಟಿದ್ದರೆ ನಮ್ಮ ಧರ್ಮದವರಾಗುತ್ತಿದ್ದರು ಮಾಡಲು ಅನುಕೂಲವಾಗುತ್ತಿತ್ತು.'' ಎಂದರು. ನಾನು ಮರುದಿನ ಬೆಳಿಗ್ಗೆ ದೀಕ್ಷೆ ಮಾಡಬೇಕೆಂದಿದ್ದವಳು ಅವರ ಧರ್ಮನಿಷ್ಠೆ ಮತ್ತು ದೀಕ್ಷೆ ಆದರೆ ತಮ್ಮವರೆಂದು ಒಪ್ಪಿಕೊಳ್ಳಲು ಸಿದ್ಧರಿರುವ ಮನೋವೈಶಾಲ್ಯ ನೋಡಿ ಸಂತೋಷವಾಗಿ, ದಣಿವು ಮರೆತು ದೀಕ್ಷೆ ಮಾಡಿ ಅವರಿಗೆ ಕನ್ನಡ ಬರದ ಕಾರಣ ಇಂಗ್ಲೀಷಿನಲ್ಲಿ ಪ್ರತಿಜ್ಞೆ ಮಾಡಿಸಿದೆ. ಇದೆಲ್ಲ ಮುಗಿದಾಗ ರಾತ್ರಿ ಒಂದು ಗಂಟೆ. ಅಪ್ಪ ಬಸವಣ್ಣನವರ ದೂರದೃಷ್ಟಿ ಪ್ರಯೋಗಶೀಲ ಕಾರ್ಯವಿಧಾನದ ಚಿಂತನೆ ಮಾಡಿ ಕೃತಜ್ಞತೆ ಸಲ್ಲಿಸಿದೆ. ಅವರು ಇಂಥ ಮಾರ್ಗ ಕೊಟ್ಟುದರಿಂದ, ಈಗ ಲಿಂಗಾಯತರು ಅರಿತು ಕೊಳ್ಳುತ್ತಿರುವುದರಿಂದ ಎಷ್ಟು ಸುಲಭವಾಗಿ ದೀಕ್ಷೆ ನೀಡಿ ಯಾವುದೇ ಜಾತಿಯವರನ್ನು ತಮ್ಮೊಳಗೆ ಕರೆದುಕೊಳ್ಳಲು ಸಿದ್ಧರಾಗಿದ್ದಾರಲ್ಲ ಎಂದು ಮುದವೆನಿಸಿತು.

ಧರ್ಮವು ಅನ್ನ, ಅರಿವೆ, ಆಶ್ರಯ, ಶಿಕ್ಷಣ, ಔಷಧಗಳಂತೆ ಮೂಲಭೂತ ಅವಶ್ಯಕತೆಗಳಲ್ಲೊಂದು. ಹೊಟ್ಟೆಗೆ ಹಸಿವೆಯುಂಟು, ದೇಹಕ್ಕೆ ಕಾಮ ಉಂಟು - ಇವಿಷ್ಟೆ ಮಾರ್ಕ್ಸ್‌ವಾದಿಗಳು, ಚಾರ್ವಾಕರು, ಕೆಲವು ಮಾನವತಾ ವಾದಿಗಳು ಪ್ರತಿಪಾದಿಸುವುದು. ಮನುಷ್ಯನಿಗೆ ಇರುವ ಹಸಿವೆಗಳಲ್ಲಿ ಧರ್ಮದ ಹಸಿವೆಯೂ ಅಷ್ಟೇ ಪ್ರಬಲವಾಗಿದೆ. ಅದಕ್ಕೂ ಆಹಾರಬೇಕೆಂದು ಮಾನವ ಆತ್ಮವು ಚಟಪಟಿಸುವುದು. ಅದಕ್ಕಾಗಿಯೇ ದಲಿತರು, ಇಂದು ಅವರಿಗೆ ಸಾಮಾಜಿಕ ಸ್ಥಾನಮಾನ ಸಿಕ್ಕಿದ್ದರೂ, ಆರ್ಥಿಕ ಸವಲತ್ತು ಸಿಗುತ್ತಿದ್ದರೂ ಮತ್ತೂ ಮತಾಂತರಕ್ಕೆ ಹಂಬಲಿಸುತ್ತಿರುವುದು.

ಒಂದು ವಯಸ್ಸಿನಲ್ಲಿ ಹೆಂಡತಿ, ಮಕ್ಕಳು, ಶಾರೀರಿಕ ಸುಖ ಇವುಗಳಲ್ಲಿ ಮನುಷ್ಯನು ತಲ್ಲೀನನಾಗಿ ಸಂತೋಷಪಟ್ಟರೂ ಕಾಲಾನಂತರದಲ್ಲಿ ಅವನು ಅತೃಪ್ತಿಯಿಂದ ಬಳಲುವನು. ಆ ಅತೃಪ್ತಿ ಕೊನೆಗೊಳ್ಳುವುದು ಧರ್ಮದ ಆಸರೆಯಿಂದ ಮಾತ್ರ. ಆದ್ದರಿಂದಲೇ ಧರ್ಮರಹಿತ ಮಾನವತಾವಾದ, ಭೌತಿಕವಾದ ದುರ್ಬಲಗೊಳ್ಳುತ್ತ ಧರ್ಮವು ಬರುಬರುತ್ತ ಬಲಗೊಳ್ಳುತ್ತಿರುವುದು. ವೈದಿಕ ಧರ್ಮ ಆಧಾರಿತ ಸಾಂಪ್ರದಾಯಿಕ ಹಿಂದು ವಿಚಾರಧಾರೆ ಯಾರನ್ನೂ ಹೊರಗಿನಿಂದ ಕರೆದುಕೊಳ್ಳಲು ಅಸಮರ್ಥವಾಗಿ, ತನ್ನ ಒಳಗಿನವರನ್ನೂ ಉಳಿಸಿಕೊಳ್ಳಲಾರದೆ ಹೊಯ್ದಾಡುತ್ತ ಮಾನವತಾವಾದದ ಮೊರೆ ಹೋಗುತ್ತಿದೆ.

ಇದರ ಹಿಂದೆ ಒಂದು ಬಗೆಯ ಧೂರ್ತತ್ವ ಮತ್ತು ವಂಚನೆ ಸಹ ಇದೆ ಎಂದು ನನಗೆ ಅನ್ನಿಸುತ್ತಿದೆ. ಹೇಗೆಂದರೆ, ಶಾಲೆಯ ಬಿಡುವಿನ ವೇಳೆ ಎಂದುಕೊಳ್ಳೋಣ. ಅಲ್ಲಿ ಬೇರೆ ಬೇರೆ ಮಕ್ಕಳು ತಿಂಡಿ ಡಬ್ಬಿ ತಂದುಕೊಂಡು ಬಿಚ್ಚಿ ಉಣ್ಣುತ್ತಿದ್ದಾರೆ. ತಾಯಿ ಊಟ ಕಟ್ಟಿಕೊಟ್ಟಿದ್ದರೆ ಮಕ್ಕಳು ಡಬ್ಬಿ ಬಿಚ್ಚಿ ಉಣ್ಣುತ್ತವೆ. ತಾಯಿ ಕಟ್ಟಿಕೊಟ್ಟರದಿದ್ದರೆ ಉಣ್ಣುವವರನ್ನು ನೋಡಿ ಪಿಳಿ ಪಿಳಿ ಕಣ್ಣು ಬಿಡುತ್ತದೆ. ಆಗ ಮರುಕದಿಂದ ಸ್ನೇಹಿತರು ಕೊಟ್ಟರೆ ತಿನ್ನುತ್ತವೆ. ಇಲ್ಲವೇ ಅಂಗಡಿಯಿಂದ ಕೊಂಡು ತಿನ್ನುತ್ತವೆ.

ಬುದ್ಧ ಎಂಬ ತಾಯಿ ಬೌದ್ಧ ಧರ್ಮ ಸಾಹಿತ್ಯ ಎಂಬ ಬುತ್ತಿ ಕಟ್ಟಿಕೊಟ್ಟಿದ್ದಾನೆ. ಬಸವಣ್ಣ ಎಂಬ ತಾಯಿ ವಚನ ಸಾಹಿತ್ಯ ಎಂಬ ಬುತ್ತಿಯನ್ನೂ, ಏಸುವು ಬೈಬಲ್ ಎಂಬ ಬುತ್ತಿಯನ್ನು, ಮೊಹಮ್ಮದ್ ಕುರಾನ್ ಎಂಬ ಬುತ್ತಿಯನ್ನು ಕಟ್ಟಿಕೊಟ್ಟಿದ್ದಾರೆ. ವೈದಿಕ ಹಿಂದುಗಳಿಗೆ ವಿಶಿಷ್ಟ-ತಾಯಿ ತಂದೆ (ಅಂದರೆ ಧರ್ಮಸ್ಥಾಪಕರು) ಇಲ್ಲ. ಸರಿ ವೇದಗಳು, ಗೀತೆ ಎಂಬ ಬುತ್ತಿಯುಂಟು ; ಆದರೆ ಅವು ದ್ವಿಜ ವರ್ಣದವರಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಉಂಟು ; ಶೂದ್ರರು/ದಲಿತರಿಗೆ ಇಲ್ಲ. ಅಂದಾಗ ಒಂದು, ಅವರು ಧರ್ಮವಿರಹಿತರಾಗಿರಬೇಕು ಇಲ್ಲವೇ ಇತರ ಧರ್ಮಗಳ ಆಶ್ರಯ ಪಡೆಯಬೇಕು.

''ಅವರು ಮತಾಂತರಗೊಳ್ಳುವುದು ಬೇಡ, ಇದ್ದಂತೆಯೇ ಇರಲಿ'' ಎಂಬ ವಾದವನ್ನು ಅನೇಕರು ಮಂಡಿಸುತ್ತಾರೆ. ಇದು ಸಹ ಸರಿಯಾದ ವಾದವಲ್ಲ. ಅಹಿಂದು ಧರ್ಮಗಳಿಗೆ ಮತಾಂತರ ಹೊಂದುವುದರಿಂದ ಕೆಲವೊಂದು ಸಮಸ್ಯೆಗಳಿವೆ ಎಂಬುದನ್ನು ನಾವು ಮಾನ್ಯ ಮಾಡಿದರೂ, ''ಅವರು ಧರ್ಮವಿಲ್ಲದೆ ಇರಲಿ; ಕ್ಷುದ್ರ ದೈವಂಗಳ ಉಪಾಸನೆ ಮಾಡುತ್ತ ಮೂಢಾಚಾರಗಳಲ್ಲಿ ಮುಳುಗಿರಲಿ. ಅಮಾನವೀಯ ಕೊಳಕು ಆಚರಣೆಗಳನ್ನೇ ಸಂಪ್ರದಾಯದ ಹೆಸರಿನಲ್ಲಿ ಮಾಡುತ್ತಲಿರಲಿ'' ಎಂಬುದು ಒಂದು ಕ್ರೌರ್ಯವೆನಿಸುತ್ತದೆ. ಆದ್ದರಿಂದ ಪಿ.ವಿ.ನಾರಾಯಣರು ಹೇಳುವಂತಹ ಮಾನವತಾವಾದವು ಅರ್ಥ ರಹಿತ ಎನ್ನದೇ ಗತ್ಯಂತರವಿಲ್ಲ.

೨. ಬಸವಾದಿ ಪ್ರಮಥರು ಕೊಟ್ಟುದು ವೀರಶೈವವಲ್ಲ ; ಅದು ಸರ್ವಸ್ವತಂತ್ರ ಲಿಂಗಾಯತ ಧರ್ಮ. ಆದ್ದರಿಂದ ಜಾತ್ಯತೀತ ಧೋರಣೆಯ, ಪ್ರಗತಿಪರ ವಿಚಾರಧಾರೆಯ ಲಿಂಗಾಯತ ಧರ್ಮಕ್ಕೆ ವೀರಶೈವ ಎಂದು ಕರೆಯುವ ಪಾಪ ಕರ್ಮವನ್ನು ಮಠಾಧೀಶರು, ಸಾಹಿತಿಗಳು ಕೈಬಿಡಬೇಕು. ಅವರು ವೀರಶೈವವನ್ನೇ ಪ್ರತಿಪಾದಿಸುವುದಿದ್ದರೆ ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಸ್ಪಷ್ಟವಾದ ಗಡಿರೇಖೆ ಗುರುತಿಸಿಕೊಂಡು ವಚನ ಸಾಹಿತ್ಯ ಬಿಟ್ಟು ತಮ್ಮ ಧರ್ಮಶಾಸ್ತ್ರ ಏನಿದೆಯೋ ಅದರ ಆಧಾರದ ಮೇಲೆ ಅವರು ವೀರಶೈವವನ್ನು ಪ್ರತಿಪಾದಿಸಬೇಕು. ತೆಗೆದುಕೊಳ್ಳುವುದು ವಚನ ಸಾಹಿತ್ಯವನ್ನು ಆದರೆ ಶ್ರೇಯಸ್ಸು ಮಾತ್ರ ಶರಣರಿಗೆ ಬೇಡ ಎಂಬ ಕುತಂತ್ರವನ್ನು ಡಾ|| ಚಿದಾನಂದ ಮೂರ್ತಿ, ಪಿ. ವಿ. ನಾರಾಯಣ ರಂಥವರು ಕೈಬಿಡಬೇಕು.

೩. ನಾರಾಯಣರ ಅಂತರಂಗದ ವಿಷ ಹೇಗೆ ಕಾರಲ್ಪಟ್ಟಿದೆ ಎಂಬುದಕ್ಕೆ ಈ ಮಾತುಗಳನ್ನು ನೋಡಿರಿ. ''ವೀರಶೈವರಲ್ಲಿದ್ದ ವಿವಿಧ ಜಾತಿಗಳಲ್ಲಿ ಸಾಮರಸ್ಯ ಇರಲಿಲ್ಲ. ಅವರನ್ನುದ್ದೇಶಿಸಿಯೇ ಶರಣರು ಎಲ್ಲ ಸಮಾನರು ಮನುಷ್ಯರಲ್ಲಿ ಮೇಲು ಕೀಳಿಲ್ಲ ಎಂದು ಹೇಳಿದರೇ ವಿನಾ ಇಡೀ ಸಮಗ್ರ ಸಮಾಜವನ್ನುದ್ದೇಶಿಸಿ ಅಲ್ಲ.''

ಡಾ|| ಚಿದಾನಂದ ಮೂರ್ತಿ, ಪಿ.ವಿ. ನಾರಾಯಣರಂಥವರು ಎಷ್ಟು ವರ್ಷ ವಚನ ಸಾಹಿತ್ಯ ಓದಿದರೂ ಅದರ ಸಾಮಾನ್ಯ ಜ್ಞಾನವು ಅವರ ತಲೆಯೊಳಗೆ ಇಳಿದಿಲ್ಲ ಎಂದು ಒಮ್ಮೊಮ್ಮೆ ಅಚ್ಚರಿಯಾಗುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

ಕರ್ನಾಟಕದಲ್ಲಿ ಬಸವಣ್ಣನವರು ಲಿಂಗಾಯತ ಧರ್ಮವನ್ನು ಕೊಡುವ ಕಾಲಕ್ಕೆ ವೀರಶೈವ ಇರಲೇ ಇಲ್ಲ. ವೀರಶೈವದ ಲೋಪ-ದೋಷ ಯಾವುದೇ ರೀತಿ ಲಿಂಗಾಯತಕ್ಕೆ ಸಂಬಂಧಿಸಿರಲಿಲ್ಲ. ಹುಟ್ಟು ಬ್ರಾಹ್ಮಣರಾದ ಬಸವಣ್ಣನವರು ಇಷ್ಟಲಿಂಗವನ್ನು ರೂಪಿಸಿದರು, ಧರಿಸಿ ತಾವೇ ಮೊಟ್ಟ ಮೊದಲ ಲಿಂಗಾಯತರಾದರು. ನಂತರ ಅಕ್ಕನಾಗಲಾಂಬಿಕೆಗೆ ಕೊಟ್ಟರು, ನಂತರ ಅನೇಕರು ಪಡೆದರು. ಹಾಗೆ ಲಿಂಗಾಯತರಾದವರಲ್ಲಿ ಬ್ರಾಹ್ಮಣನಿಂದ ಭಂಗಿಯವರೆಗೆ ಎಲ್ಲ ಜಾತಿಗಳವರು, ಎಲ್ಲ ಉದ್ಯೋಗಗಳವರೂ ಇದ್ದರು. ದೀಕ್ಷಿತರಾಗಿ ಬಂದವರಲ್ಲಿ ಜಾತಿ, ಕುಲ, ಅಂತಸ್ತು, ಉದ್ಯೋಗ ಭೇದ ಮಾಡಬಾರದೆಂದು ಬಸವಣ್ಣನವರು, ಅವರ ಸಮಕಾಲೀನರು ಬೋಧಿಸಿದರು. ಅಂದಾಗ ಅವರ ಉದ್ದೇಶ, ಉಪದೇಶ ಮಾನವ ಜನಾಂಗವನ್ನು ಕುರಿತು ಬೋಧಿಸಿದ್ದಾಗಿತ್ತೆ ವಿನಾ ಕೇವಲ ವೀರಶೈವರ ಉಪಜಾತಿಗಳನ್ನಲ್ಲ.

* **ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ**
* **ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ**
* **ಅರಿದೊಡೆ ಶರಣ, ಮರೆದೊಡೆ ಮಾನವ.**

ಇಂಥ ವಚನಗಳು ಇಡೀ ಮಾನವ ಕುಲಕ್ಕೆ ಸಂಬಂಧಿಸಿದವಲ್ಲವೆ ?

೪. ಹೆಣ್ಣು ಕೂಡ ಗಂಡಿನಷ್ಟೆ ಆಧ್ಯಾತ್ಮಿಕ ಸಾಧನೆಗೆ ಅರ್ಹಳು ಎಂದು ಪ್ರತಿಪಾದಿಸಿದ ವಚನಕಾರರು, ಹೆಣ್ಣಿನ ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಲಿಲ್ಲ !! ಎಂದು ನಾರಾಯಣ ಅವರು ಹೇಳಿದ್ದಾರೆ.

ನಾರಾಯಣರಿಗೆ ವಚನ ಸಾಹಿತ್ಯವನ್ನು ಎಷ್ಟು ಅಪಾರ್ಥ ಮಾಡಿ ಕೆಳಗಿಳಿಸಬೇಕೋ ಅಷ್ಟಕ್ಕಾಗಿ ಸರ್ವಸಾಹಸ ಮಾಡಿದ್ದಾರೆ. ಇಡೀ ಜಗತ್ತಿನಲ್ಲಿ ಸಂಪೂರ್ಣ ಸಮಾನತೆಯನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಕೊಟ್ಟ ಧರ್ಮ ಬಸವ ಧರ್ಮ ಅರ್ಥಾತ್ ಲಿಂಗಾಯತ ಧರ್ಮ.

ಹೇಗೆಂದರೆ,

೧. ವೈದಿಕ ಧರ್ಮ ಯಾವುದೇ ರೀತಿಯ ಗೌರವ ಸ್ಥಾನಕೊಡದೆ ಸ್ತ್ರೀಯನ್ನು ಶೂದ್ರಳನ್ನಾಗಿ ಕಂಡಿತು. ಆಕೆಗೆ ಧರ್ಮ ಸಂಸ್ಕಾರ ಸಹ ಕೊಡಲಿಲ್ಲ.

೨. ಇಸ್ಲಾಂ ಧಾರ್ಮಿಕ ಸಂಸ್ಕಾರ ಕೊಟ್ಟರೂ ಆಕೆ ಸಾರ್ವಜನಿಕವಾಗಿ ನಮಾಜ್‌ಗಾಗಲೀ, ಈದ್‌ಗಾ ಪ್ರಾರ್ಥನೆಗಾಗಲೀ ಬರುವುದಿಲ್ಲ. ಜೊತೆಗೆ ಬುರ್ಖಾ, ಬಹುಪತ್ನಿತ್ವಕ್ಕೆ ಅವಕಾಶ ಸ್ತ್ರೀಯನ್ನು ಸಂಕಷ್ಟಕ್ಕೆ ದುಡಿವೆ. (ಧಾರ್ಮಿಕ ನಂಬಿಕೆಗಳಲ್ಲಿ ಮುಳುಗಿ ಬ್ರೇನ್ ವಾಷ್ ಮಾಡಿಕೊಂಡ ವೈದಿಕ ಮಹಿಳೆಯರು ಮಹಿಳೆಗೆ ನಿಸರ್ಗವು ಕೆಲವು ದೋಷಗಳನ್ನು ದೌರ್ಬಲ್ಯಗಳನ್ನು ನೀಡಿದೆ. ಅದಕ್ಕಾಗಿ ಸ್ಮೃತಿಕಾರರು ಸ್ತ್ರೀಯರಿಗೆ ಕೆಲವು ಹಕ್ಕುಕೊಟ್ಟಿಲ್ಲ ಎಂದು ವಾದಿಸುವಂತೆ ಕೆಲವು ಮುಸ್ಲೀಮ್ ಮಹಿಳೆಯರು ನಮ್ಮ ರಕ್ಷಣೆಗಾಗಿಯೇ ಬುರ್ಖಾ ಇದೆ ಎಂದು ವಾದಿಸುತ್ತಾರೆ.)

೩. ಕ್ರೈಸ್ತ ಧರ್ಮದಲ್ಲಿ ಮಹಿಳೆಗೆ ಬ್ಯಾಪ್ಟಿಸಮ್ ಉಂಟು ; ಚರ್ಚ್‌ಗೆ ಬರಲು ಪ್ರಾರ್ಥಿಸಲು ಅವಕಾಶ ಉಂಟು. ಆದರೆ ಗುರುವಾಗಿ ಇನ್ನಿತರರಿಗೆ ದೀಕ್ಷೆ ಮಾಡಲು ಅವಕಾಶ ನೀಡಲಾಗಿಲ್ಲ.

೪. ಲಿಂಗಾಯತ ಧರ್ಮದಲ್ಲಿ ಮಹಿಳೆಗೆ ದೀಕ್ಷೆ ಉಂಟು. ಧಾರ್ಮಿಕ -ಸಾಮಾಜಿಕ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸವಲತ್ತು ಉಂಟು. ಮಾತ್ರವಲ್ಲ ಗುರುವಾಗಿ ಇನ್ನಿತರರಿಗೂ ದೀಕ್ಷೆ ಮಾಡುವ ಅವಕಾಶವುಂಟು. ಯಾರಾದರೂ ಕೇಳಬಹುದು, ಸುಧಾರಣಾವಾದಿಗಳಾಗಿ ನೀವು ಮಹಿಳೆಯರ ಗುರುತ್ವ ಪ್ರತಿಪಾದಿಸುತ್ತಿದ್ದೀರಿ. ಆದಿ ಶರಣರ ಕಾಲದಲ್ಲಿತ್ತೆ ? ಎಂದು. ವೀರವಿರಾಗಿಣಿ ಅಕ್ಕಮಹಾದೇವಿಯನ್ನು ಆಚಾರ್ಯಪುರುಷರ ಸಾಲಿನಲ್ಲಿ ಶರಣರು ಗೌರವಿಸಿದರು. ಅಕ್ಕನಾಗಲಾಂಬಿಕೆ, ಗುಡ್ಡಾಪುರ ದಾನಮ್ಮ ಮುಂತಾದವರು ಸ್ವತಃ ದೀಕ್ಷೆ ನೀಡುತ್ತಿದ್ದರು.

ಶರಣರು ಸ್ತ್ರೀಗೆ ಸಾಮಾಜಿಕ ಸ್ಥಾನ ಮಾನ ನೀಡಲಿಲ್ಲವೆ ?

ಅನುಭವ ಮಂಟಪದಲ್ಲಿ ಅಲ್ಲಮಪ್ರಭು, ಚನ್ನ ಬಸವಣ್ಣ, ಸಿದ್ಧರಾಮರಂಥ ದಾರ್ಶನಿಕ ದಿಗ್ಗಜಗಳ ಎದುರು ಮಾತನಾಡಲು ಆಯ್ದಕ್ಕಿ ಲಕ್ಕಮ್ಮನಂತಹವರಿಗೆ ಅವಕಾಶವಿತ್ತು ಎಂದಾಗ ಇದಕ್ಕಿಂತ ಹೆಚ್ಚಿನ ಸ್ಥಾನಮಾನ ಏನುಬೇಕು ? ಪತಿಯೇ ಪರದೈವ ಎಂದು ಮಹಿಳೆ ಭಾವಿಸಿದ್ದ ಕಾಲದಲ್ಲಿ, ಪತಿಯ ತಪ್ಪನ್ನು ತೆಗೆದು ತೋರಿಸಿ ಲಕ್ಕಮ್ಮ ಪತಿಗೆ ''ಈ ಸಕ್ಕಿಯಾಸೆ ನಿಮಗೇಕೆ ?'' ಎನ್ನುವುದು ಸಾಮಾನ್ಯ ಪ್ರಸಂಗವೇ ? ಸಿ.ಪಿ. ಬ್ರೌನ್ ಎಂಬ ಬ್ರಿಟಿಷ್ ವಿದ್ವಾಂಸರು ಹೇಳುತ್ತಾರೆ, ''ಇಡೀ ಇಂಡಿಯಾದಲ್ಲಿ ಸ್ತ್ರೀಗೆ ಸಂಪೂರ್ಣ ಸಮಾನತೆ ಕೊಟ್ಟದ್ದು ಬೇರೆಯೇ ಲಿಂಗಾಯತ ಧರ್ಮ. ಸ್ತ್ರೀಯು ನಮಸ್ಕರಿಸಿದರೆ (ಶರಣು ಎಂದಾಗ) ಬೇರೆಯ ಜನಾಂಗದವರು ಸ್ತ್ರೀ ಕೀಳೆಂದು ನಮಸ್ಕಾರ ಹೇಳುವುದಿಲ್ಲ. ಆದರೆ ಲಿಂಗಾಯತರು ಪುನಃ ಅಷ್ಟೇ ವಿನಯದಿಂದ ಬಾಗಿ ನಮಸ್ಕರಿಸುತ್ತಾರೆ.''

ರಜಸ್ವಲೆಯಾದ ಸ್ತ್ರೀ ಹೊರಗೆ ಕೂರಬೇಕಿಲ್ಲ ; ಮುಟ್ಟುವಿಕೆಯಿಂದ ದೂರವಿರಬೇಕಿಲ್ಲ, ಗಂಡ ಸತ್ತ ಮಹಿಳೆ ತಲೆ ಕೂದಲು ತೆಗೆಸಬೇಕಿಲ್ಲ ; ವಿಧವೆ ಪುನಃ ಮದುವೆಯಾಗಬಹುದು ಮುಂತಾದ ಸಂಗತಿಗಳು ಸಾಮಾನ್ಯ ಪ್ರಸಂಗಗಳೆ ? ಇಷ್ಟು ದ್ವೇಷ ತುಂಬಿಕೊಂಡ ನಾರಾಯಣ ವಚನ ಸಾಹಿತ್ಯದ ಬಗ್ಗೆ ಬರೆಯದೆ ಇರುವುದು ಒಳ್ಳೆಯದು.

೫. ''ವಚನಕಾರರ ನೆರಳಿನಲ್ಲಿ ಮುಂದೆ ಬಂದ ಹರಿಹರ, ರಾಘವಾಂಕ ಮೊದಲಾದ ಕವಿಗಳು ಸಾಮರಸ್ಯ ಮೂಡಿಸಲು ಯತ್ನಿಸಿದರು. ಆದರೂ ಶಿವ ಪಾರಮ್ಯವನ್ನು ಒತ್ತಿ ಹೇಳುವ ಏಕದೇವತೋಪಾಸನೆಯನ್ನು ಪ್ರತಿಪಾದಿಸಿದರು.'' ಎಂದು ನಾರಾಯಣರು ಹೇಳಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಹರಿಹರ, ಪಾಲ್ಕುರಿಕೆ ಸೋಮನಾಥ ಮುಂತಾದವರು ಬಸವಾದಿ ಪ್ರಮಥರ ಬಗ್ಗೆ ಕೆಲವೊಂದು ಐತಿಹಾಸಿಕ ಸಂಗತಿಗಳನ್ನು ತಮ್ಮ ಕೃತಿಗಳ ಮೂಲಕ ಕೊಟ್ಟರೆಂಬುದು ಸತ್ಯವಾದರೂ, ಬಸವಣ್ಣನವರ ತತ್ತ್ವ ಸಿದ್ಧಾಂತಗಳಿಗೆ ಅನ್ಯಾಯವನ್ನೇ ಮಾಡಿದ್ದಾರೆ. ಆದ್ದರಿಂದಲೇ ತಾತ್ತ್ವಿಕ, ಸೈದ್ಧಾಂತಿಕ ದೃಷ್ಟಿಕೋನದ ನಮ್ಮಂಥ ಅನೇಕರು ಪುರಾಣ ಸಾಹಿತ್ಯ ತಿರಸ್ಕರಿಸಿ, ವಚನ ಸಾಹಿತ್ಯವನ್ನೇ ನೇರವಾಗಿ ಪ್ರತಿಪಾದಿಸುವುದು. ಹರಿಹರ, ಭೀಮಕವಿ ಮುಂತಾದವರಿಂದಾದ ತಾತ್ತ್ವಿಕ ದೋಷಗಳು ಕೆಳಗಿನಂತಿವೆ.

೧. ಬಸವ ಸಿದ್ಧಾಂತ ಒಪ್ಪದ ಕೈಲಾಸದಿಂದಲೇ ಧರ್ಮಪಿತ ಬಸವಣ್ಣ, ಅಲ್ಲಮಪ್ರಭು ಮುಂತಾದ ಎಲ್ಲರನ್ನೂ ಹುಟ್ಟಿಸಿರುವುದು.

೨. ಬಾಲ್ಯದಲ್ಲಿ ಧರ್ಮಪಿತರು ಶಿವೋಪಾಸಕರಾಗಿದ್ದರೂ, ಸ್ವತಂತ್ರ ಧರ್ಮ ಕೊಟ್ಟ ಬಳಿಕ ಅವರು ದೇವೋಪಾಸಕರಾದರು. ಬಾಲ್ಯದಲ್ಲಿ ಬರೆದ ವಚನಗಳು ಶಿವಪಾರಮ್ಯ ಕುರಿತು ಹೇಳಿದರೂ, ನವಧರ್ಮ ದ್ರಷ್ಟಾರರಾದ ಬಳಿಕ ಅವರು ಬ್ರಹ್ಮ - ವಿಷ್ಣು - ಮಹೇಶ್ವರರನ್ನೂ ಮೀರಿದ ಸೃಷ್ಟಿಕರ್ತ ಲಿಂಗದೇವನನ್ನು ಪರಮೋನ್ನತನೆಂದು ಸಾರಿದರು. ಆದರೆ ಶಿವಪೂಜಕರಾಗಿದ್ದ ಹರಿಹರ, ಭೀಮಕವಿ ಮುಂತಾದವರಿಗೆ ಬಸವಣ್ಣನವರ ದೇವರ ಪರಿಕಲ್ಪನೆ ಹೊಳೆಯದೆ ತಪ್ಪುಗಳನ್ನೆಸಗಿದ್ದಾರೆ.

೩. ತಮಿಳು ನಾಡಿನ ೬೩ ಪುರಾತನರ ಭಕ್ತಿ ಭಾವುಕ ಭಕ್ತಿಯಾಗಿದ್ದು, ಬಾಲ್ಯದಲ್ಲಿ ಬಸವಣ್ಣನವರು ಅದನ್ನು ಕೊಂಡಾಡಿದ್ದರೂ, ಬೌದ್ಧಿಕ ಪ್ರೌಢತೆ ಬಂದ ಮೇಲೆ ಸಿರಿಯಾಳ, ಸಿಂಧು ಬಲ್ಲಾಳ ಮುಂತಾದವರ ವರ್ತನೆಯನ್ನು ಟೀಕಿಸಿದರು. ಒಂದು ವಚನದಲ್ಲಿ ಅಲ್ಲಮಪ್ರಭು ದೇವರು ಹೀಗೆ ಹೇಳುತ್ತಾರೆ.

ಸಿರಿಯಾಳ - ಚಂಗಳೆಯಂತೆ ಶಿಶುವಧೆಯ ಮಾಡಿದವನಲ್ಲ
ನಂಬಿ - ಬಲ್ಲಾಳರಂತೆ ಕಾಮುಕತನವ ಮಾಡಿದವನಲ್ಲ
ಬೊಮ್ಮಯ್ಯ-ಕಣ್ಣಪ್ಪನವರಂತೆ-ಜೀವಹಿಂಸೆಯ ಮಾಡಿದವನಲ್ಲ.
ಗುಹೇಶ್ವರಾ, ನಿಮ್ಮ ಶರಣರಿಗಿಕ್ಕಿದ ತೊಡರು ಸಂಗನಬಸವಣ್ಣ

- ಅ.ಪ್ರ.ವ - ೮೦೦

ಆದರೆ ಹರಿಹರನಿಗೆ ಸಿಂಧುಬಲ್ಲಾಳನ ಪ್ರಸಂಗ ಬಹಳ ಪ್ರಭಾವ ಬೀರಿದ್ದು, ಅದನ್ನು ಬಸವಣ್ಣನವರ ವಿಚಾರಧಾರೆಗೆ ವಿರುದ್ಧವಾಗಿದ್ದರೂ ತನ್ನ ಬಸವರಾಜ ದೇವರ ರಗಳೆಯಲ್ಲಿ ಸೇರಿಸಿದ್ದಾನೆ.

ಆದ್ದರಿಂದ ಹರಿಹರ, ರಾಘವಾಂಕರು ತಮ್ಮ ಶೈವ ವಿಚಾರಧಾರೆಯನ್ನು ತೂರಿಸಿ ಬಸವಾದಿ ಪ್ರಮಥರ ಜೀವನ ಚರಿತ್ರೆಗಳನ್ನು ಅಶುದ್ಧಗೊಳಿಸಿರುವರೇ ವಿನಾ ಶರಣರ ನೆರಳಿನಲ್ಲಿ ನಡೆದಿಲ್ಲ. ನಂತರದ ಕವಿಗಳ ಮೇಲೆ ಅಪಾರ ಪ್ರಭಾವವನ್ನು ವಚನಕಾರರು ಬೀರಿದ್ದು ಸತ್ಯವಾದರೂ, ವಚನಕಾರರ ತಾತ್ತ್ವಿಕ ಚಿಂತನೆಯನ್ನೂ ಈ ಕವಿಗಳು

ಅಳವಡಿಸಿಕೊಳ್ಳುವಲ್ಲಿ ಸೋತಿದ್ದಾರೆ. "ಸಾಹಿತ್ಯವನ್ನು ಶ್ರದ್ಧೆಯಿಂದ ನೋಡುವುದಾದರೆ ವಿಮರ್ಶೆಗೆ ಅವಕಾಶವಿಲ್ಲ. ವಿಮರ್ಶೆಗೆ ಒಳಪಡಿಸಿದಾಗ ಅದು ವಸ್ತುನಿಷ್ಠವಾಗಿರಬೇಕು." ಎಂಬ ಉತ್ತಮ ಮಾತನ್ನು ಪಿ.ವಿ.ನಾರಾಯಣ ಆಡಿದ್ದಾರೆ. ಆದರೆ ವಿಮರ್ಶೆ ಎಂದರೇನು ? ಅಧು ಒಂದು ಶಸ್ತ್ರಚಿಕಿತ್ಸೆಯಂತೆ. ಶಸ್ತ್ರ ಚಿಕಿತ್ಸೆಯ ಗುರಿ ಯೋಗಿಯಲ್ಲಿರುವ ಗಂಟು ತೆಗೆದು ಆರೋಗ್ಯ ವಂತನನ್ನಾಗಿ ಮಾಡುವುದೇ ವಿನಾ ಕಾನೂನಿನ ಹಿಡಿತಕ್ಕೆ ಸಿಗದಂತೆ ರೋಗಿಯನ್ನು ಕೊಲ್ಲಲ್ಲು ಬರುತ್ತದೆ ಎಂದು ದುಷ್ಟವಿಚಾರ ಮಾಡಿ ಕೊಲ್ಲುವುದಿಲ್ಲ. ಪಿ. ವಿ. ನಾರಾಯಣ ಭಾಷಣ - ಬರಹಗಳ ಉದ್ದೇಶ ವಚನಕಾರರ ಆಶಯವನ್ನು ಅರಿಯುವುದಕ್ಕಿಂತ, ಬಿಂಬಿಸುವುದಕ್ಕಿಂತ ಶರಣರನ್ನು ನಿಂದೆ ಮಾಡುವುದೇ ಆಗಿದೆ. ಅಂದಾಗ ಆ ವಿಮರ್ಶೆ ವಸ್ತುನಿಷ್ಠೆಯಿಂದ ಕೂಡಿರುವುದೇ ಇಲ್ಲ ಎಂಬುದು ಮನದಟ್ಟಾಗುತ್ತಿದೆ.

ಜೇಡರ ಹುಳು ಬಲೆ ನೆಯ್ದು ಕಸವನ್ನು ಸೃಷ್ಟಿಸುವಂತೆ ಪಿ.ವಿ.ನಾರಾಯಣರು ತಮಗೆ ಅರ್ಥವಾಗದೆ ಇರುವ ವಚನ ಸಾಹಿತ್ಯವನ್ನೂ ಬಸವಾದಿ ಪ್ರಮಥರ ಕ್ರಾಂತಿಕಾರಿ ಚಿಂತನೆಯನ್ನು ತಪ್ಪುತಪ್ಪಾಗಿ ಅರ್ಥೈಸಿ ವಿಕೃತಗೊಳಿಸದೆ, ಸುಮ್ಮನಿದ್ದರೂ ಅದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಹದುಪಕಾರವಾಗುವುದು ಎಂದು ಹೇಳುವುದು ಅನಿವಾರ್ಯವಾಗುತ್ತಿದೆ.

ಬಸವ ಧರ್ಮವನ್ನು ಪುನಃ ರಕ್ಷಿಸಿದ ಮಡಿವಾಳ ಮಾಚಿದೇವರು

- ಮಾತಾಜಿ

ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಿತ್ಯ ಸ್ಮರಣೀಯರು. ನನಗಂತೂ ಆ ಪುಣ್ಯಾತ್ಮನ ಹೆಸರು ನೆನಪಾಗುತ್ತಲೇ ಕೃತಜ್ಞತೆ ತುಂಬಿ ಬಂದು, ಕಣ್ಣು ಸಜಲವಾಗುತ್ತವೆ. ಧರ್ಮಪಿತರು ಹೇಳುವ ವಚನದಲ್ಲಿ ಮಾಚಿದೇವರ ಮಹತ್ವ ಸ್ಪಷ್ಟವಾಗುತ್ತದೆ.

ನಾನೊಂದು ಕಾರಣಕ್ಕೆ ಮರ್ತ್ಯಕ್ಕೆ ಬಂದೆನು.
ಬಂದ ಬಳಲಿಕೆಯ ಕಳೆಯಲು ಚನ್ನಬಸವಣ್ಣ ಬಂದನು.
ಇನ್ನು ಬಾರದಂತೆ ಪ್ರಭುದೇವರು ಬಂದರು.
ಇದಕ್ಕೆ ಆಜ್ಞಾಕರ್ತೃ ಮಡಿವಾಳ ಮಾಚಿದೇವರು ಬಂದರು.
ನಾನಿನ್ನಾರಿಗಂಜೆನು ಲಿಂಗದೇವಾ.

ಮಡಿವಾಳ ಮಾಚಿದೇವರ ಧೈರ್ಯ-ಸ್ಥೈರ್ಯ ಮುಂತಾದುವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಧರ್ಮಪಿತರು ಈ ಮಾತನ್ನು ನುಡಿದಿದ್ದಾರೆ. ಏಕೆಂದರೆ ಧರ್ಮವಂತರು ಲಕ್ಷಾಂತರ ಜನರಲ್ಲಿ ಧರ್ಮರಕ್ಷಣೆಗಾಗಿ ಹೋರಾಡುವವರು ಸಿಕ್ಕುವುದು

Digitalized by e-Sahithya Documentation Forum
Sponsored by Sarayu Foundation Trust

ಒಬ್ಬರಾದರೆ ಹೆಚ್ಚು. ಅಂಥ ಕಲಿ ಮಡಿವಾಳ ಮಾಚಿದೇವರು. ಆ ಪವಿತ್ರ ಮಹಾಂತನ ಪ್ರಯತ್ನದಿಂದ ಇಂದು ವಚನ ವಾಙ್ಮಯ ಅಷ್ಟಿಷ್ಟಾದರೂ ಉಳಿಯಲು ಸಾಧ್ಯವಾಯಿತು. ಅಂಥ ಮಾಚಿದೇವರ ಹೆಸರು ಹೊತ್ತ ಮಡಿವಾಳ ಮಾಚಿದೇವರ ಸಂಘದವರು ನೀಡಿದ ಸಹಕಾರ ಬಸವ ಜ್ಯೋತಿ ಕಾರ್ಯಕ್ರಮಕ್ಕೆ ಮೆರುಗು ನೀಡಿತು.

ಚಿತ್ರದುರ್ಗದ ರಾಷ್ಟ್ರೀಯ ಬಸವ ದಳವು ೧೯೮೭ರ ಮಾರ್ಚಿಯಲ್ಲಿ ಹದಿಮೂರು, ನಮ್ಮ ಹುಟ್ಟುಹಬ್ಬದಂದು ಪ್ರಾರಂಭವಾಯಿತು. ಶರಣ ಬಿ. ವಿ. ಸತ್ಯನಾರಾಯಣ ಶೆಟ್ಟರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡಲಾಯಿತು. ಪುರಸಭೆಯಿಂದ ನಿವೇಶನ ಪಡೆದು ಸುಂದರವಾದ ಬಸವ ಮಂಟಪವನ್ನೂ ಕಟ್ಟಿಸಿದರು. ಅಧಿಕೃತ ಟ್ರಸ್ಟ್ ಇದ್ದೂ ಸಹ ಕೆಲವು ದುರ್ಜನರನ್ನು ಬಿಟ್ಟು ಗೂಂಡಾಗಿರಿ ಮಾಡಿಸಿ ಬೃಹನ್ಮಠದವರು ಬಸವ ಮಂಟಪವನ್ನು ಕಬ್ಜಾ ಮಾಡಿಕೊಂಡರು. ನಮ್ಮವರು ಸಾತ್ವಿಕರು, ಭಕ್ತಿವಂತರು. ನಮ್ಮದು ಏನಿದ್ದರೂ ಭಾಷಣ, ಬರಹಗಳ ಮೂಲಕವೇ ಉತ್ತರ, ಪ್ರತ್ಯುತ್ತರ, ಸಂವಾದವೇ ವಿನಾ ಧನ ಬಲದ, ಗೂಂಡಾಬಲದ ರಾಜಕೀಯವಲ್ಲ. ಬಸವ ಮಂಟಪ ಕಬ್ಜಾ ಮಾಡಿಕೊಂಡು ನಡೆಯುತ್ತಿದ್ದ ಎಲ್ಲ ಧಾರ್ಮಿಕ ಚಟುವಟಿಕೆಗಳಾದ ಸಾಮೂಹಿಕ ಪ್ರಾರ್ಥನೆ, ನೆನಹು, ಮಾಸಿಕ ಶರಣ ಸಮಾಗಮ ಮುಂತಾದ ಎಲ್ಲ ಕಾರ್ಯಕ್ರಮಗಳು ನಡೆಯದಂತೆ ಮಾಡಿದ್ದಲ್ಲದೆ ಬಸವ ಮಂಟಪದ ಅಧಿಕೃತ ಟ್ರಸ್ಟ್ ಅಧ್ಯಕ್ಷರಾದ ಬಿ. ವಿ. ಸತ್ಯನಾರಾಯಣ ಶೆಟ್ಟರು ಮತ್ತು ಇನ್ನಿತರ ಸಾತ್ವಿಕ ಶರಣರ ಮೇಲೆ ಮತ್ತು ಪ್ರಾರ್ಥನೆಗೆ ಬಂದ ಸದ್ಭಕ್ತರ ಮೇಲೆ ಬಸವ ಮಂಟಪವನ್ನು ಕಬ್ಜಾ ಮಾಡಿಕೊಳ್ಳಲು ಬಂದರೆಂದು ಕ್ರಿಮಿನಲ್ ಮೊಕದ್ದಮೆ ಸಹ ಹಾಕಿಸಿದರು.

ಆರ್ಯ ವೈಶ್ಯ ಸಮಾಜದ ಪ್ರತಿಷ್ಠಿತ ಮುಖಂಡರಾದ ಶರಣ ಬಿ. ವಿ. ಸತ್ಯನಾರಾಯಣ ಶೆಟ್ಟರು ಹೃದಯದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದ ವಯೋವೃದ್ಧರು. ಅವರು ಕೋರ್ಟಿಗೆ ಅಲೆದಾಡಿ ಕೋರ್ಟಿನಲ್ಲಿ ನಿಲ್ಲುತ್ತಿದ್ದುದು ನನಗಂತೂ ತೀವ್ರ ದುಃಖವನ್ನು ಉಂಟು ಮಾಡುತ್ತಿತ್ತು. ಅದೇ ರೀತಿ ಸುಸಂಸ್ಕೃತ ಮನೆತನದ ಗೃಹಿಣಿಯರು ವಿದ್ಯಾರ್ಥಿಗಳು ಹಳ್ಳಿಯ ದೀನರು ಮತ್ತು ದಲಿತರು ನಮ್ಮ ಪ್ರವಚನ ಕೇಳಿ ಬಸವ ತತ್ತ್ವದಲ್ಲಿ ವಿಶ್ವಾಸವಿಟ್ಟು ಪ್ರಾರ್ಥನೆಗೆ ಬಂದುದಕ್ಕೆ ಸಿಕ್ಕ ಪ್ರತಿಫಲ ಇದಾಯಿತಲ್ಲ ಎಂಬ ಕೊರಗು ನನ್ನನ್ನು ತೀವ್ರವಾಗಿ ಬಾಧಿಸುತ್ತಿತ್ತು. ಲಿಂಗಾಯತರ ಕರ್ಮ ಅನೇಕ ದುಷ್ಟ ಶ್ರೀಮಂತರನ್ನು, ದುಷ್ಟ ಮಠಾಧಿಕಾರಿಗಳನ್ನು ಹೊಂದಿರುವುದು. ಆದರೆ ಇದಕ್ಕಾಗಿ ಅನ್ಯ ಜನಾಂಗದವರು ತೊಂದರೆಗೆ ಒಳಗಾಗಬೇಕಾಯಿತಲ್ಲ ಎಂಬ ಕಳವಳ ನನ್ನದು. ಸಾತ್ವಿಕ ಜನರನ್ನು ಪೋಲೀಸರು ತಂದು ಸಾಲಾಗಿ ನಿಲ್ಲಿಸಿದಾಗ ಸ್ವತಃ ನ್ಯಾಯಾಧೀಶರೇ ದಿಗ್ಭ್ರಾಂತಿಗೊಂಡು ಶರಣೆಯರ ಮೇಲಿನ ವಿಭೂತಿ ನೋಡಿ ಇಂಥವರನ್ನೆಲ್ಲ ಏಕೆ ಕರೆತಂದಿರಿ? ಎಂದು ಪ್ರಶ್ನಿಸಿದರಂತೆ. ಆರ್ಯ ವೈಶ್ಯ ಸಮಾಜದ ಹಿರಿಯರು ಶೆಟ್ಟರ ಬಳಿ ಬಂದು, ''ನಿಮಗೇಕೆ ಇಂಥ ತಾಪತ್ರಯ; ನಮ್ಮಲ್ಲಿ ನಿಮಗೆ, ಎಂಥಾ ಗೌರವವಿದೆ. ರಾಷ್ಟ್ರೀಯ ಬಸವ ದಳದ ಸಹವಾಸ

ಬಿಟ್ಟುಬಿಡಿ'' ಎಂದು ವಿನಂತಿಸಿದರೂ ಜ್ಞಾನವೃದ್ಧ - ವಯೋವೃದ್ಧ ಶೆಟ್ಟರು ಸ್ವಲ್ಪವೂ ಕದಲಲಿಲ್ಲ.

ಮೈಸೂರು ಸಂಸ್ಥಾನಿಕರ ಮನೆತನದಲ್ಲಿ ಒಂದು ಕಥೆ ಇದೆ. ಅಲಮೇಲಮ್ಮ ಎಂಬ ಓರ್ವ ಗೃಹಿಣಿಗೆ ಮೈಸೂರು ದೊರೆಗಳು ಹಿಂಸೆ ಕೊಟ್ಟಾಗ ಆಕೆ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಶಾಪ ಕೊಟ್ಟಳಂತೆ, ''ಮೈಸೂರು ದೊರೆಗೆ ಮಕ್ಕಳೇ ಆಗದಿರಲಿ.'' ಎಂದು. ಆಶ್ಚರ್ಯಕರವೆಂದರೆ ಹೀಗೇ ನಡೆಯುತ್ತಿದೆ. ದಿವಂಗತ ಚಾಮರಾಜ ಒಡೆಯರು ದತ್ತು ಪುತ್ರ ; ಅವರ ತಂದೆಗೆ ಮಕ್ಕಳಿರಲಿಲ್ಲ. ಇವರನ್ನು ದತ್ತು ಪಡೆದರು ; ಅವರಿಗೆ ಈಗ ಲೋಕಸಭಾ ಸದಸ್ಯರಾಗಿರುವ ಶ್ರೀಕಂಠ ದತ್ತ ಒಡೆಯರ್ ಹುಟ್ಟಿದರು. ಪುನಃ ಅವರಿಗೆ ಮಕ್ಕಳಿಲ್ಲ. ಪೂಜ್ಯ ಅಪ್ಪಾಜಿ ಪ್ರವಚನದಲ್ಲಿ ಹೇಳುತ್ತಿದ್ದರು, ''ಕಮ್ಮಾರನ ಮನೆಯಲ್ಲಿರುವ ಜಡವಾದ ಚರ್ಮದ ತಿದಿ ಉಫ್ ಉಫ್ ಎಂದು ಉಸಿರು ಬಿಟ್ಟರೆ ಕಠೋರವಾದ ಕಬ್ಬಿಣ ಕರಗಿ ನೀರಾಗುತ್ತೆ. ಇನ್ನು ಜೀವಂತ ತಿದಿಗಳಾದ ನೊಂದ ಮಾನವರು ನಿಟ್ಟುಸಿರು ಬಿಟ್ಟರೆ ಕೆಡುಕು ಮಾಡಿದವರಿಗೆ ಒಳ್ಳೆಯದಾದೀತೆ? ಆದ್ದರಿಂದ ಎಂದೂ ಯಾರಿಗೂ ಕೆಡುಕು ಮಾಡಬಾರದು. ''ನಮ್ಮ ಶರಣರು ಸಾಕಷ್ಟು ಕೋರ್ಟಿಗೆ ಅಲೆದಾಡುತ್ತಿದ್ದರೂ.'' ಇದು ಅಪ್ಪ ಬಸವಣ್ಣನಿಗಾಗಿ ಮಾಡಿದ ಸೇವೆ'' ಎಂದುಕೊಂಡರು; ನಿಷ್ಠೆ ಬದಲಿಸಲಿಲ್ಲ.

ವಯೋವೃದ್ಧರಾದ ಶರಣ ಬಿ. ವಿ. ಸತ್ಯನಾರಾಯಣಶೆಟ್ಟರು, ಅವರ ಮಗ ಶರಣ ಶ್ರೀನಿವಾಸಮೂರ್ತಿ ಕೋರ್ಟಿಗೆ ಅಲೆದಾಡುತ್ತಿದ್ದುದು ನನಗಂತೂ ನಾಚಿಕೆ ತರಿಸುತ್ತಿತ್ತು. ''ಲಿಂಗಾಯತ ಸಮಾಜ, ಇದರ ಗುರುಗಳು ಯಾವ ಮಟ್ಟದಲ್ಲಿದ್ದಾರೆ ?'' ಎಂದು ಎಲ್ಲಿ ಅಳೆಯುವರೋ ಎಂದು ಕಳವಳವಾಗುತ್ತಿತ್ತು. ಹೊರಗೆ ಆಡಿ ತೋರಿಸದಿದ್ದರೂ ಮನಸ್ಸಿನಲ್ಲಿ ಅಂದು ಕೊಂಡಿರಲೂ ಬಹುದು.

ಒಂದು ದಿನ ಇದ್ದಕ್ಕಿದಂತೆ ಅನ್ನಿಸಿತು, ''ಚಿತ್ರದುರ್ಗದ ಪೋಲೀಸ್ ಇಲಾಖೆಯಲ್ಲಿ ವಿಶ್ವಾಸವಿಲ್ಲ. ವಿಳಂಬಿತ ನ್ಯಾಯದಾನಕ್ಕೆ ಹೆಸರಾದ ನಮ್ಮ ದೇಶದ ಕೋರ್ಟ್‌ಗಳಂತೂ ಸರಿಯೇ ಸರಿ ; ನೋಡೋಣ ಇಲ್ಲೇ ಏಕೆ ಪ್ರಯತ್ನಿಸಬಾರದು ಎಂದು ಬೆಂಗಳೂರು ರಾಷ್ಟ್ರೀಯ ಬಸವ ದಳದ ಮುಖ್ಯಸ್ಥರು ಆಗಿನ ಗೃಹಮಂತ್ರಿ ಶ್ರೀ ಪಿ. ಜಿ. ಆರ್. ಸಿಂಧ್ಯರನ್ನೂ, ಪೋಲೀಸ್ ಮಹಾನಿರ್ದೇಶಕ ಶ್ರೀ ಶ್ರೀನಿವಾಸಲು ಅವರನ್ನು ಮುಖ್ಯ ಕಾರ್ಯದರ್ಶಿಗಳನ್ನು ಕಂಡು, ಒಂದು ಮನವಿ ಸಲ್ಲಿಸಿದರು. ನಡೆದ ಪ್ರಸಂಗದ ವಿವರ ಬರೆದು ಸಾತ್ವಿಕರನ್ನು, ಉತ್ತಮರನ್ನು ಸುಳ್ಳು ಮೊಕದ್ದಮೆ ಹೂಡಿ ಈ ತರಹ ಅಲೆಸುವುದು ಸರಿಯಲ್ಲ. ಕೇಸ್ ವಜಾ ಮಾಡಿಸಿರಿ ಎಂದು ಮನವಿ ಮಾಡಿಕೊಂಡ ಬಳಿಕ ಪರಿಶೀಲನೆ ನಡೆಸಿ ಕೇಸನ್ನು ವಜಾ ಮಾಡಿದರು. ಶರಣ ಬಿ. ವಿ. ಸತ್ಯನಾರಾಯಣ ಶೆಟ್ಟರಾದಿಯಾಗಿ ಉಳಿದ ನಲವತ್ನಾಲ್ಕು ಜನ ಶರಣರು ಅಲೆದಾಡುವುದು ತಪ್ಪಿತು.

ಪ್ರಾರ್ಥನೆ ಮಾಡಲು ಜಾಗವಿಲ್ಲದೆ ಎಲ್ಲೆಲ್ಲೋ ನಮ್ಮ ಶರಣರು ಪರದಾಡಿದರು.

Digitalized by e-Sahithya Documentation Forum
Sponsored by Sarayu Foundation Trust

ಕೆಲವು ವಾರ ಕ್ರಿಶ್ಚಿಯನ್ನರ ಒಂದು ಶಾಲೆಯಲ್ಲಿ ಸಹ ಮಾಡಿದರು. ಕಡೆಗೆ ಲಿಂಗಾಯತ ಸಮಾಜದ, ಮಠಾಧೀಶರ ಮಾನ ಹರಾಜು ಹಾಕಬಾರದೆಂದು ಕ್ರೈಸ್ತ ಶಾಲೆಯಲ್ಲಿ ಮಾಡುತ್ತಿದ್ದ ಪ್ರಾರ್ಥನೆ ನಿಲ್ಲಿಸಿ ಮನೆಮನೆಗಳಲ್ಲೇ ಮಾಡಿಕೊಳ್ಳಲು ಯತ್ನಿಸಿದರು. ಕೆಲವರ ಈ ನಿಷ್ಠೆಯನ್ನು ಮಾತ್ರ ಮೆಚ್ಚಲೇಬೇಕು. ನಂತರ ಮಡಿವಾಳ ಮಾಚಿದೇವರ ಸಂಘದ ಮಾಚಿದೇವರ ಗುಡಿ ಇರುವುದು ತಿಳಿದು ನಮ್ಮ ಶರಣ ಬಂಧುಗಳು ಸಂಪರ್ಕಿಸಿದಾಗ ಅವರು ಸಂತೋಷದಿಂದ ಒಪ್ಪಿದರು. ಆಗಿನಿಂದ, ತಾವೇ ಕಟ್ಟಿದ ಬಸವ ಮಂಟಪ ಇದ್ದೂ ಸಹ, ಅನಾಥ ಮಕ್ಕಳಂತೆ ಅತ್ತಿತ್ತ ಅಲೆಯುತ್ತ, ಪೂಜೆ-ಪ್ರಾರ್ಥನೆ ಇಲ್ಲದೆ ಬಸವ ಮಂಟಪವು ಬಣಗುಡುತ್ತಿರುವುದನ್ನು ಕಂಡು ನೊಂದುಕೊಳ್ಳುತ್ತಿದ್ದರೂ, ನೆಮ್ಮದಿಯಾಗಿ ಪ್ರಾರ್ಥನೆ - ಶರಣರ ಜಯಂತಿಗಳನ್ನು ಮಡಿವಾಳ ಮಾಚೀದೇವರ ದಿವ್ಯಾಲಯದಲ್ಲಿ ಮಾಡುತ್ತಲಿದ್ದಾರೆ.

ಶರಣ ಮೇಳ ಪ್ರಚಾರ

ಶರಣ ಮೇಳ ಪ್ರಚಾರ ನಿಮಿತ್ತ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಕಾರ್ಯಕ್ರಮವನ್ನು ದಿ. 27-11-99ರಂದು ಕೊಡಲಾಗಿತ್ತು. ಹಿಂದಿನ ವರ್ಷ ಜಾಗವಿಲ್ಲದ್ದರಿಂದ ಶರಣ ಚನ್ನಯ್ಯನವರ ಮನೆಯಲ್ಲಿ ಖಾಸಗಿಯಾಗಿ ಮಾಡಲಾಗಿತ್ತು. ಈ ವರ್ಷ ಮಡಿವಾಳ ಮಾಚಿದೇವರ ಕೃಪೆಯಿಂದ, ಮಾಚಿದೇವ ಸಂಘದವರ ಸಹಕಾರದಿಂದ ಶರಣ ಮೇಳ ಪ್ರಚಾರವು ಬಹಿರಂಗವಾಗಿ ನಡೆದಾಗ ಎಲ್ಲ ಶರಣ ಬಂಧುಗಳಿಗೆ ಆನಂದವೋ ಆನಂದ. ರಾತ್ರಿ ದೂರವಾಣಿಯಲ್ಲಿ ಮಾತನಾಡಿ ಪೂಜ್ಯ ಶ್ರೀ ಗಂಗಾ ಮಾತಾಜಿ ಹೇಳಿದರು. ''ಬಹಳ ಜನ ಸೇರಿದ್ದರು. ದುರ್ಘಟನೆ ನಡೆದ ದಿನದಿಂದ, ಬಸವ ಮಂಟಪವು ದುರ್ಜನರ ಕಬ್ಜಾಕ್ಕೆ ಹೋದಂದಿನಿಂದ ನೊಂದು ಹೊರಗೆ ಬರದಿರುವ ಶರಣ ಬಿ. ವಿ. ಸತ್ಯನಾರಾಯಣ ಶೆಟ್ಟರು ಇಂದು ಕಾರ್ಯಕ್ರಮಕ್ಕೆ ಬಂದಿದ್ದರು. ಕಂಡು ಸಂತೋಷವಾಯಿತು ಎಂದರು. ನನಗೂ ಸಂತೋಷವಾಯಿತು.'' ಅಂತೂ ಇಂದು ಧರ್ಮಪಿತ ಬಸವಣ್ಣನವರ ಮತ್ತು ವೀರ ಗಣಾಚಾರಿ ಮಡಿವಾಳ ಮಾಚಿದೇವರ ಆತ್ಮಗಳು ನಲಿದಾಡಿರಬೇಕು. ಆಗಲೂ ಮಾಚಿದೇವರೇ ಬಸವ ಧರ್ಮವನ್ನು ರಕ್ಷಿಸಿದರು. ಈಗಲೂ ಮಾಚಿದೇವ (ಸಂಘ) ರೇ ರಕ್ಷಿಸಿದರು. ಇದು ಬಹಳ ಸಾಂಕೇತಿಕವಲ್ಲವೆ?'' ಎಂದು ಉದ್ಗರಿಸಿದೆ.

''ನಿಜ ; ತಾವು ಕಟ್ಟಿದ ಬಸವ ಮಂಟಪ ಎಂದು ದುಷ್ಟರ ಕೈಯಿಂದ ಬಿಡುಗಡೆಯಾಗಿ ಅಲ್ಲಿ ಪೂಜೆ - ಪ್ರಾರ್ಥನೆ - ನೆನಹು - ಶರಣಸಮಾಗಮ ನಡೆಯುವಂತಾಗುವುದೋ ಎಂದು ಎಲ್ಲ ಶರಣರು ಮತ್ತು ಸಂತೋಷದಿಂದ ಬಸವ ಮಂಟಪದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಜನರು ಕಾತುರದಿಂದ

ಕಾಯುತ್ತಿದ್ದಾರೆ.'' ಎಂದು ಪೂಜ್ಯ ಗಂಗಾ ಮಾತಾಜಿ ಹೇಳಿದರು. '' ಆ ಕಾಲವೂ ಬರುತ್ತದೆ! ಇತಿಹಾಸದಲ್ಲಿ ಎಂಥಾ ದುರ್ಜನರು, ದುಷ್ಟರು, ಕ್ರೂರಿಗಳು, ಪಾಪಿಗಳು ಪರಿವರ್ತನೆಗೊಂಡ ದಾಖಲೆಗಳಿಲ್ಲವೆ? ಆದ್ದರಿಂದ ಈ ದುರ್ಜನರ ಮನಸ್ಸೂ ಒಂದು ದಿನ ಪರಿವರ್ತನೆಗೊಂಡು ಶರಣರಿಗೆ ಒಪ್ಪಿಸಿಯೇ ಒಪ್ಪಿಸುವರು. ನಿಜ ಶರಣರ ನಿಷ್ಠೆ ಫಲ ಕೊಟ್ಟೇ ಕೊಡುವುದು. ತಾಳ್ಮೆಯಿಂದ ಇರಲು ಹೇಳು'' ಎಂದು ಪೂಜ್ಯ ಗಂಗಾ ಮಾತಾಜಿಗೆ ಹೇಳಿದೆ.

ತ್ರಿವಿಧ ದಾಸೋಹದ ಮರ್ಮ

- ಮಾತಾಜಿ

೧. ತನುವಿನಲ್ಲಿ ತನು ಸವೆದು
ಮನದಲ್ಲಿ ಮನ ಸವೆದು
ಧನದಲ್ಲಿ ಧನ ಸವೆದು
ಲಜ್ಜೆಗೆಟ್ಟು, ನಾಣುಗೆಟ್ಟು ಕಿಂಕಲನಾಗಿರಬೇಕು.
ಲಿಂಗಜಂಗಮವನೊಲಿಸುವಂಗಿದು ಚಿಹ್ನವಯ್ಯಾ
ಇದನೀಸುವ ಕಳೆದ, ಕೂಡಲ ಚನ್ನಸಂಗಾ, ಬಸವಣ್ಣ ನೋಡಯ್ಯಾ
ಚ. ಬ. ವ - ೧೮೭

೨. ತನುಗುಣ ಸಂಗದಿಂದ ಪ್ರಸಾದ ಸಂಗ ಕೆಟ್ಟಿತ್ತು
ಮನಗುಣ ಸಂಗದಿಂದ ಲಿಂಗಸಂಗ ಕೆಟ್ಟಿತ್ತು
ಲೋಭಗುಣ ಸಂಗದಿಂದ ಜಂಗಮ ಸಂಗ ಕೆಟ್ಟಿತ್ತು
ಈ ತ್ರಿವಿಧದ ಆಗುಚೇಗೆಯನರಿಯದ ಕಾರಣ
ಭವಘೋರ ನರಕಕ್ಕೊಳಗಾದರು.
ಇದು ಕಾರಣ ಕೂಡಲ ಚನ್ನ ಸಂಗಯ್ಯಾ
ಈ ತ್ರಿವಿಧದನುವ ಬಲ್ಲ ಬಸವಣ್ಣಂಗೆ ನಮೋ ನಮೋ ಎಂಬೆ.
ಚ. ಬ. ವ - ೧೮೬

ತನು-ಮನ-ಧನ ಈ ಮೂರು ಭಕ್ತನಿಗೆ ಸೃಷ್ಟಿಕರ್ತ ಲಿಂಗದೇವರು ನೀಡಿರುವ ದಾನ. ತಾನು ಹೊಂದಿರುವ ತನುವನ್ನು, ಮನವನ್ನು, ಗಳಿಸಿರುವ ಧನವನ್ನು ವ್ಯಯಿಸಲು, ವಿನಿಯೋಗಿಸಲು ವ್ಯಕ್ತಿಯು ಸ್ವತಂತ್ರನು.

ಗುರು-ಬಸವಣ್ಣ, ಲಿಂಗದೇವ-ಸೃಷ್ಟಿಕರ್ತ, ಜಂಗಮ-ಶರಣ ಸಮಾಜ ಈ ಮೂರರ ಸೇವೆಯೇ ನಿಷ್ಠಾವಂತ ಭಕ್ತನ ಕರ್ತವ್ಯ ಮತ್ತು ಧ್ಯೇಯ. ಸೇವೆಯನ್ನು, ಶರಣ ಧರ್ಮದ ಪರಿಭಾಷೆಯಲ್ಲಿ ದಾಸೋಹವನ್ನು ಮಾಡುವಾಗ ಈ ಮೂರು ಸಾಧನಗಳೂ ನಿರತವಾಗಬೇಕು. ತನು ದಾಸೋಹ, ಮನ ದಾಸೋಹ, ಧನ ದಾಸೋಹ ಎಂಬ ತ್ರಿವಿಧ ದಾಸೋಹಗಳು ವ್ಯಕ್ತಿ ಮತ್ತು ಸಮಾಜದ ಪರಿಪೂರ್ಣತೆಗೆ ಅತ್ಯವಶ್ಯ.

Digitalized by e-Sahithya Documentation Forum
Sponsored by Sarayu Foundation Trust

2000ದ ವರ್ಷದ ಸಾಲಿನ ಶರಣರ ಜಯಂತಿ - ಹಬ್ಬಗಳು

ಕೂಡಲ ಸಂಗಮದಲ್ಲಿ ಶರಣ ಮೇಳ	ಜನವರಿ 12 ರಿಂದ 15
ಬಸವ ಧರ್ಮ ಸಂಸ್ಥಾಪನಾ ದಿನ - ಶರಣ ಸಮಾಗಮ	ಜನವರಿ 14
ಸಿದ್ಧರಾಮೇಶ್ವರ ಜಯಂತಿ ★	ಜನವರಿ 15
ಗಣರಾಜ್ಯೋತ್ಸವ ★	ಜನವರಿ 26
ಚನ್ನ ಹುಣ್ಣಿಮೆ (ಉಳವಿಯಲ್ಲಿ ರಥೋತ್ಸವ) ಗಣಭೋಜನ	ಫೆಬ್ರವರಿ 19
ಕೂಡಲ ಸಂಗಮದಲ್ಲಿ ಶರಣಜ್ಯೋತಿ ದರ್ಶನ - ಮಾಘಹುಣ್ಣಿಮೆ	ಫೆಬ್ರವರಿ 19
ಸರ್ವಶರಣರ ದಿನಾಚರಣೆ/ಮಹಾಶಿವರಾತ್ರಿ/ ಗಣಮೇಳ ★	ಮಾರ್ಚ್ 4
ಪೂಜ್ಯ ಮಾತಾಜಿಯವರ ವರ್ಧಂತಿ	ಮಾರ್ಚ್ 13
ಕಲ್ಯಾಣ ಕ್ರಾಂತಿ ಷಡ್ ದಿನಾಂಚರಣೆ	ಮಾರ್ಚ್ 17 ರಿಂದ 22
ಫಾಲ್ಗುಣ ದ್ವಾದಶಿ - ಧರ್ಮಪಿತರ ಗಡಿಪಾರು	ಮಾರ್ಚ್ 17
ತ್ರಯೋದಶಿ-ಹರಳಯ್ಯ - ಮಧುವರಸರ ಬಂಧನ	ಮಾರ್ಚ್ 18
ಚತುರ್ದಶಿ - ಶರಣರಿಗೆ ಎಳೆಹೊಟೆ ಶಿಕ್ಷೆ	ಮಾರ್ಚ್ 19
ಹೋಳಿ ಹುಣ್ಣಿಮೆ - ಬಿಜ್ಜಳನ ವಧೆ	ಮಾರ್ಚ್ 20
ಪಾಡ್ಯ - ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ	ಮಾರ್ಚ್ 21
ಕಲ್ಯಾಣ ಕ್ರಾಂತಿ ಸಂಸ್ಮರಣೋತ್ಸವ	ಮಾರ್ಚ್ 22
ಶೂನ್ಯಪೀಠ ಸ್ಥಾಪನೆ, ಅಲ್ಲಮ ಪ್ರಭು ಜಯಂತಿ, ಯುಗಾದಿ ★	ಏಪ್ರಿಲ್ 5
ಅಕ್ಕಮಹಾದೇವಿ ಜಯಂತಿ (ಚೈತ್ರ ಪೌರ್ಣಮಿ)	ಏಪ್ರಿಲ್ 18
ಮಡಿವಾಳ ಮಾಚಿದೇವ ಜಯಂತಿ (ಕಾಯಕ ದಿನ) ★	ಮೇ 1
ಬಸವ ಜಯಂತಿ ★	ಮೇ 6
ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ	ಜೂನ್ 30
ಬಸವ (ಲಿಂಗೈಕ್ಯ ಸಂಸ್ಮರಣೆ)ಪಂಚಮಿ	ಆಗಸ್ಟ್ 4
ನೀಲಮ್ಮ (ಲಿಂಗೈಕ್ಯ ಸಂಸ್ಮರಣೆ) ಷಷ್ಠಿ	ಆಗಸ್ಟ್ 5
ಸ್ವಾತಂತ್ರ್ಯೋತ್ಸವ ★	ಆಗಸ್ಟ್ 15
ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಜಯಂತಿ ★	ಸೆಪ್ಟೆಂಬರ್ 1
(ಗಣೇಶ ಚೌತಿ)ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ ★	ಸೆಪ್ಟೆಂಬರ್ 1
ಗಾಂಧಿ ಜಯಂತಿ ★	ಅಕ್ಟೋಬರ್ 2
ಅಕ್ಕನಾಗಲಾಂಬಿಕಾ ಸಂಸ್ಮರಣೆ	ಅಕ್ಟೋಬರ್ 8
ಉಳವಿ ಚೆನ್ನ ಬಸವೇಶ್ವರರ ಜಯಂತಿ (ದೀಪಾವಳಿ ಪಾಡ್ಯ) ★	ಅಕ್ಟೋಬರ್ 28
ಕನ್ನಡ ರಾಜ್ಯೋತ್ಸವ ★	ನವೆಂಬರ್ 1
ಉಳವಿ ಚನ್ನಬಸವೇಶ್ವರರ ಲಿಂಗೈಕ್ಯ ಸಂಸ್ಮರಣೆ	ನವೆಂಬರ್ 11

★ ಸರ್ಕಾರಿ ರಜಾದಿನ

Digitalized by e-Sahithya Documentation Forum
Sponsored by Sarayu Foundation Trust